ಮಾಡಿದ್ದಾರೆ ಅಲ್ಲಿ ಹೋಗಿ ಅದನ್ನೇ ಆ ಕಡೆಯವರಿಗೆ ಹೇಳುತ್ತಾರೆ. ಇಂಥ ಪರಿಪಾಠವೇನಿವೆ ಅದಕ್ಕೆ ಪಕ್ಷ ಬದಲಾವಣೆ ಎಂದು ಹೇಳುವುದು. ಅದನ್ನು ಎಲ್ಲರೂ ಹೇಳುತ್ತಿದ್ದಾರೆ. ಇದಾಗ ಬಾರದು ನಾವು ಸತ್ಯಾಂಶಗಳನ್ನು ಪರೀಕ್ಷೆ ಮಾಡಿ ರಚನಾತ್ಮಕವಾದ ಟೀಕೆಗಳನ್ನು ಮಾಡೋಣ. ನಾವು ಕೂಡ ಕಾಂಗ್ರೆಸ್ಸಿನವರಾದ ಮಾತ್ರಕ್ಕೆ ನಾವು ಮಾಡಿದ ತಪ್ಪುಗಳನೆಲ್ಲ ಮುಚ್ಚಿಟ್ಟುಕೊಳ್ಳಬೇಕೆಂಬ ಉದ್ದೇಶವಿಲ್ಲ. ಆ ರೀತಿ ನಾವು ಮಾಡುತ್ತಿಲ್ಲ. ಇನ್ನು ಮೇಲಾದರೂ ಮಾನ್ಯ ವಿರೋಧ ಪಕ್ಷದ ಸದಸ್ಯರು ರಚನಾತ್ಮಕವಾದ ಟೀಕೆಗಳನ್ನು ಮಾಡಲಿ ಎಂದು ನಾನು ಹಾರೈಸುತ್ತೇನೆ.

ಕೊನೆಯದಾಗಿ ಆಡಳಿತದಲ್ಲಿ ಕೃಪಾವಿನಿಯೋಗ ನಿಲ್ಲಬೇಕು. ದಾಕ್ಷಿಣ್ಯಪರತೆ ಹೋಗಬೇಕು. ಹುದ್ದೆಗಳಿಗೆ ನೇಮಕ, ವರ್ಗಾವರ್ಗಿ, ಪುನರ್ನೇಮಕ ಇವುಗಳಲ್ಲಿ ಮುಖ ನೋಡಿ ಮಣೆಹಾಕುವುದು ಆದಷ್ಟು ತಪ್ಪಬೇಕು. ನೌಕರರ ಆಡಳಿತ ಲೋಪದೋಷಗಳ ವಿಚಾರಣೆ ಇದ್ದರೆ ಅಂತಹವುಗಳು ಆದಷ್ಟು ತುರ್ತು ತೀರ್ಮಾನವಾಗಬೇಕು. ಇದನ್ನು ಮೈಸೂರು ವಿಜಿಲೆನ್ಸ್ ಕಮಿಟಿಯವರೇ ಸರಕಾರಕ್ಕೆ ವಿಳಂಬವಾಗಬಾರದೆಂದು ತಿಳಿಸಿದ್ದಾರೆ. ಆದರೂ ಗಣನೀಯವಾಗಿ ತೀರ್ಮಾನ ಕೈಕೊಳ್ಳುವುದಕ್ಕೆ ತುಂಬಾ ವಿಳಂಬವಾಗುತ್ತಿರುವುದಕ್ಕೆ ಎಷ್ಟೋ ಉದಾಹರಣೆಗಳಿವೆ. ವಿಳಂಬ ನೀತಿಯಿಂದ ಸಂಬಂಧ ಪಟ್ಟವರಿಗಾಗುವ ಕಷ್ಟನಷ್ಟಗಳಿಗೆ ಹೊಣೆ ಯಾರು ? ಎಂದು ಸಾಭಾವಿಕ ವಾಗಿ ಪ್ರಶ್ನಿಸಬೇಕಾಗುತ್ತದೆ. ಇಂತಹ ವಿಚಾರಗಳನ್ನು ಸದಸ್ಯರು ಸರಕಾರದ ಗಮನಕ್ಕೆ ತಂದರೆ ಉತ್ತರ ಸರಕಾರಿ ಭಾಷಾಪ್ರಯೋಗ ಸಲ್ಲದು ಎಂದು ಬಹು ವಿನಯದಿಂದ ಸಲಹೆ ಮಾಡುತ್ತಿದ್ದೇನೆ.

ಇನ್ನೊಂದು ಮಹತ್ವದ ವಿಚಾರ ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಮಹಿಳೆಯರಿಗೆ ನೌಕರಿ, ಸ್ಥಾನ—ಮಾನಗಳನ್ನು ಕೊಡುವ ಬಗ್ಗೆ ಸರಕಾರ ನಿರ್ಲಕ್ಷಿಸುತ್ತಾ ಬಂದಿದೆ ಎಂದು ವಿಷಾದದಿಂದ ಹೇಳುತ್ತೇನೆ. ಖಾಸಗಿಯವರಿಗೆ ಕೊಡುವ ಗೌರವ ಸ್ಥಾನಮಾನಗಳು ಅಂದರೆ—ಟ್ರಸ್ಟ್‌ಬೋರ್ಡ್, ಹೌಸಿಂಗ್‌ಬೋರ್ಡ್, ಖಾದಿಬೋರ್ಡ್ ವಗೈರೆ ಪುರುಷರಿಗೇ ಮೀಸಲಾಗಿ ಅನೇಕರು ಖಾಯಂ ಆಗಿ ಇದ್ದಾರೆ. ಇದು ಅನ್ಯಾಯ. ದೇಶದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿರುವವರನ್ನು ನಿರ್ಲಕ್ಷಿಸುವುದು ಅನ್ಯಾಯವೆಂದು ಹೇಳಬಯಸುತ್ತೇನೆ. "ಸತಿಗಣದ ನಿಸ್ವಾರ್ಥ ಸೇವೆಯು ಭಾರವಿಹುದು ಪುರುಷರ ಭುಜದಮೇಲೆ, ಇದರಿಂದ ವಿಮೋಚನೆಯಾಗದತನಕ ಸರ್ಕಾರ್ಯಂ ನಕೀರ್ತಿಮರ್ಹತಿ" ಎಂದು ಹೇಳಿ ಆಯವ್ಯಯವನ್ನು ಸ್ವಾಗತಿಸುತ್ತೇನೆ.

CHAIR'S RULING *re*: STATEMENT OF THE MINISTER FOR CO-OPERATION IN THE LEGISLATIVE COUNCIL.

MR. DEPUTY SPEAKER.—Before I call upon other hon'ble members, I will give the ruling on the privilege matter raised by Sri H. N. Nanje Gowda.

On March 2nd 1968 hon'ble Member Sri H. N. Nanje Gowda raised a question of privilege on the statement reported to have been made by the Minister for Development and Co-operation in the Ligislative Council on 29th February 1968 in which the Minister is reported to have said inter alia that the members of the opposition in the lower House were indulging in creating disturbances and confusion resulting in wastage of time. This statement is alleged to have been made by the Minister in the context of the availability of time for the discussion of the Mysore Panchayatraj Bill. Various arguments were advanced by the members of the opposition who supported the question of privilege. Several authorities were also cited. The Minister for Law and Parliamentary Affairs also cited authorities questioning the competence of this House to raise a question of privilege on the proceedings of the upper House.

(MR. DEPUTY SPEAKER)

I have carefully examined the matter of privilege raised by Sri Nanje Gowda taking exception to the statement made by the Minister for Development and Co-operation in the Legislative Council. I have gone through the authorities cited by the Members of the opposition and the Minister for Parliamentary Affairs.

Article 194 of the Constitution of India provides for powers, privileges, immunities of the House of Legislatures and of the Members and Committees thereof. Clause 1 of this article provides for freedom of speech in the House. Clause (2) provides that what is said in the House cannot be questioned in a court of law ; clause (3) provides that the Legislature may legislate on the privileges. So far the privileges have not been codified. Till they are codified the power, privileges, etc., will be the same as those of the House of Commons. Therefore, under our Constitution, speech and action in Parliament are unquestioned and free. This freedom from external influence does not mean an unrestricted licence of speech within the walls of the legislature. The freedom of speech within the House conferred on the Members of the Legislature is subject to the Rules of Procedure and standing orders of the House. Each House has power to punish its Members for disorderly conduct and other contempts committed in the House while it is sitting. This power is vested in the House by virtue of its right to exclusive cognisance of matters arising within the House and to regulate its own internal concerns.

Indignities offered by words spoken or writings published reflecting on the character or proceedings of the House have been constantly punished by both the House of Lords and the House of commons upon the principle that such acts tend to obstruct the Houses in the performance of their functions by diminishing the respect due to them. Reflections upon the Members, particular individuals not being named or otherwise indicated are equivalent to reflections on the House. From this statement of law it is clear that reflections on the proceedings of the House should not be made. The question that now arises is whether this House can exercise its penal jurisdiction over the other House.

As stated earlier under our Constitution the powers, privileges etc., of our legislatures are the same as those of the House of Commons in England. In England the House of Commons and House of Lords have equal powers. Similarly in India the Legislative Assembly and the Legislative Council have equal powers. What transpires in one House cannot be questioned in another House. This principle has been very succinctly summarised by Hatsell in the following words.—

"The leading principle which appears to pervade all the proceedings between the two Houses of Parliament is that there shall subsist perfect equality with respect to each other; and that they shall be, in every respect totally independent of one another. From hence, neither House can claim, much

> less exercise, any authority over a member of the other; but if there is any ground of complaint against an act of the House itself, against any individual, or against any of the officers of either House, this complaint ought to be made to that House of Parliament where the offence is charged to be committed; and the nature and mode of redress or punishment; if punishment is necessary, must be determined upon and inflicted by them."

Thus no case of breach of privilege or contempt of the House can be found on a speech made by a member in the other House or in any State Legislature in India because the proceedings of each House of Parliament and all legislatures are privileges.

The Leader of the Opposition cited a case of a question of privilege raised in the House of Commons in which a member of the House of Lords was alleged to be guilty of breach of privilege. The case pointed out by the leader of the Opposition was raised in the House of Commons on 25th April, 1952. The complaint there was against the member of the House of Lords for his speech made outside the House (i.e. outside the House of Lords). On submission of an apology by the member concerned the matter was closed.

3-00 P. M.

Hon'ble Minister for Parliamentary Affairs quoted a ruling of the Speaker of Lok Sabha on 26th March, 1959 in which the Speaker held that a question of privilege could not be raise against the Chief Minister of Orissa for what he (Chief Minister) said in the Orissa Assembly. I will not quote that ruling in extenso. I shall, however, quote a recent ruling of the Lok Sabha :

> "On 6th June, 1967 the Speaker informed the House that he has received a notice of a question of privilege from Sri Sant Bux Singh, Dr. Ram Manohar Lohia, Sri Rabi Ray, members, on an allegation made by Sri Sheel Bhadra Yajee a member of Rajya Sabha on 30th May, 1967 during the course of a debate in Rajya Sabha and observed as follows : –
>
> Looking to the rules and procedures not only in this Parliament but in other Parliaments also I feel that the other House being equally sovereign it is not proper for us to refer the matter to a Privileges Committee here. I would only say that it is unfortunate that members make allegations against the members of the other House......I am not allowing the privilege motions to be referred to the Privileges Committee."

A similar case in which the Leader of the Opposition in Madras Legislative Council raised a question of privilege against the Speaker of the Madras Legislative Assembly for certain remarks the Speaker made

(MR. DEPUTY SPEAKER)

in the House occurred on 29th, June 1967. The Chairman referring to an earlier ruling of 1955 observed as follows on 19th July 1967.

"As I am very anxious to maintain an atmosphere of cordiality and mutual understanding between the two Houses and their Presiding Officers, I have decided not to take further action in the matter. My Hon'ble Colleague in the other House will agree with me in the matter of maintaining cordiality, good relationship and mutual understanding should exist. The Chairman withheld his consent for raising the matter of privilege."

In view of the foregoing rulings of the Presiding Officers and the statement of law, I cannot give my consent to the matter to be raised as a question of privilege, however regrettable the words alleged to have been uttered by the Minister may be. That the words were uttered by a Minister in his capacity as a Minister in the other House and that he was responsible to this House does not make any difference because whatever is said and done by a Minister in that House becomes part and parcel of the proceedings of that House and cannot be questioned here, so far as the question of privilege is concerned. I would appeal to the members that reflections on the proceedings of one House should not be cast by members of the other House.

SRI H. SIDDAVEERAPPA (Harihara).—Sir, I am not raising any discussion on the ruling you have given; I bow down to it. But the point I would like to make is that in view of the clear finding you have given that the incident is regrettable and that it is tantamount to a reflection of this House when the statement was made by the Minister in the other House, may I request you with all humility that the entire proceedings may be sent to the Chairman of the other House so that he may be seized of the mttter and examine and see whether, if so, to what extent any action is necessary against the concerned Minister who uttered those words. I say this because this is likely to raise very serious and dangerous precedents unless and entil this matter is set at nought by taking suitable cognisance of this matter by the other House. Though no doubt we cannot raise any privilege motion according to your ruling, the Chairman of the other House where that offence or incident has occurred can rightly take cognisance of it and take suitable action in the matter. I therefore feel that the proceedings of this House may be submitted to him for taking such action as he deems fit.

MR. DEPUTY SPEAKER.—I will consider it.

† SRI G. CHANDRAKANTH.—Mr. Speaker, Sir, many of the hon. Members of this House have spoken at great length on the budget presented to this House by the Hon'ble, the Finance Minister. Therefore without wasting much of the precious time of the House, I would

like to offer my criticism on certain points of the budget presented for the year 1968-69. No doubt, it is a surplus budget but how far it is true and correct is a point to be judged. It is a surplus budget only for namesake. The Government is overburdened with borrowings and debts. The amount they give to the Government of India by way of debt servicing charges is more than they spend for development. More than that, for plans and development, Government is wholly relying on the borrowings from the people and from the Central Government.

[CHAIRMAN (SMT. NAGARATHNAMMA HIREMATH) in the Chair].

The budget is not a common man's budget as the people residing in this State are already overburdened with taxes No doubt, no additional taxes are imposed but still they are more than what they should be.

The main item of revenue relied upon is sales tax. By way of sales tax they are getting Rs. 28 crores and it is expected to go up to Rs. 32 crores. If there is possibility of getting additional revenue by way of sales tax, the whole credit does not go to the Government because they will be getting it only due to the efforts of the officials concerned. The possibility of gettieg more sales tax revenue definitely means more burden on the common man. They have gone to the extent of saying that because of the efficient management and efficint department this revenue will go up; I wholly deny it and do not agree with it. As a matter of fact, the additional yield is not due to the department but due to the soaring prices. While comparing the prices of this year with the prices of last year, it will be seen that they were actually two or three times more and therefore the additional yield from sales tax is nothing and Government is not at all entitled to credit on this account.

There is an Intelligence Section in the Sales Tax Department which is mainly engaged in finding out the tax evaders. In fact, this department has totally failed and has not been able to eradicate or minimise the tax evasion. On the contrary, this department is the most corrupt department which is always engaged in making money rather than add to the Government revenue. If this were to be the state of affairs, I am of the opinion that this department should be abolished forthwith so that the amount that is required for running this department may at least be saved.

No doubt prohibition has been scrapped but it is not scrapped throghout the State and the additional yield they are expecting is to the tune of Rs. 11 crores.

ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಸಭೆಯಲ್ಲಿ ಮಂತ್ರಿಗಳೊಬ್ಬರೂ ಇಲ್ಲವಲ್ಲಾ.

Sri DIGAMBAR RAO B. KALMANKAR (Aland).—It is really objectionable that there is no Minister present here. The fact that when the budget is being discussed there is no Minister present here shows how far they are responsible.

Sri C. K. RAJAIAH SHETTY (Chicknaikanahalli).—May I know, Madam, whether the Finance Minister is in the headquarters ?

ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ಟೀ ರೀಸೆಸ್ ಇಲ್ಲದೆ ಸದಸ್ಯರು ಇಲ್ಲಿರುವಾಗ ಜವಾಬ್ದಾರಿಯುತರಾದ ಮಂತ್ರಿಗಳೂ ಕೂಡ ಇಲ್ಲಿ ಇದ್ದೇತೀರಬೇಕು, ಅವರು ಎಲ್ಲರೂ ಕಾಫಿ ಕುಡಿಯಲು ಹೋಗುವುದಕ್ಕೆ ತಾವು ಅವಕಾಶ ಕೊಡಬಾರದು.

ಚೇರ್ಮನ್‌ರವರು.—ಮಂತ್ರಿಗಳು ಇದ್ದಾರೆ, ಅವರು ಬರುತ್ತಾರೆ. ನೀವು ಕುಳಿತುಕೊಳ್ಳಿ.

Sri G. CHANDRAKANTH.—In Bidar there is still prohibition and by scrapping it I am sure they will be able to add more to the Exchequer of this State. While so doing, in several other places also, the Government have definitely given a chance to people in whom they are interested to make monopoly in big areas. If this practice is discontinued and a shop is made a unit, I am sure there will be additional income at least to the extent of about Rs. 10 crores. The big contractor who purchase big areas in auction, are not selling pure toddy. There have been several cases of deaths by consuming such toddy as stated by my friend Sri Shettar, in Hubli and other places, at Bellary even. These auction purchasers are mixing injurious materials. The Department should see that pure toddy is sold. To my surprise, it has totally failed. Due to this mis-happening, there are frequent deaths.

The Government is not serious about things; they follow different policies at different places. Just before the General Elections, they were proud enough to say that they will abolish the land revenue. Are they sticking up to their promise? But, in addition to land revenue, there is also the agricultural income-tax. When we pressed for abolition of land revenue, they seek some other source of income and say that it has been further enhanced and agricultural income tax is imposed. There is no relief to agriculturists. At this rate, a day will come when they say that the lands will be taken up by the Government and cultivation will be done by them. This is, in fact, opposed in toto to the socialistic pattern of society which they are thinking of establishing. In fact, 'land to the tiller' should be the slogan of the Government.

Coming to the subject of law and order, I am really surprised about the situation in Mysore. There have never been any communal riots in the past in Mysore State. But, recently there have been several communal riots like the one that took place in Chickmagalur and Mangalore. In these cases, whenever we press for judicial enquiry to see that these communal elements are crushed, they have been just overlooking and not caring to it. If this continues to be the state of affairs, I am afraid, communal rioting may still go up. I wish that wherever such occurances have taken place, Committees should be appointed, matter enquired into and communal elements be rather down-trodden.

It is a welcoming that the Government has come forward to spend 36 Crores of rupees towards education. It is really very fine. How the standard of education has been going down day by day has been brought before the Upper House by my friend, Sri Y. S. Patil, which definitely is an eye-opener to the Government. I would like to deal with one

important point with regard to the Hyderabad–Karnatak area. Hyderabad–karnatak area is a backward area. Especially in Bidar, a common man does not get even drinking water. I do not know what improvements the Government have done to provide drinking water. Partiality is shown against Hyderabad–karnatak area. I would like to make this point clear by giving figures. For instance, out of Rs. 32,18,000 allocation to the University education and grant-in-aid for non-Government Arts Colleges, Hyderabad-karnatak area gets only Rs. 4,53,500, whereas the Bombay-karnatak area gets about Rs. 14,58,500. It is because many of the Ministers happen to come from Bombay-karnatak area. The Government of India, have also declared on surveying the area, that Bidar is the most backward district in the whole of Mysore State. I request that special steps should be taken to bring the area to the level of other districts. I do not find any allocation made to bring Bidar district to the level of other districts. Therefore, I vehemently oppose this Budget.

ಶ್ರೀ ಎ. ಆರ್. ಬದರಿನಾರಾಯಣ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷಣಿಯರೇ, ನನಗೆ ಇಲ್ಲಿ ಬಹಳ ವಿಚಾರಗಳನ್ನು ಈ ದಿವಸ ಮಾತನಾಡಬೇಕೆಂಬ ಆಸೆಯಿತ್ತು. ಆದರೆ ಈಗ ಇಲ್ಲಿ ಯಾವ ಒಬ್ಬ ಮಂತ್ರಿಗಳೂ ಇಲ್ಲದೆ ಇರುವುದರಿಂದ ನಾನು ಇಲ್ಲಿ ಏನೇ ಮಾತನಾಡಿದರೂ ಅದರಿಂದೇನೂ ಪ್ರಯೋಜನವಿಲವಾದುದರಿಂದ ನಾನು ಏನೂ ಭಾಷಣ ಮಾಡಬಾರದೆಂದು ತೀರ್ಮಾನ ಮಾಡಿಕೊಂಡಿದ್ದೇನೆ. ಇಷ್ಟನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸಿ ಕುಳಿತುಕೊಳ್ಳುತ್ತೇನೆ.

ಶ್ರೀ ಅಜೀಜ್‌ಸೇಟ್.—ಅಮ್ಮಅವರೇ, ನಾನು ಈ ಹಿಂದೆ ಹೇಳಿದ್ದು ಇದಕ್ಕಾಗೇ.

Sri DIGAMBAR RAO B. KALMANKAR.—It is a very important matter. We cannot understand why we should speak here when there is no Minister to hear what we say. I request the Speaker to pull up the Ministers.

ಶ್ರೀ ಅಜೀಜ್‌ಸೇಟ್.—ನಾನು ಸ್ವಲ್ಪಹೊತ್ತಿಗೆ ಹಿಂದೆ ಏನು ಹೇಳಿದ್ದೆನೋ ಅದೇ ಕಾರಣಕ್ಕಾಗಿ ತಮ್ಮ ಪಾರ್ಟಿಯ ಶ್ರೀ ಬದರಿನಾರಾಯಣ್ ಅವರು ಅಂಡರ್ ಪ್ರೊಟೆಸ್ಟ್ ಎಂಬ ಶಬ್ದಗಳನ್ನು ಮಾತ್ರ ಹೇಳದೆ......

ಶ್ರೀ ಎ. ಆರ್. ಬದರಿನಾರಾಯಣ್.—It serves no purpose ಎಂದು ಹೇಳಿದೆ.

ಶ್ರೀ ಅಜೀಜ್‌ಸೇಟ್.—ಮಂತ್ರಿಗಳು ಇಲ್ಲದೆ ಇಲ್ಲಿ ಕೆಲಸಗಳು ನಡೆಯಬೇಕು, ಅಂದರೆ ಇದೇನು ರಾಜ್ಯ? ಇವರಿಗೆ ನಾವು ಸಂಬಳ ಕೊಡಬೇಕು, ಭತ್ಯಗಳನ್ನು ಕೊಡಬೇಕು, ಕಾರುಗಳನ್ನು ಕೊಡಬೇಕು, ಏತಕ್ಕೆ?

ಛೇರ್ಮನ್‌ಅವರು.—ನಾನು ಈಗಾಗಲೇ ಮಂತ್ರಿಗಳಿಗೆ ಬರಲು ಹೇಳಿ ಕಳುಹಿಸಿದ್ದೇನೆ. ಅವರು ಇಲ್ಲಿ ಇರಬೇಕು, ಇಲ್ಲಿ ನಡೆಯುತಕ್ಕ ಭಾಷಣಗಳನ್ನು ಕೇಳಬೇಕು, ಅದಕ್ಕೆ ಸರಿಯಾದ ಉತ್ತರಗಳನ್ನು ಕೊಡಬೇಕು ಅನ್ನುವುದನ್ನು ನಾನೂ ಒಪ್ಪುತ್ತೇನೆ. ಮಾನ್ಯ ಸದಸ್ಯರು ಸಮಾಧಾನದಿಂದ ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಅಜೀಜ್‌ಸೇಟ್.—ಅವರು ಬರುವತನಕ ಹೌಸನ್ನು ಅರ್ಧಗಂಟೆ ಕಾಲ ಅಡ್‌ಜರ್ನ್ ಮಾಡಿ ಅವರು ಬರುವವರೆಗೂ ನಾವಿಲ್ಲಿ ಕಾಯುವುದಕ್ಕಾಗುವುದಿಲ್ಲ. ನಮಗೇನು ಮಾನ ಮರ್ಯಾದೆಗಳಿಲ್ಲವೇ?

ಶ್ರೀ ವಾಟಾಳ್‌ನಾಗರಾಜ್.—ತಾವು ಅರ್ಧ ಗಂಟೆ ಕಾಲ ಸಭೆಯನ್ನು ಮುಂದಕ್ಕೆ ಹಾಕಿ, ಅವರೂ ಬರಲಿ. ಅನಂತರ ಕಾರ್ಯಕಲಾಪಗಳನ್ನು ಮುಂದುವರಿಸೋಣ.

ಛೇರ್ಮನ್ ಅವರು.—ಇಲ್ಲಿ ಈಗ ಉಪಸಚಿವರು ಇದ್ದಾರೆ. ಸಚಿವರನ್ನು ಬರುವಂತೆ ಹೇಳಿ ಕಳುಹಿಸಿದ್ದೇನೆ. ನೀವು ಭಾಷಣವನ್ನು ಮುಂದುವರಿಸಿ.

ಶ್ರೀ ವಿ. ಮುನಿಯಪ್ಪ (ಬಾಗೇಪಲ್ಲಿ).—ಅಜೀಜ್ ಸೇಟ್ ಅವರೇ ನೀವು ಕುಳಿತುಕೊಳ್ಳಿ. ಅವರು ಭಾಷಣ ಮಾಡುತ್ತಾರೆ.

ಶ್ರೀ ಅಜೀಜ್ ಸೇಟ್.—ನಿಮ್ಮ ಡೋರ್ ಬಜಾಯಿಸುವುದನ್ನು ಕೇಳುವುದಕ್ಕೆ ನಾವು ಇಲ್ಲಿ ಕೂತಿಲ್ಲ. 25 ರೂಪಾಯಿಗಳನ್ನು ದಿನವೂ ತೆಗೆದುಕೊಂಡು ಸುಮ್ಮನೆ ನೀವು ಕೂತಿದ್ದೀರಿ. ಮಾನ್ಯ ಶ್ರೀ ಬದರೀನಾರಾಯಣ್ ಅವರು ಮಾತನಾಡುವುದಿಲ್ಲವೆಂದು ಈ ಸಭೆಯಿಂದ ರಿಟೈರ್ ಆಗಿ ಹೋಗಿರುತ್ತಾರೆ.

ಛೇರ್‌ಮನ್‌ಅವರು.—ಅವರೇನೂ ಇನ್ನೂ ರಿಟೈರ್ ಆಗಿಲ್ಲ.

ಶ್ರೀ ಅಜೀಜ್‌ಸೇಟ್.—ಮಾನ್ಯಸದಸ್ಯರು ಕೋಪಿಸಿಕೊಂಡು ಮಾತನಾಡದೆ ಇದ್ದುದು ಸರಿಯೋ ಅಥವಾ ಈಗ ಮಾತನಾಡುವುದು ಸರಿಯೋ ? ಇದರಲ್ಲಿ ಒಂದು ರೀತಿ ನ್ಯಾಯಬದ್ಧವಾಗಿ ನಡೆಯಬೇಕು. ತಕ್ಕಡಿ ಮೇಲೆ ಇದೆ.

ಶ್ರೀ ಎ. ಆರ್. ಬದರೀನಾರಾಯಣ್.—ಮಾನ್ಯ ಶ್ರೀ ಅಜೀಜ್ ಸೇಟ್ ಅವರು ಹೇಳಿದ್ದು ಸರಿಯಲ್ಲ. ನಾನು ಕೋಪದಿಂದ ನಿಜವಾಗಿ ಭಾಷಣವಾಡದೆ ನಿಲ್ಲಿಸಲಿಲ್ಲ. ಇಲ್ಲಿ ಭಾಷಣ ಮಾಡಿದರೂ ಉಪಯೋಗ ಏನೂ ಇಲ್ಲ, ಏತಕ್ಕೋಸ್ಕರ ಸುಮ್ಮನೆ ಮಾತನಾಡಬೇಕೆಂದು ಬಿಟ್ಟೆನೇ ಹೊರತು ಇನ್ನು ಏನೇನೂ ಇಲ್ಲ.

ಛೇರ್‌ಮನ್ ಅವರು.—ತಾವು ಭಾಷಣವನ್ನು ಮುಂದುವರಿಸಿ.

ಶ್ರೀ ಎ. ಆರ್. ಬದರೀನಾರಾಯಣ್.—ಮಾನ್ಯ ಅಧ್ಯಕ್ಷಣಿಯವರೇ, ಪ್ರಪ್ರಥಮವಾಗಿ ನಾನು ಮಾತನಾಡಬೇಕಾದಂಥಾದ್ದು ಏನೂ ಇಲ್ಲವೆಂದು ಹೇಳುತ್ತೇನೆ. ತಾವು ನನಗೆ ಅವಕಾಶಕೊಟ್ಟಾಗ್ಗೆ ಕುಳಿತುಕೊಂಡಿದ್ದಕ್ಕಾಗಿ ನಾನು ಬಹಳ ವ್ಯಥೆಪಡುತ್ತೇನೆ. ಕಾರಣವಿಷ್ಟೆ. ಇಲ್ಲಿ ನಾವು ಹೇಳತಕ್ಕ ವಿಚಾರಗಳನ್ನು ಮಾನ್ಯ ಮಂತ್ರಿಗಳು ಕೇಳಿ ಅದರ ಮೇಲೆ ಸೂಕ್ತವಾದ ಜವಾಬುಗಳನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಮಾತನಾಡತಕ್ಕದ್ದು ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಆದರೆ ಕೇವಲ ಶ್ರೀ ರಾಮಕೃಷ್ಣ ಉಪಮಂತ್ರಿಗಳು ಮಾತ್ರ ಇದ್ದುದು, ಬೇರೆ ಯಾರೂ ಇಲ್ಲದೇ ಇದ್ದುದರಿಂದ ನಾನು ಹೆಚ್ಚು ಇಲ್ಲಿ ಮಾತನಾಡುವುದು ಬೇಕಿಲ್ಲವೆಂದು ತೀರ್ಮಾನಮಾಡಿದೆ. ಆದರೆ ಪುನಃ ತಾವು ನನಗೆ ಅವಕಾಶ ಕೊಟ್ಟಿದ್ದರಿಂದ ತಮಗೆ ಮೊಟ್ಟಮೊದಲನೆಯದಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಆಯವ್ಯಯಪಟ್ಟಿಯನ್ನು ನಾನು ಬಹಳ ಸಂತೋಷದಿಂದ ಸ್ವಾಗತಿಸುತ್ತಾ ಅವರ ಭಾಷಣಕ್ಕೆ ಮತ್ತು ಅವರ ಆಯವ್ಯಯಪಟ್ಟಿಗೆ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಅವರು ಈ ವರ್ಷದ ಆಯವ್ಯಯದ ವಿಚಾರವಾಗಿ ಬಹಳ ಚೆನ್ನಾಗಿ ಈ ಸಭೆಯ ಮುಂದೆ ಈ ದೇಶದ ಒಂದು ಹಿನ್ನೆಲೆ, ಈ ರಾಜ್ಯದ ಆಡಳಿತದಲ್ಲಿರತಕ್ಕ ತೊಂದರೆಗಳು, ಈಗ ಯಾವ ರೀತಿಯಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಬೇಕು ಎನ್ನುವುದು, ನಮ್ಮ ರಿಸೋರ್ಸಸ್ ಬಗ್ಗೆ ಹೇಗೆ ಮುಂದಿನ ಪ್ರಯತ್ನವನ್ನು ಮಾಡಬೇಕು ಎನ್ನುವ ವಿಷಯದಲ್ಲಿ ಹೇಳಿದ್ದು ಅಲ್ಲದೆ, ನಮ್ಮ ಭವಿಷ್ಯ ಬಹಳ ಆಶಾದಾಯಕವಾಗಿದೆ ಎಂದು ಹೇಳಿದ್ದಾರೆ. 1970ನೇ ಇಸವಿ ವೇಳೆಗೆ ನಾವು ಆಹಾರದಲ್ಲಿ ಸ್ವಪರಿಪೂರ್ಣತೆಯನ್ನು ಹೊಂದುತ್ತೇವೆಂದು ಹೇಳಿದ್ದೂ ಅಲ್ಲದೆ, ಕೈಗಾರಿಕೆ ಹಾಗೂ ಇನ್ನೂ ಅನೇಕ ವಿಚಾರಗಳಲ್ಲಿ ಒಳ್ಳೆಯ ಪ್ರಗತಿಯನ್ನು ಕೆಲವು ವರ್ಷಗಳಲ್ಲಿಯೇ ಹೊಂದುತ್ತೇವೆಂದು ಹೇಳಿದ್ದನ್ನು ನೋಡಿದರೆ ಅವರಿಗೆ ಇರುವ ಆಶಾಭಾವನೆಯನ್ನು ನಾನೂ ಕೂಡ ಸಂತೋಷದಿಂದ ಸ್ವಾಗತಿಸುತ್ತೇನೆ. ಈ ದೇಶದ ಆಯವ್ಯಯಪಟ್ಟಿಯನ್ನು ವಿಮರ್ಶೆಮಾಡುವ ಸಂದರ್ಭದಲ್ಲಿ ಈಗ ಇಲ್ಲಿರತಕ್ಕ ಒಂದು ಸನ್ನಿವೇಶ, ಒಂದು ವಿದ್ಯಮಾನ ಇತರ ತೊಂದರೆಗಳು —ಇವೆಲ್ಲವನ್ನೂ ವಿಮರ್ಶೆಮಾಡಿ ನಾವು ಈ ಆಯವ್ಯಯ ಪಟ್ಟಿಯನ್ನು ಪೂರ್ಣವಾಗಿ ವಿಮರ್ಶೆಮಾಡಬೇಕಾಗುತ್ತದೆ ಅವರು ಹೇಳಿರುವ ಹಾಗೆ ಎರಡು ವರ್ಷಗಳಿಂದಲೂ ಮಳೆ ಇಲ್ಲದೆ ಯುದ್ಧದ ಒಂದು ತೊಂದರೆಯಿಂದ ಈಗಿರತಕ್ಕ ಅನಾನುಕೂಲಗಳು ಮತ್ತು ಅನೇಕವಾದಂಥ ರಿಸೆಷನರ್ ಇನ್‌ಫ್ಲೇಷನರಿ ಟೆಂಡೆನ್ಸೀಸ್ ವಿಷಯದಲ್ಲಿ ಬೇಕಾದಷ್ಟು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ನಮ್ಮ ದೇಶದ ಆಯವ್ಯಯಪಟ್ಟಿಯನ್ನು ವಿಮರ್ಶೆಮಾಡಬೇಕಾಗಿದೆ. ಮಳೆ ಎರಡು ವರ್ಷಗಳ ಕಾಲ ಬಹಳ ಕಡಿಮೆಯಾಯಿತು. ಅದು ಏತಕ್ಕೆ ಎಂಬುದನ್ನು ನಾವು ವಿಮರ್ಶೆಮಾಡಬೇಕಾಗಿದೆ. ಮಳೆ ಏತಕ್ಕೆ ಆಗಲಿಲ್ಲವೆಂಬುದು ದೈವ ನಿಯಾಮಕವಾಗಿದ್ದರೂ ಕೂಡ ನಾವು ಅದರಲ್ಲಿ ಸಲ್ಪಮಟ್ಟಿಗೆ ಅಪರಾಧಮಾಡಿದ್ದೇವೆಂದು ಹೇಳಬೇಕಾಗಿದೆ. ಮಲೆನಾಡಿನಲ್ಲಿ ಹಿಂದಿನಿಂದಲೂ ದಟ್ಟವಾದ ಅರಣ್ಯ ಪ್ರದೇಶಗಳಿದ್ದು ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಮಳೆ ಬಂದು ಅನೇಕ ಅಣಿಕಟ್ಟುಗಳಿಗೆ ಕೆರೆಕಟ್ಟುಗಳಿಗೆ ನೀರು ಬರುತ್ತಿದ್ದುದು ನಮಗೆಲ್ಲರಿಗೂ ಗೊತ್ತಿದೆ. ಆದರೆ

ಅರಣ್ಯನಶಿಸಿದ ಕಾರಣದಿಂದ ಈಗಿನ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದಲ್ಲಿ ಅರಣ್ಯ ಯಾವ ಮಟ್ಟಕ್ಕೆ ಬಂದಿದೆ ಎಷ್ಟರಮಟ್ಟಿಗೆ ಹಾಳಾಗಿದೆ ಎಂದು ನೋಡಿದರೆ ಬಹುಶಃ ಭವಿಷ್ಯ ನನ್ನ ದೃಷ್ಟಿಯಲ್ಲಿ ಒಂದು ರೀತಿ ಯಲ್ಲಿ ಜಿಗುಪ್ಸೆಯುಂಟುಮಾಡುವುದಾಗಿದೆ. ನಮ್ಮಲ್ಲಿ ಅರಣ್ಯ ಸಂಪತ್ತು ಬಹಳವಾಗಿ ನಾಶವಾಗು ತ್ತಿದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಂದ ನ್ಯಾಯವಾಗಿಯೂ ಕೂಡ ಅರಣ್ಯಸಂಪತ್ತು ಹೋಗುವುದಾದರೆ. ಆ ಜಮೀನುಗಳನ್ನು ಜಮೀನುಮಾಡುವವರಿಗೆ ಹಾಗೂ ಭೂಹೀನರಿಗೆ ಕೊಡು ವುದರಿಂದ, ಟ್ರಾನ್ಸ್‌ಮಿಷನ್ ಲೈನ್ಸ್ ಮತ್ತು ಇತರೇ ಕಾರಣಗಳಿಂದ ಅರಣ್ಯ ನಾಶವಾಗುವುದಾದರೆ ಅರಣ್ಯ ಸಂಪತ್ತನ್ನು ಕಾಪಾಡುವ ವಿಧ ಹೇಗೆ? ಬಹುಶಃ ಇನ್ನೂ ಅನೇಕ ಕಾರಣಗಳಿಂದ ಅರಣ್ಯ ಸಂಪತ್ತೆಲ್ಲಾ ನಾಶವಾಗುತ್ತಾ ಇದೆ. ಇಲ್ಲಿ ಬಹುಶಃ ಅರಣ್ಯ ಮಂತ್ರಿಗಳು ಇದ್ದಾರೆ. ಅವರಿಗೆ ಅನೇಕ ಸಾರಿ ಈ ವಿಚಾರವನ್ನು ಹೇಳಿದ್ದೇನೆ. ಈ ಸಭೆಯಲ್ಲಿಯೂ ಹೇಳಿದ್ದೇನೆ. ಆದರೂ ಅರಣ್ಯದ ನಾಶ ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತಾ ಇದೆ. ಈಗ ಒಣಗಿದ ಸೌದೆ ಕಡಿಯುವುದಕ್ಕಾಗಿ ಲೈಸೆನ್ಸ್ ಕೊಡುತ್ತೀರಿ ಅಲ್ಲಿ ಈಗ ಏನಾಗಿದೆ ಎಂದರೆ ಒಣಗಿದ ಸೌದೆಯನ್ನು ತೆಗೆದುಕೊಳ್ಳುವುದಕ್ಕೆ ಬದಲು ಹಸೀ ಸೌದೆಯನ್ನು ಕಡಿದು ಕಾಡು ಇತ್ತೀಚೆಗೆ ಬಹಳವಾಗಿ ನಿರ್ಮೂಲವಾಗುತ್ತಿದೆ. ಒಣ ಗಿದ ಸೌದೆಯನ್ನು ಕಡಿಯುತ್ತೇವೆಂದು ಲೈಸೆನ್ಸ್ ತೆಗೆದುಕೊಂಡು ಹಸಿ ಸೌದೆಯನ್ನು ಕಡಿಯು ತ್ತಿದ್ದಾರೆ. ಹೀಗಾಗಿ ಕಾಡು ಬಹಳ ದೊಡ್ಡ ಪ್ರಮಾಣದಲ್ಲ ಹಾಳಾಗುತ್ತಿದೆ. ರೈಲ್ವೆಗಳ ಮೂಲಕ ದಾವಣಗೆರೆ, ಬೆಂಗಳೂರು ಮುಂತಾದ ಇತರೇ ಪ್ರದೇಶಗಳಿಗೆ ಈ ಸೌದೆ ಸಾಗುತ್ತಿದೆ. ಅದೂ ಅಲ್ಲದೆ ಮಲೆನಾಡಿನವರಿಗೆ ಹಿಂದಿನ ರೂಲ್ಸ್ ಪ್ರಕಾರ ಪ್ರಿವಿಲೇಜಸ್ ಕೊಡುತ್ತಾರೋ ಇಲ್ಲವೋ ಎಂದು ಅಲ್ಲಿನವರು ಕಾದು ನೋಡುತ್ತಿದ್ದಾರೆ. ಒಟ್ಟಿನಲ್ಲಿ ಮಲೆನಾಡಿನವರು ಬಹಳ ಕಷ್ಟದಲ್ಲಿ ದ್ದಾರೆ. ಅವರು ಬಹಳ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಅವರಿಗೆ ಹೆಚ್ಚಿನ ರಿಯಾಯಿತಿಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ಹಿಂದೆ ಮಲೆನಾಡಿನವರಿಗೆ ಕೊಡಬೇಕಾದ ಹಕ್ಕುಬಾಧ್ಯತೆ ಗಳಿಗನುಗುಣವಾಗಿ ಕೆಲವು ನಿಯಮಗಳಿದ್ದುವು. ಆ ಪ್ರಕಾರ ಅವರಿಗೆ ಕೆಲವು ರಿಯಾಯಿತಿಗಳನ್ನು ಕೊಡುತ್ತಾ ಇದ್ದರು. ಬಡವರು ಒಳ್ಳೆಯ ಕೆಲಸಗಳಿಗೆ ಅವನ್ನು ನ್ಯಾಯವಾಗಿ ಉಪಯೋಗಿಸ ಬೇಕಾದರೆ ಈಗ ಆ ರಿಯಾಯಿತಿಗಳನ್ನು ಕೂಡಲೇ ಜಾರಿಗೆ ಕೊಡಬೇಕು. ಆದರೆ ಇದು ಬಹಳ ಮಟ್ಟಿಗೆ ದುರುಪಯೋಗವಾಗಿ ಮಲೆನಾಡು ರೈತರ ಹಕ್ಕುಬಾಧ್ಯತೆಗಳಿಗೆ ಧಕ್ಕೆಯಾಗಿ ಅನೇಕ ಎಕರೆ ಗಳಷ್ಟು ಕಾಡು ಪ್ರದೇಶದ ನಾಟಾಗಳನ್ನು ಕಡಿದು ಬಹಳವಾಗಿ ಅನ್ಯಾಯವಾಗುತ್ತಾ ಇದೆ. ಇದನ್ನು ನಾನೇ ಸ್ವತಃ ನೋಡಿದ್ದೇನೆ. ಆದ್ದರಿಂದ ಮಲೆನಾಡು ಪ್ರದೇಶದ ರೈತರ ಹಕ್ಕು ಬಾಧ್ಯತೆ ಗಳ ರೂಲ್ಸ್ ಪ್ರಕಾರ ಅವರಿಗೆ ನ್ಯಾಯವಾಗಿ ದೊರಕಬೇಕಾದ ಸೌಲಭ್ಯಗಳನ್ನು ಕೂಡಲೇ ಅವರಿಗೆ ಒದಗಿಸಿಕೊಡಬೇಕು. ಆದರೆ ಅವರೇ ಸ್ವೇಚ್ಛೆಯಾಗಿ ಹೋಗಿ ಕಾಡಿನಲ್ಲಿ ಮರಗಳನ್ನು ಕಡಿದು ತೆಗೆದು ಕೊಂಡು ಬರುವುದಕ್ಕೆ ಅವಕಾಶ ಕೊಡಕೂಡದು. ಅವರಿಗೆ ಬೇಕಾದಂಥ ಸಾಮಗ್ರಿಗಳನ್ನು ಎಷ್ಟು ಕಡಿಮೆ ಪ್ರಮಾಣದಲ್ಲಿ ಬೇಕೋ ಅಷ್ಟು ಪ್ರಮಾಣದಲ್ಲಿ ಸರ್ಕಾರದ ಡಿಪೋಗಳ ಮೂಲಕ ಕೊಡಲಿ. ಈ ಅರಣ್ಯ ಶಾಖೆ ಒಬ್ಬರ ಅಧಿಕಾರದಲ್ಲಿರಬೇಕು. ಅರಣ್ಯ ಕಡಿದು ಮರ ಮುಟ್ಟುಗಳನ್ನು ಕದ್ದು ತೆಗೆದುಕೊಂಡು ಬರುವುದಾದರೆ ಇದರಿಂದ ಬಹಳವಾಗಿ ಅನಾಹುತ ಗಳಾಗುತ್ತವೆ ಮತ್ತು ತೊಂದರೆಯಾಗುತ್ತದೆನ್ನುವ ದೃಷ್ಟಿಯಿಂದ ಹಾಗೂ ಅನೇಕರು ಅವರನ್ನು ದುರುಪಯೋಗಮಾಡುತ್ತಿರುವುದರಿಂದ ಸರ್ಕಾರದವರು ಎಂ. ಆರ್. ಪಿ. ರೂಲ್ಸನ್ನು ಅನುಸರಿಸಿ ಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ. ಸರ್ಕಾರದ ಡಿಪೋಗಳಲ್ಲಿ ಮರಮುಟ್ಟುಗಳನ್ನು ಆ ರೀತಿ ಮಾಡುವುದಾದರೆ ರೈತರಿಗೂ ಅನುಕೂಲವಾಗುತ್ತದೆ, ಸರ್ಕಾರಕ್ಕೂ ಅನುಕೂಲ ವಾಗುತ್ತದೆ, ಕಾಡು ಉಳಿದರೆ ಮಳೆ ಬರುವುದಕ್ಕೆ ಅನುಕೂಲವಾಗುತ್ತದೆ ಎಂಬುದನ್ನು ಈ ಸಂದ ರ್ಭದಲ್ಲಿ ನಾನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಏತಕ್ಕೋಸ್ಕರ ನಾನು ಈ ಕಾಡಿನ ವಿಚಾರ ವನ್ನು ಹೇಳುತ್ತೇನೆ ಎಂದರೆ, ನಮ್ಮ ರಾಜ್ಯದಲ್ಲಿ ಆಗುಂಬೆಯಲ್ಲಿ ಒಂದು ವರ್ಷಕ್ಕೆ 450 ಇಂಚು ಮಳೆ ಬರುತ್ತಿತ್ತು. ಇವೊತ್ತು ಅಲ್ಲಿಯೂ ಕೂಡ ಮಳೆ ಕಡಿಮೆ ಆಗಿದೆ. ಭಾರತದಲ್ಲಿ ಅತ್ಯಂತ ಹೆಚ್ಚಿನ ಮಳೆ ಆಗತಕ್ಕಂತ ಪ್ರದೇಶ ಚಿರಾಪುಂಜಿ. ಅದು ಮೊದಲನೆಯದು. ಎರಡನೆಯದು ಆಗುಂಬೆ. ಭಾರತದಲ್ಲಿ ಹೆಚ್ಚು ಮಳೆ ಆಗತಕ್ಕಂಥ ಪ್ರದೇಶದಲ್ಲಿ ಎರಡನೆಯ ಸ್ಥಾನವನ್ನು ಪಡೆದಿರತಕ್ಕ ಆಗುಂಬೆ ಯಲ್ಲೂ ಕೂಡ ಇವೊತ್ತು ರೆಕಾರ್ಡು ಮಾಡಿರತಕ್ಕದ್ದು 150 ಇಂಚು ಮಳೆ ಮಾತ್ರ ಬರುತ್ತದೆ ಎಂದು. ಹೀಗಿರಬೇಕಾದರೆ ಈ ಒಂದು ಲೆಕ್ಕವನ್ನು ಅನುಸರಿಸಿ ಬೇರೆ ಕಡೆಗಳಲ್ಲೂ ಕೂಡ ಬಹಳ ಕಡಿಮೆ ಮಳೆ ಆಗುತ್ತಿದೆ. ಈ ರೀತಿ ಮಳೆ ಕಡಿಮೆ ಆಗುವುದರಿಂದ ನಮ್ಮ ದೇಶ ಎಷ್ಟು ಅನಾಹು ತಕ್ಕೆ ತುತ್ತಾಗುತ್ತಿದೆ ಎಂದರೆ ದೊಡ್ಡ ದೊಡ್ಡ ಯೋಜನೆಗಳಾದ ಕೃಷ್ಣಾ ಯೋಜನೆ, ತುಂಗಭದ್ರಾ ಯೋಜನೆ ಮುಂತಾದ ಯೋಜನೆಗಳಲ್ಲಿ ನಿರ್ಮಿಸಿದ ಅಣೆಕಟ್ಟುಗಳಲ್ಲಿ ನಾವು ಎಷ್ಟೋ ಪ್ರಯತ್ನಗಳನ್ನು ಮಾಡಿ ನೀರನ್ನು ಶೇಖರಣೆ ಮಾಡಬೇಕೆಂದು ಕೆಲಸ ಮಾಡಿದರೂ ಕೂಡ ಸಾಕಷ್ಟು ನೀರು ಬರುವುದಿಲ್ಲ. ಮುಂದೆ ಏನು ಮಾಡಬೇಕು ಎನ್ನುವ ಸಮಸ್ಯೆ ಉಂಟಾಗಿದೆ. ಇದಕ್ಕೆ ಯಾರೂ ಗಮನಕೊಟ್ಟಂತೆ

(ಶ್ರೀ ಎ. ಆರ್. ಬದರೀನಾರಾಯಣ್)

ಕಾಣುವುದಿಲ್ಲ. ಈ ದೃಷ್ಟಿಯಿಂದ ಕಾಡನ್ನು ರಕ್ಷಣೆ ಮಾಡತಕ್ಕದ್ದು ಒಂದು ಮಹತ್ತರವಾದ ಕೆಲಸ. ಇದನ್ನು ಎಷ್ಟು ಕ್ಷಿಪ್ರವಾಗಿ ಮಾಡಿದರೂ ಅಷ್ಟೂ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

3-30 P.M.

ಅಲ್ಲದೆ ವ್ಯವಸಾಯಕ್ಕೋಸ್ಕರ ನಮ್ಮ ಸರ್ಕಾರದವರು ಬಹಳವಾಗಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಹಿಂದೆ ವ್ಯವಸಾಯದಲ್ಲಿ ಬುದ್ಧಿವಂತರು, ನುರಿತವರು ಆದ ಯುವಕರು ವ್ಯವಸಾಯಕ್ಕೆ ಹೋಗುವುದು ಬಹಳ ಕಡಿಮೆಯಾಗಿತ್ತು. ಈಗಿನ ಯುಗದಲ್ಲಿ ಯುವಕ ರೈತರು ವಿದ್ಯಾವಂತರು ನುರಿತವರು ಹೆಚ್ಚಿಗೆ ಪಾಶ್ಚಿಮಾತ್ಯ ದೇಶಕ್ಕೆ ಹೋಗಿ ವಿಚಾರಗಳನ್ನು ತಿಳಿದುಕೊಂಡು ಬಂದಂಥವರು ವ್ಯವಸಾಯದಲ್ಲಿ ಪ್ರವೇಶಮಾಡುವುದನ್ನು ನೋಡಿದರೆ ಬಹಳ ಆಶಾದಾಯಕವಾಗಿದೆ. ಅಂಥವರು ವ್ಯವಸಾಯ ಕ್ಷೇತ್ರಕ್ಕೆ ಪ್ರವೇಶ ಮಾಡಿದಾಗ ಅದಕ್ಕೆ ಬೇಕಾದಂತಹ ಸೌಲಭ್ಯಗಳನ್ನು ಸೌಕರ್ಯಗಳನ್ನೂ ಸರ್ಕಾರದವರು ಒದಗಿಸತಕ್ಕದ್ದು ಬಹಳ ಸೂಕ್ತ. ಆ ರೀತಿಯಲ್ಲಿ ಆ ದಾರಿಯಲ್ಲಿ ನಮ್ಮ ಸರ್ಕಾರದವರು ಹೋಗುತ್ತಿರುವುದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಟ್ರಾಕ್ಟರುಗಳು, ಉತ್ತಮವಾದ ಬೀಜಗಳು, ಗೊಬ್ಬರ, ಕ್ರಿಮಿನಾಶಕ ಔಷಧಿಗಳು ಇದಕ್ಕೆ ಬೇಕಾದಂತಹ ಸಾಲ ಎಲ್ಲವನ್ನೂ ಕೂಡ ಸರ್ಕಾರದವರು ಈಗ ರೈತರಿಗೆ ಒದಗಿಸುತ್ತಿದ್ದಾರೆ. ವ್ಯವಸಾಯಕ್ಕೆ ಎಷ್ಟು ಬೇಕಾದರೂ ಅಷ್ಟು ಹಣವನ್ನೂ ಸರ್ಕಾರದವರು ನಾನಾ ಸಂಸ್ಥೆಗಳ ಮೂಲಕ ನಾನಾ ಸರ್ಕಾರದ ಇಲಾಖೆಗಳ ಮೂಲಕ ಕೊಡುತ್ತಾ ಇರತಕ್ಕದ್ದು ಬಹಳ ಸಂತೋಷದ ವಿಚಾರ. ಆದರೆ ಇವೆಲ್ಲವನ್ನೂ ಒದಗಿಸಿಕೊಟ್ಟು ನೀರಿನ ಸೌಕರ್ಯ ಇಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂಥಾದ್ದನ್ನೂ ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ನೀರಾವರಿ ಯೋಜನೆಗಳಿಗೆ ಹೆಚ್ಚು ಗಮನವನ್ನು ಸರ್ಕಾರದವರು ಕೊಡಬೇಕಾದ್ದು ಬಹಳ ಅವಶ್ಯ. ಮಲೆನಾಡಿನಲ್ಲಿ ಮಳೆ ಬಂದಾಗ ನೀರನ್ನು ಸಂಗ್ರಹಣೆ ಮಾಡುವುದಕ್ಕಾಗಿ ಸಣ್ಣ ಅಣೆಕಟ್ಟುಗಳನ್ನು, ಪಿಕಪ್‌ಗಳನ್ನೂ ಕಟ್ಟಿಸಬೇಕು. ಹರಿದು ಹೋಗತಕ್ಕಂಥ ನೀರನ್ನು ತಡೆಹಾಕಿ ಅದು ಹಾಳಾಗಿಹೋಗದಂತೆ ಅದನ್ನು ಉಳಿಸಿಕೊಂಡು ಬರತಕ್ಕದ್ದು ಬಹಳ ಮುಖ್ಯವಾದದ್ದು. ಕೆರೆಗಳನ್ನು ಕಟ್ಟಿಸಬೇಕು. ಪಿಕಪ್‌ಗಳನ್ನು ಕಟ್ಟಿಸಬೇಕು. ಈ ಕಾರಣಗಳಿಗೋಸ್ಕರ ಹೆಚ್ಚು ಹಣವನ್ನು ಕೊಡಬೇಕೆಂದು ನಾನು ಮಾನ್ಯ ಆರ್ಥಿಕ ಮಂತ್ರಿಗಳಲ್ಲಿ ತಿಳಿಸುವುದಕ್ಕೆ ಅಪೇಕ್ಷೆ ಪಡುತ್ತೇನೆ. ಇವೊತ್ತು ಮುಖ್ಯವಾಗಿ ವ್ಯವಸಾಯದಲ್ಲಿ ಆಹಾರದ ಉತ್ಪನ್ನದಲ್ಲಿ ನಾವು ಒಳ್ಳೆಯ ದೃಶ್ಯವನ್ನು ನೋಡುತ್ತಿದ್ದೇವೆ. ವ್ಯವಸಾಯ ಚೆನ್ನಾಗಿ ಆಗಬೇಕಾದರೆ, ಹೆಚ್ಚು ಆಹಾರ ಉತ್ಪಾದನೆ ಆಗಬೇಕಾದರೆ ಸಹಕಾರ, ವ್ಯವಸಾಯ ಇಲಾಖೆಗಳ ಸಹಕಾರ ಬೇಕು ಎನ್ನತಕ್ಕದ್ದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವ್ಯವಸಾಯ ಇಲಾಖೆಯಲ್ಲಿ ಒಳ್ಳೆಯ ಉತ್ತಮ ತಳಿ ಬೀಜವನ್ನು ಒದಗಿಸಿಕೊಟ್ಟಿದ್ದಾರೆ. ಅದರ ಜೊತೆಗೆ ಟೆಕ್ನಿಕಲ್ ನೋಹೌ ಅನ್ನೂ ಒದಗಿಸಿ ಕೊಡಬೇಕು. ಅದನ್ನು ಯಾವ ಭೂಮಿಯಲ್ಲಿ ಯಾವ ಪ್ರಮಾಣದಲ್ಲಿ ಹೇಗೆ ಬಳಸಬೇಕು ಎನ್ನುವುದನ್ನು ರೈತರಿಗೆ ತಿಳಿಸಬೇಕು. ಟೆಕ್ನಿಕಲ್ ನೋಹೌ ಅನ್ನು ಇನ್ನೂ ರೈತರಿಗೆ ಒದಗಿಸತಕ್ಕದ್ದು ಆಗಿಲ್ಲ. ಅದು ಆಗದೇ ಇರುವುದರಿಂದ ಅನೇಕ ಕಡೆಗಳಲ್ಲಿ ಬಹಳ ಆಸಕ್ತಿಯಿಂದ ಈ ಪ್ರಯೋಗವನ್ನು ಮಾಡಿದ ರೈತರು ಬಹಳ ನಷ್ಟವನ್ನು ಹೊಂದಿದ್ದಾರೆ. ರೈತರಿಗೆ ಟೆಕ್ನಿಕಲ್ ನೋಹೌ ಅನ್ನು ಕೊಡಬೇಕು ಅದಕ್ಕೆ ಬೇಕಾದಂತಹ ನೀರಾವರಿ ಸೌಕರ್ಯಗಳನ್ನೂ ಒದಗಿಸಿಕೊಡಬೇಕು. ಭೂಗರ್ಭದಲ್ಲಿರತಕ್ಕ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಿಕೊಂಡಿಲ್ಲ. ಆದ್ದರಿಂದ ಅಲ್ಲಲ್ಲೇ ಹೆಚ್ಚು ಪ್ರಮಾಣದಲ್ಲಿ ಡೀಪ್ ಬೋರ್‌ವೆಲ್‌ಗಳ ನಿರ್ಮಾಣ ಆಗಬೇಕು. ಯಾವ ಜಾಗದಲ್ಲಿ ಬೋರ್‌ವೆಲ್ ತೆಗೆದರೆ ನೀರು ಬರುತ್ತದೆ, ಸ್ವಚ್ಛ ನೀರು ಸಾಕಷ್ಟು ನೀರು ಬರುತ್ತದೆ ಎನ್ನತಕ್ಕಂಥಾದ್ದನ್ನು ತಜ್ಞರಿಂದ ಶೋಧನೆ ನಡೆಸಿ ಡೀಪ್ ಬೋರ್‌ವೆಲ್‌ಗಳನ್ನು ತೆಗೆಸಿ ಇರಿಗೇಷನ್ ಪಂಪು ಸೆಟ್ಟುಗಳನ್ನು ಹಾಕಿಸಿಕೊಟ್ಟರೆ ಲಕ್ಷಾಂತರ ಎಕರೆ ಜಮೀನಿನಲ್ಲಿ ನೀರಾವರಿ ವ್ಯವಸಾಯವನ್ನು ಮಾಡಬಹುದು. ಇದರಿಂದ ಹೆಚ್ಚು ಆಹಾರ ಸಾಮಗ್ರಿಗಳನ್ನು ಬೆಳೆಯತಕ್ಕಂಥ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಇದಕ್ಕೆ ಸರ್ಕಾರದವರು ಗಮನ ಕೊಡಬೇಕು. ನನ್ನ ಅಭಿಪ್ರಾಯದಲ್ಲಿ ಇರಿಗೇಷನ್ನಿನ ಖರ್ಚಿಗಾಗಿ ಮೀಸಲಾಗಿಟ್ಟಿರತಕ್ಕ ಹಣ ಸಾಲುವುದಿಲ್ಲ. ಅದಕ್ಕೆ ಇನ್ನು ಹೆಚ್ಚು ಹಣವನ್ನು ಒದಗಿಸಬೇಕು. ಈ ಬಾಬಿಗೆ ಹೆಚ್ಚು ಹಣವನ್ನು ಖರ್ಚು ಮಾಡಿದರೆ ಹೆಚ್ಚು ಆಹಾರವನ್ನು ಬೆಳೆಯಬಹುದು ಎನ್ನತಕ್ಕಂಥಾದ್ದನ್ನು ನಾನು ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ.

ಇನ್ನು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗೆ ಸರ್ಕಾರದವರು ಬಹಳವಾಗಿ ಹೋಗಿದ್ದಾರೆ. ಅದಕ್ಕೆ ಸಾಕಷ್ಟು ಹಣವನ್ನು ಕೂಡ ಹಾಕಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳು ಬಹಳ

ಚೆನ್ನಾಗಿ ಹೇಳಿದ್ದಾರೆ. ಅದು ಸರಿಯಾಗಿ ಬಿಜಿನೆಸ್ ಲೈನಾಗಿ ಬಿಜಿನೆಸ್ ಲೈಕಾಗಿ ನಡೆಯುತ್ತಿಲ್ಲ ಎಂದು ಕಂಡು ಬಂದರೆ ಅದು ಸರಿಯಾಗಿ ನಡೆಯುವ ಹಾಗೆ ಪ್ರಯತ್ನ ಮಾಡಬೇಕು. ಜಾಗ್ರತೆ ಯಾಗಿ ಅದರಿಂದ ಪ್ರತಿಫಲ ಬರುವಹಾಗೆ ಸರಿಯಾದ ರೀತಿಯಲ್ಲಿ ಅದನ್ನು ನಡೆಸಬೇಕು. ಅದಕ್ಕೆ ಒಬ್ಬ ಇಂಡಸ್ಟ್ರಿಯಲ್ ಕಮೀಷನರ್ ಅನ್ನು ನೇಮಕ ಮಾಡಿ ಅದರಿಂದ 9—10 ಪರ್ಸೆಂಟ್ ವರಮಾನ ಬರುವಹಾಗೆ ಮಾಡುತ್ತೇವೆಂದು ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಬಹುಶಃ ಪಬ್ಲಿಕ್ ಸೆಕ್ಟಾರ್ ಅಂಡರ್ ಟೇಕಿಂಗ್‌ನಿಂದ ಬಹಳವಾಗಿ ಸಹಾಯವಾಗಬಹುದು ಎಂದು ನಿರೀಕ್ಷಣೆ ಮಾಡುತ್ತಿದ್ದಾರೆ. ಇದನ್ನು ಯೋಚನೆ ಮಾಡುವುದರಿಂದ ಇದರಲ್ಲಿ ವರಮಾನ ಹೆಚ್ಚಾಗುತ್ತದೆ ಎನ್ನುವ ಒಂದು ನಿರೀಕ್ಷಣೆ ಮಾಡುತ್ತಿದ್ದಾರೆ ಎಂದು ನಾನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

ಇನ್ನು ಅಗ್ರಿಕಲ್‌ಚರಲ್ ಟ್ರ್ಯಾಕ್ ರೋಡಿನ ವಿಚಾರ. ನಾನಾ ಪ್ರದೇಶಗಳಲ್ಲಿ ಅಗ್ರಿಕಲ್ ಚರಲ್ ಟ್ರ್ಯಾಕ್ ರೋಡಿನ ವ್ಯವಸ್ಥೆ ಚೆನ್ನಾಗಿ ಆಗಬೇಕು. ಆಹಾರದ ಉತ್ಪತ್ತಿ ಹೆಚ್ಚಾಗಿ ಆಗಬೇಕಾದರೆ ಜಮೀನುಗಳಿಗೆ ಹೆಚ್ಚು ಹೆಚ್ಚಾಗಿ ಗೊಬ್ಬರವನ್ನು ಹಾಕಬೇಕಾಗುತ್ತದೆ, ಆದ್ದ ರಿಂದ ಗಾಡಿಗಳಲ್ಲಿ ಆ ಜಮೀನುಗಳಿಗೆ ಗೊಬ್ಬರವನ್ನು ಸಾಗಿಸುವುದಕ್ಕೂ ಮತ್ತು ಇತರ ವ್ಯವಸಾಯದ ಸಲಕರಣೆಗಳನ್ನು ಸಾಗಿಸುವುದಕ್ಕೂ ಒಂದು ಜಮೀನಿನಿಂದ ಇನ್ನೊಂದು ಜಮೀನಿಗೆ ಹೋಗುವುದಕ್ಕೂ ಅಗ್ರಿಕಲ್‌ಚರಲ್ ಟ್ರ್ಯಾಕ್‌ರೋಡು ಬಹಳ ಮುಖ್ಯ. ಈ ದೃಷ್ಟಿ ಯಿಂದ ಹೆಚ್ಚು ಆಹಾರ ಉತ್ಪಾದನೆಯ ಸಲುವಾಗಿ ಅಗ್ರಿಕಲ್‌ಚರಲ್ ಟ್ರ್ಯಾಕ್‌ರೋಡನ್ನು ಮಾಡಿಸಿಕೊಡುವುದು ಅವಶ್ಯಕ ಎಂದು ನಾನು ಹೇಳುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಈ ವ್ಯವಸಾಯದ ಟ್ರ್ಯಾಕ್ ರೋಡ್‌ಗಳನ್ನು ಮಾಡಿಸಿಕೊಡಿ ಎಂದು ಕೇಳಿದಾಗ ಸರ್ಕಾರದವರು ಹಣವಿಲ್ಲವೆಂದು ಹೇಳುತ್ತಿದ್ದಾರೆ. ಈ ವ್ಯವಸಾಯದ ಟ್ರ್ಯಾಕ್ ರೋಡ್‌ಗಳನ್ನು ಮಾಡಿಸುವುದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕೆಂದು ಮಾನ್ಯ ಅರ್ಥಿಕ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇತ್ತೀಚೆಗೆ ವ್ಯವಸಾಯ ಕಸುಬಿಗೆ ಯುವಕ ರೈತರುಗಳು ಮುಂದೆ ಬರುತ್ತಿದ್ದಾರೆ. ಆದರೆ ವ್ಯವಸಾಯದ ಸಂಶೋಧನೆ ಕಡಿಮೆಯಾಗುತ್ತಿದೆ. ಇನ್ನು ಮುಂದೆ ಎಲ್ಲಾ ಜಿಲ್ಲೆಗಳಲ್ಲೂ ಒಂದೊಂದು ವ್ಯವಸಾಯ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಬೇಕು. ಇದರಿಂದ ಅಲ್ಲಿಯ ರೈತರುಗಳಿಗೆ ಬೇಕಾದಂಥ ಟೆಕ್ನಿಕಲ್ ಅಡ್ವೈಸ್ ಕೊಡುವುದಕ್ಕೆ ಅನುಕೂಲವಾಗುತ್ತದೆ. ಅಲ್ಲದೆ ಈ ಸಂಶೋಧನಾ ಕೇಂದ್ರದವರು ಆಯಾ ಸ್ಥಳದ ಮಣ್ಣಿನ ಗುಣ ಯಾವ ರೀತಿ ಇದೆ, ಮಳೆ ಯಾವ ರೀತಿಯಿದೆ, ನೀರಿನ ಸೌಕರ್ಯ ಯಾವ ರೀತಿ ಇದೆ, ಹವಾಗುಣ ಯಾವ ರೀತಿ ಇದೆ, ಯಾವ ಯಾವ ಬೆಳೆಗಳನ್ನು ಯಾವ ಯಾವ ಕಾಲದಲ್ಲಿ ಬೆಳೆದರೆ ಹೆಚ್ಚಿನ ಫಸಲು ಬರುತ್ತದೆ ಎಂಬುದನ್ನು ಕಂಡುಹಿಡಿದು ರೈತರಿಗೆ ತಿಳುವಳಿಕೆ ಕೊಡಬಹುದು. ಆದ್ದರಿಂದ ಈ ಕೇಂದ್ರಗಳನ್ನು ಸ್ಥಾಪಿಸುವ ಕಡೆಗೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಭೂಕಂದಾಯದ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ತೀರ್ಮಾನವನ್ನು ಮಾನ್ಯ ಅರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈಗಿನ ಪದ್ಧತಿಯನ್ನು ಮುಂದುವರಿಸಿ ಕೊಂಡು ಹೋಗುತ್ತೇವೆಂದು ಹೇಳಿರುವುದು ಸಂತೋಷದ ವಿಷಯ. ಇದರ ಜೊತೆಗೆ ಇನ್ನು ಮುಂದೆ ಕೃಷಿ ಆದಾಯತೆರಿಗೆಯನ್ನು ಹಾಕಬಾರದೆಂದು ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ಸರ್ವೆ ಅಂಡ್ ಸೆಟಲ್‌ಮೆಂಟ್ ಪ್ರಕಾರ ವಸೂಲು ಮಾಡುತ್ತಿರುವ ಭೂಕಂದಾಯ ಬಹಳ ಜಾಸ್ತಿಯಾಗಿದೆ. ಇನೀಕ್ವಿಟಬಲ್ ಆಗಿದೆ. ಹಿಂದೆ ಇದ್ದಂಥ ಭೂಕಂದಾಯದ ಎರಡಷ್ಟನ್ನು ಬೇಕಾದರೆ ಸರ್ಕಾರದ ವರು ವಸೂಲು ಮಾಡಲಿ, ಅದಕ್ಕೆ ನಮ್ಮ ಅಡ್ಡಿಯಿಲ್ಲ, ಆದರೆ ಈಗ ಇರತಕ್ಕಂಥ ಇನೀಕ್ವಿಟಿಯನ್ನು ತೆಗೆದುಹಾಕಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಅಜೀಜ್ ಸೇಠ್.—ಭೂಕಂದಾಯವನ್ನು ವಜಾ ಮಾಡಬೇಕೇ ಅಥವಾ ಮುಂದುವರೆಸ ಬೇಕೇ ಎನ್ನುವುದು ನಿಮ್ಮ ಪಕ್ಷದಲ್ಲಿ ಇನ್ನೂ ತೀರ್ಮಾನವಾಗಿಲ್ಲ.

ಶ್ರೀ ಎ. ಆರ್. ಬದರಿನಾರಾಯಣ್.—ಪಕ್ಷದಲ್ಲಿ ತೀರ್ಮಾನ ಮಾಡುವ ವಿಚಾರವನ್ನು ನಮಗೆ ಬಿಟ್ಟರೆ, ಅದನ್ನು ನಾವು ಮಾಡುತ್ತೇವೆ. ಈ ಸಭೆಯಲ್ಲಿ ಹೇಳಬೇಕಾದುದನ್ನು ಹೇಳುತ್ತಿದ್ದೇನೆ. ಮಾನ್ಯ ಅರ್ಥಿಕ ಮಂತ್ರಿಗಳಿಗೆ ಸಲಹೆ ಕೊಡುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ. ಹಿಂದೆ ಇದ್ದಂಥ ಭೂಕಂದಾಯದ ಎರಡರಷ್ಟನ್ನು ಸರ್ಕಾರದವರು ವಸೂಲು ಮಾಡಿದರೆ ನನಗೆ ತಿಳಿದಮಟ್ಟಿಗೆ ರೈತರು ಸಂತೋಷದಿಂದ ಕೊಡುತ್ತಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಅಜೀಜ್ ಸೇಠ್.—ಯಾವ ರೈತರು ಕೊಡುತ್ತಾರೆ ?

ಶ್ರೀ ಎ. ಆರ್. ಬದರಿನಾರಾಯಣ್.—ಯಾವ ರೈತರು ಎಂದರೆ ಜಮೀನು ಮಾಡುವವರು.

ಶ್ರೀ ಅಜೀಜ್ ಸೇಠ್.—ನೂರಾರು ಎಕರೆ ಜಮೀನು ಇರತಕ್ಕಂಥ ನಿಮ್ಮಂತಹವರು ಒಬ್ಬಿಬ್ಬರು ಕೊಡಬಹುದು ಅಷ್ಟೆ.

ಶ್ರೀ ಎ. ಆರ್. ಬದರಿನಾರಾಯಣ್.—ನಿಮಗೆ ಇದರ ವಿಚಾರ ಗೊತ್ತಿಲ್ಲ. ಅದ್ದರಿಂದ ಈ ವಿಚಾರದಲ್ಲಿ ನೀವು ನನಗೆ ಹೇಳುವುದು ಬೇಡ.

ಚೇರ್‌ಮನ್ ಅವರು.—ನಮ್ಮ ಪಕ್ಷದವರು ಸುಮ್ಮನೆ ಕುಳಿತುಕೊಂಡು ಕೇಳುವಂತೆ ನೀವು ಸಹ ಕೇಳಬೇಕು. ಪದೇ ಪದೇ ಎದ್ದು ಮಾತನಾಡುವುದು ಸರಿಯಲ್ಲ. ನಿಮ್ಮ ಸಮಯ ಬಂದಾಗ ಏನೇನು ಹೇಳಬೇಕೋ ಅದನ್ನೆಲ್ಲಾ ಹೇಳಿ, ಬೈಯುವುದು ಇದ್ದರೆ ಬೈಯಿರಿ, ಆದರೆ ಒಬ್ಬರು ಸದಸ್ಯರು ಮಾತನಾಡುವಾಗ ಮಧ್ಯೆ ಎದ್ದು ಮಾತನಾಡುವುದು ಸರಿಯಲ್ಲ.

ಶ್ರೀ ಅಜೀಜ್ ಸೇಠ್.—ಅಧ್ಯಕ್ಷ ಪೀಠದಲ್ಲಿ ಕುಳಿತು ನಮ್ಮ ಪಕ್ಷದವರು ಎಂದು ಹೇಳಬೇಡಿ.

ಚೇರ್‌ಮನ್.—ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಅವರು ಮಾತನಾಡುವಾಗ ನೀವು ತೊಂದರೆ ಕೊಡುವುದು ಬೇಡ.

ಶ್ರೀ. ಎ. ಆರ್. ಬದರಿನಾರಾಯಣ್.—ಆದ್ದರಿಂದ ಸಣ್ಣಪುಟ್ಟ ಹಿಡುವಳಿದಾರರು ಹಿಂದಿನ ಭೂಕಂದಾಯದ ಎರಡರಷ್ಟು ಕೊಡಲು ಒಪ್ಪಿದ್ದಾರೆ.

ಶ್ರೀ ಬಿ. ಬಸವರಾಜು (ಕೆ. ಆರ್. ನಗರ).—ಸಣ್ಣಪುಟ್ಟ ಹಿಡುವಳಿದಾರರು ಎಂದರೆ ಯಾರು ಎಂಬುದನ್ನು ದಯವಿಟ್ಟು ಮಾನ್ಯ ಸದಸ್ಯರು ವಿಶದಪಡಿಸಬೇಕು.

ಶ್ರೀ ಎ. ಆರ್. ಬದರಿನಾರಾಯಣ್.—ನಾನು ಶಿವಮೊಗ್ಗ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಪ್ರವಾಸ ಮಾಡಿದಾಗ ನನಗೆ ತಿಳಿದುಬಂತು, ಯಾವ ರೈತರೂ ಸಹ ಭೂಕಂದಾಯ ತಮ್ಮ ತಲೆಯ ಮೇಲೆ ಹೊರೆಯಾಗಿದೆ, ಕೊಡುವುದಕ್ಕೆ ತೊಂದರೆಯಾಗುತ್ತಿದೆ ಎಂದು ಹೇಳಲಿಲ್ಲ. ಈ ರೀತಿ ಹೇಳಿದ ವರೆಲ್ಲಾ ಸಣ್ಣಪುಟಣ್ಣ ಹಿಡುವಳಿದಾರರೇ. ಭೂಕಂದಾಯ ಕೊಡುವುದಕ್ಕಾಗುವುದಿಲ್ಲವೆಂದು ಕೆಲವರು ಚಳವಳಿ ಮಾಡಬಹುದು, ಆದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದರೆ ಸರ್ಕಾರದವರು ಈಗ ಕೆಲವು ಕಡೆ ವಸೂಲು ಮಾಡುತ್ತಿರುವ ಭೂಕಂದಾಯ ಬಹಳ ಜಾಸ್ತಿಯಾಗಿದೆ. ಹಿಂದೆ ವಸೂಲು ಮಾಡುತ್ತಿದ್ದ ಭೂಕಂದಾಯದ ಎರಡರಷ್ಟನ್ನು ವಸೂಲು ಮಾಡಿದರೆ ಯಾರೂ ತಕರಾರು ಮಾಡುವುದಿಲ್ಲ. ಎಲ್ಲರೂ ಕೊಡುತ್ತಾರೆಂದು ನನ್ನ ಭಾವನೆ.

ಶ್ರೀ ಅಜೀಜ್ ಸೇಠ್.—ನಿಮ್ಮಂಥ ದೊಡ್ಡ ದೊಡ್ಡ ಜಮೀನುದಾರರು ಬೇಕಾದರೆ ಎರಡರ ಷ್ಟನ್ನು ಕೊಡಬಹುದು, ಆದರೆ ಸಣ್ಣಪುಟ್ಟ ಹಿಡುವಳಿದಾರರಿಗೆ ಕೊಡುವುದು ಕಷ್ಟವಿದೆ.

ಶ್ರೀ ಎ. ಆರ್. ಬದರಿನಾರಾಯಣ್.—ನೀವು ವಿಷಯ ತಿಳಿಯದೆ ಮಾತನಾಡಬೇಡಿ. ನಾನು ಕೊಡುವ ಕಂದಾಯ ಎಷ್ಟು ಎಂಬುದು ನಿಮಗೆ ಗೊತ್ತಿಲ್ಲ. ಸುಮ್ಮನೆ ಏತಕ್ಕೆ ಮಧ್ಯೆ ಮಧ್ಯೆ ಮಾತ ನಾಡುತ್ತೀರಿ?

ಇನ್ನು ನಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಮ್ ವಾಪಸ್ ಬಂದಿದೆಯೆಂದು ಕೇಳಿದೆ, ಇನ್ನು ಮುಂದೆ ಗ್ರಾಮಾಂತರ ನೀರು ಸರಬರಾಜು ಯೋಜನೆಗೆ ಆದಷ್ಟು ಹೆಚ್ಚಿಗೆ ಹಣವನ್ನು ಒದಗಿಸ ಬೇಕೆಂದು ಮಾನ್ಯ ಅರ್ಥಿಕ ಮಂತ್ರಿಗಳನ್ನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ಪುನಃ ನಿರ್ಮಾಣ ಮಾಡಬೇಕು ಎನ್ನತಕಂಥ ವಿಷಯವನ್ನು ಶ್ರೀಮಾನ್ ಶ್ರೀನಿವಾಸ್ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮತ್ತು ಈ ಬಗ್ಗೆ ಒಂದು ನಿರ್ಣಯವನ್ನು ಸಹ ತರಬೇಕೆಂದಿದ್ದರು, ಆದರೆ ಅದು ಆಗಲಿಲ್ಲ. ಮಲೆನಾಡಿನಲ್ಲಿ ಇರತಕ್ಕಂಥ ಅರ್ಥಿಕ ಸಂಪತ್ತನ್ನು ಅಭಿವೃದ್ಧಿ ಮಾಡುವ ಬಗ್ಗೆ ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ಪುನರ್ರಚನೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಇನ್ನು ಸರ್ಕಾರದ ವತಿಯಿಂದ ಅನೇಕ ಕೆಲಸಕಾರ್ಯಗಳು ನಮ್ಮ ರಾಜ್ಯದಲ್ಲಿ ಆಗಿವೆ. ಈ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಈ ವಿಚಾರದಲ್ಲಿ ಏನಾದರೂ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿದ್ದರೆ, ಅದಕ್ಕೆ ಕಾರಣ ಈಗಿನ ಆಡಳಿತ ಪದ್ಧತಿಯಲ್ಲಿ ಬಹಳ ನ್ಯೂನತೆಗಳಿವೆ ಎನ್ನತಕ್ಕಂಥ ವಿಚಾರವನ್ನು ನಾವೆಲ್ಲರೂ ತಿಳಿದಿದ್ದೇವೆ. "There is need to streamline the Administration"—ಅಡ್ಮಿನಿಸ್ಟ್ರೇಷನನ್ನು ಜನರಿಗೆ ಅನುಕೂಲವಾಗುವಂತೆ ಮಾರ್ಪಾಡು ಮಾಡಬೇಕಾಗಿದೆ. ಅಡ್ಮಿನಿಸ್ಟ್ರೆಟಿವ್ ರಿಫಾರಮ್ಸ್ ಕಮಿಟಿಯವರು ಈ ಬಗ್ಗೆ ಕೆಲವೊಂದು ಸಲಹೆಗಳನ್ನು

ಕೊಟ್ಟಿದ್ದಾರೆ. ಅವನ್ನು ಸಾಧ್ಯವಾದರೆ ಜಾರಿಗೆ ತರಬೇಕು. ಅಲ್ಲದೆ ಅಧಿಕಾರಿಗಳು ತಮ್ಮ ಈಗಿನ ಮನೋಭಾವವನ್ನು ಬದಲಾವಣೆ ಮಾಡಿಕೊಳ್ಳಬೇಕು. ಡೆಮಾಕ್ರೆಟಿಕ್-ಸೆಟ್-ಅಪ್-ನಲ್ಲಿ ಅಧಿಕಾರಿಗಳು ಸಾರ್ವಜನಿಕ ಸೇವಕರಂತೆ ವರ್ತಿಸಬೇಕೇ ವಿನಾ ಸಾಹೇಬರಂತೆ ವರ್ತಿಸುವುದು ಸರಿಯಲ್ಲ. ರೈತರ ಬಗ್ಗೆ ಅಧಿಕಾರಿಗಳಲ್ಲಿ ಅನುಕಂಪವಿರಬೇಕು. ತಾವು ಇರುವುದೇ ಸಾರ್ವಜನಿಕ ಸೇವೆಗಾಗಿ ಅನ್ನುವುದನ್ನು ಅರಿತುಕೊಂಡು ಆ ರೀತಿಯಲ್ಲಿ ಅವರ ಮನೋವೃತ್ತಿ ಬದಲಾಯಿಸಬೇಕು. ಈ ಬಗ್ಗೆ ಸರ್ಕಾರದವರು ಒಂದು ಸರ್ಕ್ಯುಲರ್ ಹೊರಡಿಸುವುದು ಒಳ್ಳೆಯದೆಂದು ನನಗನ್ನಿಸುತ್ತದೆ.

ಮಾನ್ಯ ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಆಯವ್ಯಯ ಪತ್ರವನ್ನು ನಾನು ಸ್ವಾಗತಿಸುತ್ತೇನೆ. ಅವರು ತಮ್ಮ ಭಾಷಣದಲ್ಲಿ ಎಲ್ಲಾ ವಿಚಾರಗಳನ್ನು ಕೂಲಂಕಷವಾಗಿ ತಿಳಿಸಿದ್ದಾರೆ, ಇರತಕ್ಕಂಥ ಕೊರತೆಗಳನ್ನು, ನ್ಯೂನತೆಗಳನ್ನು ಸಹ ಹೇಳಿದ್ದಾರೆ. ತಪ್ಪು ಇರುವ ಕಡೆ ತಪ್ಪು ಇದೆ ಎಂದು ಹೇಳಿದ್ದಾರೆ. ಮುಂದೆ ಬರತಕ್ಕಂಥ ಆಶಾದಾಯಕ ಚಿತ್ರವನ್ನು ತೋರಿಸಿದ್ದಾರೆ. ಆದ್ದರಿಂದ ಎದುರು ಪಕ್ಷದವರು ಸಹ ಈ ಆಯವ್ಯಯ ಪತ್ರವನ್ನು ಸ್ವಾಗತ ಮಾಡಬೇಕೆಂದು ಮತ್ತು ಅಭಿನಂದಿಸಬೇಕೆಂದು ಕೇಳಿಕೊಂಡು ನನ್ನ ಭಾಗದ ಅಭಿನಂದನೆಯನ್ನು ಮಾನ್ಯ ಆರ್ಥಿಕ ಮಂತ್ರಿಗಳಿಗೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಅರ್ಥಸಚಿವರು ಮಂಡಿಸಿದ ಆಯವ್ಯಯದ ಬಜೆಟ್ಟಿನ ಮೇಲೆ ಒಂದೆರಡು ಮಾತುಗಳನ್ನು ಆಡಲು ಬಯಸುತ್ತೇನೆ. ಕಳೆದ ಹತ್ತಾರು ವರ್ಷಗಳ ಅಂಕಿ ಅಂಶಗಳನ್ನು ನೋಡಿದರೆ, ಇಷ್ಟು ವಿವರವಾಗಿ ಅಂಕಿ ಅಂಶಗಳನ್ನು ಯಾರೂ ಇಡಲಿಲ್ಲ, ಎಂದು ಸಂತೋಷದಿಂದ ಹೇಳಬೇಕಾಗಿದೆ. ಆದರೆ ಬಜೆಟ್ಟಿನ ಒಂದು ಸ್ವರೂಪವನ್ನು ಯಾವ ರೀತಿಯಲ್ಲಿ ಹೇಳಿದ್ದಾರೆಂದರೆ, ಅದನ್ನು ಓದಿ ಮನನಮಾಡಿಕೊಳ್ಳುವುದೇ ಕಷ್ಟ. ಅದು ಒಂದು ರೀಡರ್ಸ್ ಡೈಜೆಸ್ಟ್ ಇದ್ದಹಾಗೆ ಇದೆ. ಒಮ್ಮೆ ಚಿಂತಾಜನಕವಾಗಿದೆ ಎಂದು ಹೇಳುತ್ತಾರೆ, ಒಮ್ಮೆ ಆಶಾದಾಯಕವಾಗಿದೆ ಎಂದು ಹೇಳುತ್ತಾರೆ. ಅವರು ಬಹಳ ಚತುರವಾಗಿ ಉಳಿತಾಯದ ಬಜೆಟನ್ನು ಮಾಡಿದ್ದಾರೆ. ಆದರೆ ಒಳಹೊಕ್ಕು ನೋಡಿದರೆ ಒಂದು ಉಬ್ಬಿದ ಟೊಳ್ಳು ಬಜೆಟ್ಟಾಗಿದೆ ಎಂದು ಹೇಳಬಹುದು. ಕೊನೆಯದಾಗಿ 11 ಕೋಟಿ ಉಳಿತಾಯವಾಗುತ್ತದೆ ಎಂದು ಹೇಳಿದ್ದಾರೆ. ಈ ಬಜೆಟನ್ನು ಅಷ್ಟು ಸಮಂಜಸವಾಗಿದೆಯೆಂದು ಒಪ್ಪಿಕೊಳ್ಳಲಾಗುವುದಿಲ್ಲ. ಇಂದು ದೇಶದ ಸ್ಥಿತಿಯು ಬಹಳ ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲಿದೆ. ಇದಕ್ಕೆ ಬರೇ ಆರ್ಥಿಕ ಸ್ಥಿತಿಯೇ ಕಾರಣ ವಲ್ಲ, ರಾಜಕೀಯ ಸ್ಥಿತಿಯೂ ಕಾರಣವಾಗಿದೆ. ಮೈಸೂರು ಯಾವಾಗಲೂ ನೆರೆ ರಾಜ್ಯದಲ್ಲಿ ವಿಶ್ವಾಸ ದಿಂದ, ಸ್ನೇಹದಿಂದ ಬೆರೆತ ರಾಜ್ಯ. ಇವತ್ತಿನ ದಿವಸ ನಮ್ಮ ರಾಜ್ಯದ ಮುಖ್ಯ ಮಂತ್ರಿಯವರ ನಿಲುವಿನಿಂದ ಮೈಸೂರು ರಾಜ್ಯಕ್ಕೆ ಶತ್ರುಗಳು ಜಾಸ್ತಿಯಾಗುತ್ತಿದ್ದಾರೆ. ಇಂದು ಮದ್ರಾಸ್, ಕೇರಳ, ಮಹಾರಾಷ್ಟ್ರ, ಆಂಧ್ರ ಎಲ್ಲಾ ಕಡೆಯೂ ಒಂದೊಂದು ಹೊಸ ಹೊಸ ಸಮಸ್ಯೆಗಳನ್ನು ಕಲ್ಪನೆ ಮಾಡುತ್ತಿದ್ದಾರೆ. ಮೊನ್ನೆ ನಾನು ಮದ್ರಾಸಿಗೆ ಹೋದಾಗ, ಅಲ್ಲಿ ಎಲ್ಲರೂ ಮುಖ್ಯ ಮಂತ್ರಿಯವರಿಗೆ ಬಯ್ಯುವವರೇ ಆಗಿದ್ದರು. ಕಾರಣ ಇಷ್ಟೆ. ಮದ್ರಾಸ್ ಭಾರತದ ಐಕ್ಯತೆಗೆ ತನ್ನ ಭಾಷಾನೀತಿಯಿಂದ ವಿರೋಧವಾಗಿದೆ. ಇವರ ನಿಲುವು ಭಾಷಾ ನಿಲುವು, ಸತತವಾಗಿ ರಾಷ್ಟ್ರದ್ರೋಹವಾಗಿರತಕ್ಕಂತಹದ್ದು ಎಂದೂ ಹೇಳಿ ಇದರಿಂದ ಮದ್ರಾಸಿನವರ ಸ್ನೇಹವನ್ನು ಕಳ ಕೊಂಡಿದ್ದಾರೆಂದು ಘಂಟಾಘೋಷವಾಗಿ ಹೇಳಬೇಕಾಗಿದೆ. ಅದಕ್ಕೆ ನಾವು ಆಗಲೇ ಕೇಳಿಕೊಂಡಿ ದ್ದೇವೆ, ನೀವು ಕಾಂಗ್ರೆಸ್ ಅಧ್ಯಕ್ಷರಾಗಿ, ಇಲ್ಲದಿದ್ದರೆ ಮುಖ್ಯ ಮಂತ್ರಿಯಾಗಿರಿ ಎಂದು. ಇವರ ಗುರಿ ಸಂಯುಕ್ತ ರಂಗ ಸರ್ಕಾರವನ್ನು ಉರುಳಿಸುವುದು. ಕೇರಳಕ್ಕೆ ಹೋದರು ಅಲ್ಲಿ ಇದನ್ನೇ ಹೇಳು ತ್ತಾರೆ, ನಮಗೂ ಮಹಾರಾಷ್ಟ್ರದವರಿಗೂ, ಆಂಧ್ರದವರಿಗೂ ಗಡಿ ವಿವಾದ ಮತ್ತು ನದಿ ವಿವಾದ ಗಳಿಂದ ನಮ್ಮಲ್ಲಿ ಅಭಿಮಾನ ಕಡಿಮೆಯಾಗಿದೆ. ಇವರ ವಿಚಾರದಲ್ಲಿ ಒಂದು ಹೇಳುತ್ತೇನೆ. ನಿಜಲಿಂಗಪ್ಪನವರು ಸತ್ಯವನ್ನು ನುಡಿದರೆ ಧರ್ಮದಿಂದ ನಡೆದರೆ ಕನ್ನಡ ಭೂಮಿ ರಾಮರಾಜ್ಯ ವಾದೀತು. ಆದರೆ ಅವರು ಸತ್ಯದಿಂದ ನಡೆಯುವುದು ಕಾಣುತ್ತಾ ಇಲ್ಲ. ಇವತ್ತು ಈ ರಾಜ್ಯ ರಾಮ ನನ್ನು ಕಳೆದುಕೊಂಡ ಮೇಲೆ ಅರಾಜಕತೆ ರಾಮಾಯಣದಲ್ಲಿ ಹೇಳಿದಂತಿದೆ. ಇವರ ನಾಯಕತ್ವದಲ್ಲಿ ಇವತ್ತು ಅರಾಜಕತೆ ಬಂದು ಮುಟ್ಟಿದೆ ಎಂಬ ಒಂದು ಚಿತ್ರಕ್ಕೆ ಹೋಲಿಸಬಹುದು. ಒಂದೇ ಕೇಶ ವನ್ನು ಬಹು ಹೆಸರಿನಲ್ಲಿ ಕರೆಯುತ್ತೇವೆ. ಮೂಗಿನ ಕೆಳಗಿರೆ ಮೀಸೆ ಎಂಬರು, ಬಾಯಿಯ ಕೆಳಗಿರೆ ಗಡ್ಡವೆಂಬರು, ತಲೆಯ ಮೇಲಿರೆ ಜುಟ್ಟೆಂಬರು ಒಂದೇ ಕೇಶಕ್ಕೆ ಹಲವು ನಾಮದಿ ಕರೆಯುವರು. ನಮ್ಮ ಬೋಳ ಮುಖ್ಯ ಮಂತ್ರಿಗೆ ಎಲ್ಲವೂ ಎಲ್ಲೆಡೆಯೂ ಒಂದೇ ಅಂತೆ. ಇವತ್ತಿನ ದಿವಸ ಮೈಸೂರಿನ ರಕ್ಷಣೆ ಸರಿಯಾಗಿ ಆಗುತ್ತಿಲ್ಲ. ಅವರಿಗೆ ನಮ್ಮ ಮೈಸೂರಿನಲ್ಲಿ ಜನ್ಮ ಇತ್ತವರು ಎಂಬ ಅಭಿಮಾನ ಇದ್ದರೆ ಅವರೇ ಇದನ್ನು ಯೋಚನೆ ಮಾಡಬೇಕು. ಇವರು ಕಾಂಗ್ರೆಸ್ ಅಧ್ಯಕ್ಷರಾಗಿರುವುದರಿಂದ ಕೇಂದ್ರದ ಮಂತ್ರಿಯಾಗುವುದಕ್ಕೆ ಲಾಯಕ್ಕು ಎಂದು ಕಾಣುತ್ತದೆ. ಏಕೆಂದರೆ ಹಿಂದೆ ನೆಹರೂ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಆಗಿದ್ದರು. ಇವತ್ತು ಕೇಂದ್ರಕ್ಕೂ ನಮಗೂ ಅನೇಕ ವಿಚಾರಗಳಲ್ಲಿ ವೈಮನಸ್ಸು ಇದೆ. ಅಲ್ಲಿ ಪಕ್ಷದ ತೀರ್ಮಾನ ಸರ್ಕಾರದ ತೀರ್ಮಾನವಾಗಿರುವುದರಿಂದ ಇವತ್ತು ಬೆಳಗಾಂ, ಬಾರ್ಡರ್ ವಿಚಾರದಲ್ಲಿ ಕೇಂದ್ರ ಪಾರ್ಲಿಮೆಂಟರಿ ಬೋರ್ಡು ತೀರ್ಮಾನ ಮಾಡಬೇಕೆಂದರೆ ಅದಕ್ಕೆ ಇವರು ತಯಾರಾಗಿಲ್ಲ. ಇವರು ಅವರನ್ನು ಎದುರಿಸುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಮೈಸೂರಿನ ಜನರು ಯಾವ ವಿಚಾರದಲ್ಲೂ ನಿರಾಶೆಯನ್ನೇ ಪಡೆಯಬೇಕಾಗುತ್ತದೆ. ನನಗಾದರೂ ಅನಿಸುತ್ತದೆ—

"1. The basic responsibility of any good government is to maintain law and order;
2. control of finance
3. defence.

ಇವತ್ತಿನ ದಿವಸ ದೇಶದ ಸ್ಥಿತಿ ಏನಾಗಿದೆ ಎಂದರೆ, ಲಾ ಅಂಡ್ ಆರ್ಡರ್ ಯಾವ ಇಲಾಖೆಯಲ್ಲೂ ಇಲ್ಲ ಎಂದು ಎದೆ ಮುಟ್ಟಿ ಹೇಳಬಹುದಾಗಿದೆ. ಲಾ ಅಂಡ್ ಆರ್ಡರ್ ಮಣ್ಣು ಮುಕ್ಕಿ ಹೋಗಿವೆ. ರೆವೆನ್ಯೂ ಇಲಾಖೆಯನ್ನು ನೋಡಿ. ಅರಣ್ಯ, ರಸ್ತೆ, ಕಾಲುವೆ, ಎಲ್ಲವನ್ನೂ ಹಾಳು ಮಾಡುತ್ತಿದ್ದಾರೆ. ಕೈಗಾರಿಕೆಯನ್ನು ತೆಗೆದುಕೊಂಡರೆ, ಪ್ರತಿಯೊಂದು ಕೈಗಾರಿಗೆಯಲ್ಲೂ ಕೂಡ ಅಲ್ಲಿನ ಅಧಿಕಾರಿಗಳು ಸ್ವೇಚ್ಛೆಯಾಗಿ ರಾಜ್ಯ ಸರ್ಕಾರಕ್ಕೆ ಕೋಟ್ಯಂತರ ರೂಪಾಯಿಗಳನ್ನು ಲುಕ್ಸಾನು ಮಾಡುತ್ತಿದ್ದಾರೆ. ಇದರಿಂದ ಲಾ ಅಂಡ್ ಆರ್ಡರ್ ದೇಶದಲ್ಲಿ ಎಲ್ಲಿಯೂ ಇಲ್ಲವೆಂದೂ ಹೇಳಬೇಕಾಗಿದೆ.

ಮೂರನೆಯದಾಗಿ, ಹಿಂದೆ ಚೈನಾ ದೇಶದಲ್ಲಿ ಆರ್ಥಿಕ ಸ್ಥಿತಿ ಹೇಗೆ ಇತ್ತು, ಆ ರೀತಿ ನಮ್ಮ ದೇಶದಲ್ಲಿ ಆಗಿದೆ. ನೋಟುಗಳ ಸಂಖ್ಯೆ ಮಿತಿಮೀರಿ ಹೋಗುತ್ತಿದೆ. 1947 ಇಸವಿಯಲ್ಲಿ ರಿಸರ್ವ್ ಬ್ಯಾಂಕಿನವರು 280 ಕೋಟಿ ರೂಪಾಯಿ ನೋಟುಗಳನ್ನು ಸರ್ಕ್ಯುಲೇಶನ್ ಕೊಟ್ಟಿದ್ದರು. ಇತ್ತೀಚೆಯ ಲೆಕ್ಕ ಪ್ರಕಾರ ಇದು 5 ಸಾವಿರ ನೂರು ಕೋಟಿ ರೂಪಾಯಿಗಳಷ್ಟು ಸರ್ಕ್ಯುಲೇಶನ್ ಮಾಡುತ್ತಿದ್ದಾರೆ. ಇದರ ಜೊತೆಗೆ ಎಷ್ಟೋ ನೂರು ರೂಪಾಯಿಯ ಕಳ್ಳ ನೋಟುಗಳು, ಎರಡು ರೂಪಾಯಿಯ ನೋಟುಗಳು ಸಿಕ್ಕಿವೆ. ಇದರಲ್ಲಿ ಎಷ್ಟೋ ಜನರನ್ನು ಅರೆಸ್ಟು ಕೂಡ ಮಾಡಿದ್ದಾರೆ. ಇದರಿಂದ ನಮ್ಮ ದೇಶದಲ್ಲೂ ಕೂಡ ಚೈನಾದಲ್ಲಿ ಕ್ರಾಂತಿ ಆದಹಾಗೆ ಆಗುತ್ತದೆಯೋ ಎಂದು ಕಂಡುಬರುತ್ತದೆ. ರಾಷ್ಟ್ರ ರಕ್ಷಣೆಯನ್ನು ಪರಿಶೀಲಿಸಿದರೆ ಸಾವಿರಗಟ್ಟಲೆ ಮೈಲು ಪ್ರದೇಶವನ್ನು ಅವರು ಅಕ್ರಮಣ ಮಾಡಿಕೊಂಡರು. ಮೊನ್ನೆಯ ದಿವಸ ರಾಣ್ ಆಫ್ ಕಚ್ ಪ್ರದೇಶವನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಡಬೇಕಾಯಿತ್ತು. ಅದಲ್ಲದೆ ಕೇವಲ ಸಣ್ಣ ರಾಜ್ಯವಾದ ಸಿಲೋನ್ ಕೂಡ ಒಂದು ದ್ವೀಪಕ್ಕೆ ಕಣ್ಣಿಟ್ಟು ಬಿಟ್ಟಿದೆ. ಇವತ್ತು ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ಭಾರತ ವಿವೇಚನೆಯಿಂದ ದಿಟ್ಟತನದಿಂದ ಇದ್ದ ಪಕ್ಷದಲ್ಲಿ ಈ ಅಕ್ರಮಣವೆಲ್ಲಾ ಆಗುತ್ತಿರಲಿಲ್ಲ. ನಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳಬೇಕಾದರೆ ನಮ್ಮ ಗುರಿಯನ್ನು ನಾವು ಒಂದು ಒಳ್ಳೆಯ ದೃಷ್ಟಿಯಿಂದ ನೋಡಿಕೊಳ್ಳಬೇಕು. ಇವತ್ತು ಸರ್ಕಾರದವರು ನೂರಾರು ಕೋಟಿ ರೂಪಾಯಿಗಳನ್ನು ರಾಷ್ಟ್ರ ರಕ್ಷಣೆ ಇಲಾಖೆಗೆ ಖರ್ಚು ಮಾಡುತ್ತಿದ್ದಾರೆ. ಆದರೆ ಹಾಕಿದ ಭಂಡವಾಳಕ್ಕೆ ತಕ್ಕ ಫಲವೂ ಕೈಗಾರಿಕೆಗಳಲ್ಲಿಯೂ ಇಲ್ಲ. ಏನೂ ಇಲ್ಲ. ಇವತ್ತು 430 ಕೋಟಿ ನಮ್ಮಲ್ಲಿ ಅಸೆಟ್ ಇದೆ ಎಂದು ಹೇಳಿದ್ದಾರೆ. ಅರ್ಧ ಪರ್‌ಸೆಂಟ್ ಬಡ್ಡಿ ಬರುತ್ತದೆಂದು ಹೇಳುತ್ತಾರೆ. ಹೊರಗಡೆಯಿಂದ 6—7 ಪರ್‌ಸೆಂಟ್ ಕೊಟ್ಟು ತಂದು ಅದನ್ನು ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗಾಗಿ ಉಪಯೋಗಿಸುತ್ತಿದ್ದಾರೆ. ಇದು ಯಾವ ಅರ್ಥ ಶಾಸ್ತ್ರದಲ್ಲೂ ಹೇಳಿಲ್ಲವೆಂದು ನನಗನಿಸುತ್ತದೆ. ಅಲ್ಲದೆ ಕೈಗಾರಿಕೆಗಳಿಗೆ ಹಾಕಿದ್ದ ಭಂಡವಾಳವನ್ನು ಶೇರಿಗೆ ಪರಿವರ್ತನೆ ಮಾಡಿಕೊಳ್ಳುವುದು, ಇದೂ ಒಂದು ತನ್ನ ಪಕ್ಷವನ್ನು ಬಲಪಡಿಸಿಕೊಳ್ಳುವುದಕ್ಕೋಸ್ಕರ ಮಾಡುತ್ತಿದ್ದಾರೆಂದು ಹೇಳಬೇಕಾಗಿದೆ. ಅದೇ ಕೈಗಾರಿಕೆಗಳಿಗೆ ಹೊಸದಾಗಿ ಬಂಡವಾಳ ಕೊಡುವುದು, ಇದೆಲ್ಲಾ ಒಂದು ಸೂಯಿಸೈಡಲ್ ಪಾಲಿಸಿ ಎಂದು ಹೇಳಬೇಕಾಗುತ್ತದೆ. ಈ ವಿಚಾರದಲ್ಲಿ ನಿಜವಾಗಿಯೂ ಏಕೆ ಲುಕ್ಸಾನು ಆಗುತ್ತದೆ, ಏಕೆ ಅಭಿವೃದ್ಧಿಯಾಗುತ್ತಿಲ್ಲ, ಸಾಕಷ್ಟು ಲಾಭ ಬರುತ್ತಿಲ್ಲ ಏಕೆ ಎಂದು ಯೋಚನೆ ಮಾಡಿದರೆ ಕೈಗಾರಿಕೆಗಳ ಕಡೆ ಯಾರೂ ಮನ ಕೊಟ್ಟು ಕೆಲಸ ಮಾಡುತ್ತಿಲ್ಲವೆಂದು ಹೇಳಬೇಕಾಗಿದೆ.

ಶ್ರೀಮಾನ್ ಜತ್ತಿಯವರು ಹಿಂದೆ ಇಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ನಿಜವಾಗಿಯೂ ಕೂಡ ಸ್ವಲ್ಪ ಆಸಕ್ತಿ ವಹಿಸುತ್ತಿದ್ದರು. ಈಗ ನಾವು ಇಂಡಸ್ಟ್ರೀ ಇಲಾಖೆಗಳನ್ನು ನೋಡಿದರೆ ಕೈಗಾರಿಕೆಗಳಲ್ಲಿ ಬರೀ ಅಧಿಕಾರಿಗಳನ್ನು ತುಂಬಿ ಎಲ್ಲೆಲೂ ಕಾರ್ಪೊರೇಷನ್‌ಗಳನ್ನು ಸರಕಾರ ಮಾಡಲು ಹೊರಟಿದ್ದಾರೆ. ಶ್ರೀಮಾನ್ ಜತ್ತಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಭದ್ರಾವತಿ ಐರನ್

ಅಂಡ್ ಸ್ಟೀಲ್ ವರ್ಕ್ಸ್‌ನಲ್ಲಿ ಉಪಯೋಗಕ್ಕಾಗಿ ಒಂದು ಎಲ್. ಡಿ. ಪ್ರೋಸೆಸ್ ಪ್ಲಾಂಟನ್ನು ಆಸ್ಟ್ರೀಯಾ ದೇಶದಿಂದ ತರಿಸಬೇಕೆಂದು ಒಂದು ಸೂಚನೆ ಇಲ್ಲಿನ ಅಧಿಕಾರವರ್ಗದವರಿಂದ ಸರಕಾರಕ್ಕೆ ಬಂದಿತ್ತು. ಇದರ ಬಗ್ಗೆ ಬಹಳವಾಗಿ ನಾವು ಕೇಳಿದ್ದೆವು. ಇನ್ನು ಮೇಲೆ ಭದ್ರಾವತಿ ಕಬ್ಬಿಣದ ಕಾರ್ಖಾನೆಗೆ ಆಸ್ಟ್ರೀಯಾದಿಂದ ಬರುವ ಯಂತ್ರದಿಂದ ಬಹಳ ಲುಕ್ಸಾನಾಗುತ್ತದೆ ಎಂದು ಸರಕಾರಕ್ಕೆ ಸಲಹೆಗಳನ್ನೂ ಮಾಡಿದ್ದರು. ಆದರೆ ಆಗ ಕೆಲವರು ಸರಕಾರದವರಿಗೆ ಒಂದು ಆಸ್ಟ್ರಿಯದಿಂದ ಕೊಂಡುಕೊಳ್ಳುವಂತಹ ಪ್ಲಾಂಟು ಬಹಳ ಹಳೆಯದು ಅದರಿಂದೇನೂ ಉಪಯೋಗವಾಗುವುದಿಲ್ಲ, ಇದಕ್ಕಾಗಿ 60 ಲಕ್ಷ ಹೆಚ್ಚು ಹಣ ಕೊಟ್ಟು ಇಂತಹ ಪ್ಲಾಂಟುಗಳನ್ನು ಕೊಂಡುಕೊಳ್ಳುವುದರಿಂದ ಏನೂ ಉಪಯೋಗವಾಗುವುದಿಲ್ಲ ಎಂದು ಒತ್ತಾಯ ಬಂದುದರಿಂದ ಆಗಿದ್ದ ಶ್ರೀ ಜತ್ತಿಯವರು ಇದನ್ನು ಕೊಂಡುಕೊಳ್ಳುವ ಗೋಜಿಗೆ ಹೋಗಲಿಲ್ಲ. 1966ನೇ ಸಾಲ್‌ವರೆಗೆ ಸರಕಾರದ ಬೊಕ್ಕಸಕ್ಕೆ 60 ಲಕ್ಷದಷ್ಟು ಆದಾಯ ಭದ್ರಾವತಿ ಕಾರ್ಖಾನೆಯಿಂದ ಬರುತ್ತಿದ್ದು ಇವೊತ್ತಿನ ದಿವಸ ಸ್ಪನ್‌ಪೈಪ್ ಫೌಂಡ್ರಿ ಕೊಂಡಿದ್ದರಿಂದ ಸುಮಾರು ಒಂದು ಕೋಟಿಯಷ್ಟು ಲುಕ್ಸಾನು ಆಗುತ್ತಾ ಇರುವುದರಿಂದ ಕೈಗಾರಿಕೆಗಳಲ್ಲಿ ಬಂಡವಾಳ ಹಾಕುವಾಗ ಸರಿಯಾಗಿ ಯೋಚನೆ ಮಾಡಿ ಹಾಕಬೇಕಾಗಿತ್ತು. ನಮ್ಮ ಸರಕಾರದವರು ಆರ್ಡರ್ ಕೊಡುವ ಮೊದಲೇ ಆಸ್ಟ್ರಿಯಾದೇಶದ ಪತ್ರಿಕೆಗಳಲ್ಲಿ "Mysore Govern-ment has placed an order on Austria for 20 crores of rupees worth plant" ಎಂದು ಬಂದಿತ್ತು. ಇಷ್ಟು ಕೋಟಿ ಹಣ ಲುಕ್ಸಾನು ಮಾಡಿಕೊಂಡು ಈ ಭದ್ರಾವತಿ

4-00 P.M.

ಕಂಪನಿಗೆ ತೆಗೆದುಕೊಂಡಿದ್ದರೆ ಇದರಿಂದ ಸರಕಾರದ ಬೊಕ್ಕಸಕ್ಕೆ ಬಹಳ ಕಷ್ಟವಾಗುತ್ತಿತ್ತು. ಇದರಿಂದ ಸುಮಾರು ಕೋಟಿಗಟ್ಟಲೆ ಲುಕ್ಸಾನು ಆಗುತ್ತಿತ್ತು. ಮತ್ತೆ ಇಲ್ಲಿ ಒಂದು ಆಕ್ಸಿಜನ್ ಪ್ಲಾಂಟು ಇದೆ. ಇದರ ಕ್ಯಾಪಾಸಿಟಿ 1200 ಮಿಲಿಮೀಟರುಗಳಷ್ಟು ಉತ್ಪತ್ತಿ ಮಾಡಬೇಕು ಎಂದು ಇದ್ದರೂ ಇದರಿಂದ 1000 ಮಿಲಿ ಮೀಟರುಗಳಷ್ಟು ಉತ್ಪನ್ನವೂ ಮಾಡಲು ಆಗುತ್ತಿಲ್ಲ. ಮತ್ತು ಇದು ಆಗಾಗ್ಗೆ ಕೆಟ್ಟು ಹೋಗುತ್ತಾ ಇರುತ್ತದೆ. ಆದ್ದರಿಂದ ಎಲ್. ಡಿ. ಪ್ರೋಸೆಸ್ ಪ್ಲಾಂಟನ್ನು ಸರಿಯಾಗಿ ನಡೆಸುತ್ತಾ ಇಲ್ಲ. ಇದರಿಂದ ಪ್ರತಿವರ್ಷ ಒಂದು ಕೋಟಿ ರೂಪಾಯಿ ಲುಕ್ಸಾನು ಆಗುತ್ತಾ ಇದೆ. ಭದ್ರಾವತಿಗೆ ತರಿಸಿರುವ ಸ್ಪನ್‌ಪೈಪ್‌ಫೌಂಡ್ರಿ ಓಬಿರಾಯನ ಕಾಲದ್ದು. ಈ ಪ್ಲಾಂಟನ್ನು ತರಿಸಿದ್ದರಿಂದ ಅನುಕೂಲವಾಗಿರುವುದಿಲ್ಲ. ಇದನ್ನು ಕೊಂಡದ್ದರಿಂದ ಉತ್ಪತ್ತಿ ದರ ಜಾಸ್ತಿಯಾಗಿ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಮುವ್ವತ್ತು ಕೋಟಿಯಷ್ಟು ಬಂಡವಾಳವನ್ನು ಇಂತಹ ವ್ಯವಹಾರಗಳಿಂದ ಕೈಗಾರಿಕೆಗಳಿಗಾಗಿ ಹಾಕಿ ಅದರಿಂದ ಲುಕ್ಸಾನು ಮಾಡಿದೆ ರಾಜ್ಯದ ಬೊಕ್ಕಸದಲ್ಲಿ ನೂರಾರು ಕೋಟಿಗಳ ಹಣವೂ ಪೂರ್ತಿಯಾಗಿ ಲುಕ್ಸಾನು ಆಗುವುದರಲ್ಲಿ ಅನುಮಾನವಿಲ್ಲ. ಇದರ ಬಗ್ಗೆ ಸರಕಾರ ಸಾಕಷ್ಟು ಗಮನ ಕೊಡುತ್ತಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ.

ಇನ್ನು ನನ್ನ ಮಿತ್ರರು ಬೆಂಗಳೂರಿನಲ್ಲಿರುವ ಡೈರಿಯಲ್ಲಿ ಮಿಲ್ಕ್ ಸಪ್ಲೈ ಸ್ಕೀಂ ಬಗ್ಗೆ ಇಲ್ಲಿ ಹೇಳಿದರು. ಇದರಲ್ಲಿ ಎಷ್ಟು ಅನ್ಯಾಯಗಳಾಗುತ್ತಿವೆ ಎನ್ನುವುದನ್ನು ಯಾರೂ ನೋಡುವುದಕ್ಕೇ ಹೋಗುತ್ತಿಲ್ಲ. ಬೆಂಗಳೂರು ಮಿಲ್ಕ್ ಸಪ್ಲೈ ಸ್ಕೀಂನಲ್ಲಿ ಮಿನಿಮಂ ಹೀಟ್ ಇರುವ ಪ್ಲಾಂಟು 2 ಅಥವಾ ಮೂರು ಡಿಗ್ರಿ ಸೆಂಟಿಗ್ರೇಡಿನಷ್ಟು ಮಾತ್ರ ಇದೆ. ಇಲ್ಲಿರುವ ಪ್ಲಾಂಟಿನ ಕ್ಯಾಪಾಸಿಟಿ ಬೆಣ್ಣೆಯನ್ನು 6 ತಿಂಗಳು ಇಡಬೇಕಾದರೆ ಇತರ ಕಡೆಗಳಂತೆ—15 ಡಿಗ್ರಿ ಸೆಂಟಿಗ್ರೇಡ್ ಹೀಟು ಇಡಲು ಸಾಧ್ಯವಿಲ್ಲ—15 ಡಿಗ್ರಿ ಯಷ್ಟು ಹೀಟನ್ನು ಇಡುವಂತಹ ಪ್ಲಾಂಟುಗಳಿಲ್ಲದೆ ಬರೀ 2—3 ಡಿಗ್ರಿ ಸೆಂಟಿಗ್ರೇಡ್ ಇರುವಂತಹ ಪ್ಲಾಂಟುಗಳಲ್ಲೇ ಲಕ್ಷಾಂತರ ರೂಪಾಯಿಗಳ ಬೆಲೆ ಬಾಳುವ ಬೆಣ್ಣೆ ಹಾಗೂ ತುಪ್ಪಗಳನ್ನು ಇಟ್ಟು ಆರು ತಿಂಗಳವರೆಗೆ ಇಟ್ಟರೆ ಅದರಲ್ಲಿ ಹುಳಗಳು ಬಿದ್ದು ಹಾಳಾಗಿ ಹೋಗುತ್ತವೆ. ಇದರಿಂದ ಸರಕಾರಕ್ಕೆ ಸುಮಾರು ಲಕ್ಷಾಂತರ ರೂಪಾಯಿ ಹಣ ಲುಕ್ಸಾನು ಆಗುತ್ತಿದೆ. ಇದರ ಕಡೆಗೆ ಲಕ್ಷ ಕೊಡುತ್ತಿಲ್ಲ. ಒಂದು ಕೆ.ಜಿ. ಬೆಣ್ಣೆಗೆ 10 ರೂಪಾಯಿಗಳಂತೆ ಬಾಳುವ ಬೆಣ್ಣೆಯನ್ನು 1 ರೂಪಾಯಿಗೆ ಕೂಡ ಕೆಟ್ಟಮೇಲೆ ಜನ ತೆಗೆದುಕೊಳ್ಳುವುದಿಲ್ಲ. ಇದರಿಂದ ಈಗ ಇಲ್ಲಿ ಹತ್ತು ಲಕ್ಷದಷ್ಟು ಲುಕ್ಸಾನು ಆಗುತ್ತಿದೆ. ಮತ್ತು ಬೆಣ್ಣೆಯ ಸ್ಟಾಕ್ ಎಲ್ಲಾ ಹಾಳಾಗುತ್ತಿದೆ. ಹೀಗೆ ಇಂದು ಬೆಂಗಳೂರು ಡೈರಿಯಲ್ಲಿ ಒಂದೂವರೆ ಲಕ್ಷ K. G. ಬೆಣ್ಣೆ ಬೆಲೆ ಲುಕ್ಸಾನು ಮತ್ತು ಭದ್ರಾವತಿಯಲ್ಲಿರುವ ಕಾರ್ಖಾನೆಯಲ್ಲಿ ಸುಮಾರು ಒಂದೂವರೆ ಕೋಟಿಯಷ್ಟು ಲುಕ್ಸಾನು ಸರಕಾರಕ್ಕೆ ಬರುವುದಾದರೆ ಸರಕಾರದ ಗುರಿ ಏನು ಆದಾಯ ಪಡೆಯುವುದಕ್ಕೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇನ್ನು ಹಾಳಾಗಿ ಹೋಗುತ್ತಿರುವ ಬಟ್ಟೆ ಮಿಲ್ಲುಗಳಿಗೆ ಪುನಃ ಹಣವನ್ನು ಬಂಡವಾಳವಾಗಿ ಹಾಕಿ ಅದನ್ನು ಪುನಃ ಆರಂಭ ಮಾಡಿದರೆ ಅದರಿಂದೇನು ಆದಾಯ ಬರುತ್ತದೆ? ಮತ್ತು ಈ ಹಾಲಿನ ಡೈರಿಯಲ್ಲಿ ಹಾಲನ್ನು ತರುವುದಕ್ಕಾಗಿ ಒಂದು ಕಿಲೋಮೀಟರಿಗೆ ನಾಲ್ಕು

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ರೂಪಾಯಿಗಳಂತೆ ಬಾಡಿಗೆ ಕೊಟ್ಟು ಲಾರಿಗಳನ್ನು ಹಾಗೂ ವ್ಯಾನುಗಳನ್ನು ಮಾಡಿಕೊಂಡು ಹಾಲನ್ನು ತರುತ್ತಿದ್ದರೆ ಇದರಿಂದ ಸರಕಾರಕ್ಕೆ ಎಷ್ಟು ನಷ್ಟ ಬರುತ್ತದೆ ಎನ್ನುವುದನ್ನು ಯಾರೂ ಯೋಚನೆ ಮಾಡುತ್ತಿಲ್ಲ. ಇಲ್ಲಿ ಆಗುತ್ತಿರುವ ಆಭಾಸಗಳು ಬೇರೆಲ್ಲೂ ನಡೆಯುತ್ತಿಲ್ಲ. ಇದರ ಬಗ್ಗೆ ಸರಕಾರ ನಿಗಾ ಇಡುತ್ತಿಲ್ಲ. ಇಲ್ಲಿರುವ ಕಂಟ್ರಾಕ್ಟರುಗಳಿಗೆ ಅನುಕೂಲವಾಗಲಿ ಎಂದು ಇವೆಲ್ಲ ಮಾಡುತ್ತಿದ್ದಾರೆ. ಮತ್ತು ಇಲ್ಲಿರುವ ಒಬ್ಬ ಅಧಿಕಾರಿಗೆ ಅವರು ಮಾಡಿರುವ ಕೆಲಸಕ್ಕೆ ಬಹುಮಾನವಾಗಿ ಒಬ್ಬರು ಒಂದು ಸ್ಟ್ಯಾಂಡರ್ಡ್ ಕಾರನ್ನು ಕೂಡ ಕೊಟ್ಟಿದ್ದಾರೆ ಮತ್ತು ಅವರು ಅದನ್ನು ಈಗಾಗಲೇ ಓಡಾಡಲು ಉಪಯೋಗಿಸುತ್ತಿದ್ದಾರೆ ಎಂದೂ ಕೇಳುತ್ತೇವೆ ಮತ್ತು ಕೆಲವು ಕಾರಣ ನಂತರ ಈ ಕಾರನ್ನು ಅವರ ಹೆಸರಿಗೆ ಟ್ರಾನ್ಸ್‌ಫರ್ ಮಾಡಲು ಪ್ರಯತ್ನ ನಡೆಸುತ್ತಿದ್ದಾರೆಂದಲೂ ಕೇಳುತ್ತೇವೆ. ಇದರ ಬಗ್ಗೆ ಇನ್ನೂ ಯಾವ ರೀತಿಯಾಗಿ ಹೋಗುತ್ತಿದ್ದೇವೆ ಎನ್ನುವುದು ಯಾರಿಗೂ ಗೊತ್ತಾಗುತ್ತಿಲ್ಲ.

ಇನ್ನು ನಮ್ಮ ಇಂಡಸ್ಟ್ರೀಸ್ ಮಿನಿಸ್ಟರು ಇಲ್ಲಿ ಹೇಳಿದರು ಎಂ.ಎಸ್.ಕೆ. ಮಿಲ್ಸ್‌ಗೆ ಬಂಡವಾಳ ಹಾಕುತ್ತೇವೆ ಎಂದು. ಈ ಮಿಲ್ಲಿನಲ್ಲಿರುವುದು 19ನೇ ಶತಮಾನದ ಸ್ಪಿಂಡಲ್‌ಗಳು ಇಂತಹ ಸ್ಪಿಂಡಲ್‌ಗಳನ್ನು ಇಟ್ಟುಕೊಂಡು ಮುಂದುವರಿದರೆ ಇದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ ಮತ್ತು ಈ ಟೆಕ್ಸ್‌ಟೈಲ್ ಮಿಲ್ ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದರೂ ಮತ್ತು ಬಟ್ಟೆ ಬೆಲೆ ಕೂಡ ಈಗ ಇಳಿಯುತ್ತಿದ್ದರೂ ಇಂತಹ ಮಿಲ್ಲುಗಳನ್ನು ಮುಚ್ಚಬೇಕು ಎಂದು ಹೇಳುತ್ತಿದ್ದರೂ ಕೂಡ ಇವೊತ್ತು ಸರಕಾರ ಇದಕ್ಕೆ ಹೊಸದಾಗಿ ಬಂಡವಾಳ ಹಾಕಿ ಅದಕ್ಕೆ ಗ್ಯಾರಂಟಿಯಾಗಿ ನಿಂತು ಇದನ್ನು ಮಾಡಬೇಕೆಂದು ಹೇಳುತ್ತಿರುವುದು ನೋಡಿದರೆ ಇದರಲ್ಲೇನೋ ಇದೆ ಎಂದು ಹೇಳಬೇಕಾಗಿದೆ. ಈಗಿರತಕ್ಕ ಸ್ಥಿತಿಯಲ್ಲಿ ಇಂತಹ ಮಿಲ್‌ಗಳಿಂದ ಯಾವ ಕೆಲಸಗಳನ್ನೂ ಮಾಡಲು ಸಾಧ್ಯವಿಲ್ಲ. ಇದು ಒಳ್ಳೆಯ ಸ್ಥಿತಿಯಲ್ಲಿಲ್ಲ ಎಂದು ಹೇಳಿದರೂ ಮಾನ್ಯ ಮುಖ್ಯ ಮಂತ್ರಿಗಳು ಈ ಮಿಲ್ಲನ್ನು ಪುನಃ ತೆರೆಯುತ್ತೇವೆ ಎಂದು ಹೇಳುವುದು ಯಾವ ತರಹದ ಧೋರಣೆ ಎಂದು ನಾನು ಇಲ್ಲಿ ಕೇಳಬೇಕಾಗಿದೆ, *ಹಾಳಾಗಿ ಹೋಗಿರುವ ಈ ಮಿಲ್ಲಿಗೆ ಹಣವನ್ನು ಹಾಕಿದರೆ ಇದರಿಂದ ಲುಕ್ಸಾನು ಆಗುವುದಿಲ್ಲವೇ ? ಮೊದಲೇ ಇಂತಹ ಕಾರ್ಯಗಳಿಗೆ 332 ಕೋಟಿಯಷ್ಟು ಬಂಡವಾಳ ಹಾಕಿ ಹೋಗಿದೆ. ಪುನಃ ಈಗ ಸುಮಾರು 152 ಕೋಟಿಗಾಗಿ ಗ್ಯಾರಂಟಿ ಸಹ ಆಗಿರುತ್ತಾರೆ. ಎಂದು ಹೇಳಲು ಯಾವ ಜವಾಬ್ದಾರಿಯಿಂದ ಹೇಳುತ್ತೀರಿ ? ಇವೊತ್ತು ಸರ್ಕಾರ ಹಾಳಾಗಿ ಹೋಗುತ್ತಿರುವ ಎಲ್ಲ ಕಂಪನಿಗಳಿಗೂ ಈ ರೀತಿ ಬಂಡವಾಳಗಳನ್ನು ಹಾಕುತ್ತಾ ಹೋದರೆ ಇದರಿಂದೇನು ಪ್ರಯೋಜನವಾಗುತ್ತದೆ ? ಎಂ.ಎಸ್.ಕೆ. ಮಿಲ್ಸ್ ಕಂಪನಿಗೆ ಒಂದೂಕಾಲು ಕೋಟಿ ಬಂಡವಾಳ ಹಾಕಿ ಇದರಿಂದ ಲುಕ್ಸಾನು ಏಕೆ ಮಾಡಿಕೊಳ್ಳುತ್ತೀರಿ ? ಇಲ್ಲಿರುವ ಮೆಷಿನರಿಗಳ ಬೆಲೆ ಕೂಡ ಸ್ಕ್ರ್ಯಾಪ್‌ಗೆ ಕೊಡುವಂತಹ ಬೆಲೆ ಕೂಡ ಬರುವುದಿಲ್ಲ. ಇಂತಹ ಪರಿಸ್ಥಿತಿ ಇರುವಾಗ ಇದನ್ನೇಕೆ ಬಂಡವಾಳ ಹಾಕಿ ಪುನಃ ಆರಂಭ ಮಾಡಬೇಕೆಂದಿದ್ದೀರಿ ? ಮದ್ರಾಸು ರಾಜ್ಯದಲ್ಲಿ ಇಂಡಸ್ಟ್ರೀಗಳ ಬಗ್ಗೆ ನೀವು ನೋಡುವುದಾದರೆ, ಆ ದೇಶದಲ್ಲಿ ಸುಮಾರು ಮೂರೂವರೆ ಕೋಟಿಯಷ್ಟು ಆದಾಯ ಬಂದಿದೆ ಎಂದು ಅವರ ಬಡ್ಜೆಟ್ಟಿನಲ್ಲಿ ಹೇಳಿದ್ದಾರೆ. ಆದರೆ ನಮ್ಮ ದೇಶದಲ್ಲಿ ಹಾಳಾಗಿ ಹೋಗುತ್ತಿರುವ ಕೈಗಾರಿಕೆಗಳಿಗೆ ಬಂಡವಾಳ ಹಾಕಿ ಹಾಳುಮಾಡುತ್ತಿದ್ದಾರೆ.

ಇನ್ನು ನಮ್ಮ ರಾಜ್ಯ ಸರ್ಕಾರದವರು ಸುಮಾರು ಎಂಟು ಕೋಟಿಯಷ್ಟು ಬಂಡವಾಳ ಹಾಕಿ ಮಂಡ್ಯದ ಹತ್ತಿರ ಅಸಿಟೇಟ್ ಫ್ಯಾಕ್ಟರಿ ಪ್ರಾರಂಭ ಮಾಡುತ್ತಿದ್ದಾರೆ. ಎಂದರೆ ಇದಕ್ಕೆ ಶೇಕಡಾ ಆರರಷ್ಟು ಬಡ್ಡಿ ಎಂದರೂ ಸುಮಾರು 50 ಲಕ್ಷ ಬರುತ್ತದೆ. ಇನ್ನೂ ಈಗ ಫ್ಯಾಕ್ಟರಿ ಆರಂಭವಾಗಿಲ್ಲ. ಇದರಲ್ಲಿ ಹಾಕಿರುವ ಬಂಡವಾಳಕ್ಕೆ ತಕ್ಕಷ್ಟು ಪ್ರೊಡಕ್ಷನ್ ಬರದೇಇದ್ದರೆ ಇದರಿಂದೇನು ಲಾಭವಾಗುತ್ತದೆ. ಸುಮಾರು 50 ಲಕ್ಷದಷ್ಟು ಬಡ್ಡಿಯೇ ಇಲ್ಲಿ ಹಾಕಿರುವ ಬಂಡವಾಳಕ್ಕೆ ಆಗುತ್ತದೆ. ಇದನ್ನು ಸರ್ಕಾರ ಈಗ ಸರಿಯಾಗಿ ಯೋಚನೆ ಮಾಡಬೇಕಾಗಿದೆ. ಇವೊತ್ತಿನ ದಿವಸ ನಮ್ಮ ಸರ್ಕಾರದಲ್ಲಿ ಹಣಕಾಸಿನ ಮಂತ್ರಿಗಳು ಹಾಗೂ ಕೈಗಾರಿಕಾ ಮಂತ್ರಿಗಳೂ ಒಬ್ಬರೇ ಆಗಿರುವುದರಿಂದ ಇದರ ಬಗ್ಗೆ ಆಳವಾಗಿ ಅವರು ಯೋಚನೆ ಮಾಡದೇಕಾಗಿದೆ. ಬರೀ ಕೈಗಾರಿಕೆಗಳಲ್ಲಿ ಕಾರ್ಪೊರೇಷನ್‌ಗಳನ್ನು ಮಾಡಿ ಅದರಲ್ಲಿ ಅಧಿಕಾರಿಗಳನ್ನು ತುಂಬುತ್ತಿದ್ದರೆ ಕೈಗಾರಿಕೆಗಳು ಹೇಗೆತಾನೇ ಮುಂದಕ್ಕೆ ಬರುತ್ತವೆ ? They bring always boosted estimates. ಹತ್ತು ಸಾವಿರದಲ್ಲಿ ಒಂದು ಕೆಲಸ ಆಗುವುದಾಗಿದ್ದರೆ ಅದಕ್ಕೆ ಇಪ್ಪತ್ತು ಸಾವಿರದಷ್ಟು ಎಸ್ಟಿಮೇಟುಗಳನ್ನು ತರುತ್ತಾರೆ. ಇದರ ಬಗ್ಗೆ ಒಂದು ಉದಾಹರಣೆ ಹೇಳಬೇಕಾದರೆ ಚಾಮರಾಜನಗರದ ತಾಲ್ಲೂಕಿನಲ್ಲಿ ಒಂದು ಸಿಲ್ಕ್ ಫ್ಯಾಕ್ಟರಿ ಇದೆ. ಅಲ್ಲಿರುವ ಕಾರ್ಖಾನೆಗಳ ನೌಕರರುಗಳಿಗಾಗಿ ಕಕ್ಕಸುಗಳನ್ನು ಕಟ್ಟಿಸುವುದಕ್ಕಾಗಿ

ಸುಮಾರು 70 ಸಾವಿರದ ಒಂದು ಎಸ್ಟಿಮೇಟನ್ನು ಸರ್ಕಾರಕ್ಕೆ ಕಳುಹಿಸಿದ್ದರು. ಇದರಲ್ಲಿ ಕಾರ್ಮಿಕರುಗಳಾಗಿ ಕಕ್ಕಸುಗಳನ್ನು ಕಟ್ಟಲು ಆರ್.ಸಿ.ಸಿ. ರೂಫ್‌ಗಳನ್ನುಹಾಕಬೇಕು ಟೀಕ್‌ವುಡ್ ಬಾಗಿಲು ಕಿಟಕಿ ಹಾಕಬೇಕು ಹಾಗೂ ಫ್ಯಾನ್‌ಗಳು ಇತ್ಯಾದಿಗಳನ್ನೆಲ್ಲಾ ಮಾಡಬೇಕು ಎಂದು ಒಂದು ಎಸ್ಟಿಮೇಟನ್ನು 70 ಸಾವಿರಕ್ಕೆ ಕಳುಹಿಸಿದ್ದರು. ಇದನ್ನು ಸರಿಯಾಗಿಲ್ಲ ಎಂದು ಪುನಃ ವಿಚಾರ ಮಾಡಿ ವಿವರಗಳು ತಿಳಿದಾಗ ಅದನ್ನು 17 ಸಾವಿರಕ್ಕೆ ಇಳಿಸಿ ಮಂಜೂರು ಮಾಡಿದರು. ಈಗ ಅಲ್ಲಿ ಕಕ್ಕಸುಗಳನ್ನು ಕಟ್ಟಿದ್ದಾರೆ. ಅವೆಲ್ಲಾ ಇನ್ನೂ ಚೆನ್ನಾಗಿಯೇ ಇವೆ. ಹೀಗೆ ಕಾರ್ಪೊರೇಷನ್ನುಗಳನ್ನು ಮಾಡಿ ಬರೀ ಅಧಿಕಾರಿಗಳನ್ನೇ ಅದರಲ್ಲಿ ತುಂಬಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಸರ್ಕಾರ ವಿಚಾರ ಮಾಡಿ ಇಂತಹ ಅಧಿಕಾರಿಗಳ ಜೊತೆಗೆ ಇಬ್ಬರು ನಾನ್ ಅಫಿಷಿಯಲ್ಸ್‌ಗಳು ಕೂಡ ಇದರಲ್ಲಿರುವಂತೆ ಮಾಡಿದರೆ ನಿಮ್ಮ ಕೈಗಾರಿಕೆಗಳು ಚೆನ್ನಾಗಿ ನಡೆಯಲು ಅನುಕೂಲವಾಗುತ್ತದೆ. ಕಾರ್ಪೊರೇಷನ್ನುಗಳನ್ನು ಮಾಡಿ ಸರ್ಕಾರ ಜನತೆಗೆ ದ್ರೋಹ ಮಾಡುತ್ತಿದೆ ಮತ್ತು ಇಲ್ಲದ ಲಂಚರುಷುವತ್ತುಗಳು ಇದರಿಂದ ಹೆಚ್ಚುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದಕ್ಕೋಸ್ಕರ ಸರ್ಕಾರ ಬಂಡವಾಳ ಹಾಕುವಾಗ ಸ್ವಲ್ಪ ನಿಗಾ ಇಟ್ಟು ಹಾಕಬೇಕು. ಜನ ಕೊಡುವ ತೆರಿಗೆಯಿಂದಲೇ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಬಂಡವಾಳ ಹಾಕಿ ಅದರಿಂದೇನೂ ಸರಿಯಾದ ಪ್ರತಿಫಲ ಬಾರದೇ ಹೋದರೆ ನಿಜವಾಗಿಯೂ ಅದರಿಂದ ದೇಶದ ಬಡಜನರ ಹಣ ಹಾಳಾಗಿ ಹೋಗುತ್ತದೆ. ಇದರ ಕಡೆಗೆ ಸರ್ಕಾರ ಲಕ್ಷ್ಯಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI S. D. KOTHAVALE (Sankeswar)-—Mr. Speaker Sir, I heartily welcome the Budget presentcd by the hon'ble Finance Minister. I am complimenting him for presenting a forthright and realistic budget. It gives a correct picture of the financial position we are facing to-day. He has shown a small surplus. While showing that surplus he has not concealed in any manner the financial difficulties faced by the State. He has indicated that the year starts with a negative balance. Consequently, he has indicated the necessity of having overdrafts for some time to come. He has indicated an additional expenditure to the tune of nearly Rs. 8 crores or so for meeting the dearness allowance and pensionary allowances of the Government servants, which is left uncovered.

He has not concealed the difficulties at all. A similar situation is to be found in other States also. Most of the State Governments have presented their State Budgets. The Union Government also have presented their budget. According to the estimates presented by the Finance Minister of the Union Government Sri Morarji Desai, there is a deficit to the extent of nearly Rs. 300 crores. So, such difficulties are being experienced not only in India but outside India also. It may be seen that even the United Kingdom, which is one of the most advanced countries of the world, is facing difficulties about these budgetary matters. They are cutting down their expenditure not only on Defence but on other matters also. This is a common trend not only in India but outside also.

Therefore, we should not be alarmed though one cannot be complacent about it In our State we have a small surplus. In order to have surplus, the Madras Government and even the Punjab Government are resorting to another source of income through raffles or lotteries. Now that is a sort of extreme step. Lotteries and raffles depend upon the weakness of the human mind, which wants easy money, money without doing anything. Therefore, to get income of that sort may not be good, may not be worthy of a principle. But due to the exigencies of the Government those Governments

(SRI S. D. KOTHAVALE)

have taken recourse to these expediencies. I do not know whether it would not be in the interest of our State also to tap that source of income also here. Left to ourselves, probably we would not have thought of that source of income. But exigency and expediency would require that we in this State also must tap that source also. If there are raffles run by the neighbouring Madras Government or other State Governments, with a view to try their luck, people of this State also may purchase lottery tickets; and in that way thousands of rupees from our State may go to Punjab, Madras and other places. Instead of allowing our money from this State to go outside the State, I suggest to our Government whether they also should not start a raffle here. I leave the matter at that.

Further it was argued by two very prominent members from the Opposition that the Finance Minister is practising brinkmanship. I don't think it is practised by the Finance Minister. No doubt, there are financial difficulties. We are caught between two evils. On the one hand, there is financial stringency; on the other, there is extreme necessity for expediting our developmental works. For instance, the Planning Commission insisted upon an expenditure of Rs. 51 crores; but the State Government was determined to pitch the expenditure for the 1968–69 Plan at least at the level of the last year, namely, Rs. 60.2 crores. That amount has to be found. We cannot stop that. That is the position at the Government of India level also. can There is the difficulty of foreign exchange. It is doubtful to what extent we are going to have Aid Loans from foreign countries. We do not know whether such loans are tied loans or untied loans. These are the various questions that are plaguing us. We cannot halt here. We must proceed with the development work. We are in a hurry to improve our conditions to the extent possible, with as much expeditious as possible. Therefore, it is wrong to attribute brinkmanship to the hon. Finance Minister.

My learned brother and hon. Member Sri H. M. Channabasappa stated that the Finance Minister was indulging in a sort of jugglery of figures. I cannot understand what he meant. Probably Mr. Channabasappa has a jugglery of his own words. Nothing of the kind is there. It is wrong to describe the Budget like that. It is very wrong to describe this very realistic picture that is presented by the Finance Minister as jugglery of figures. Mr. Rajaih Setty said that this Budget means any thing to every body and everything to anybody. It is not so. Facts are there. But the hon. members must draw inferences—correct inferences. One cannot say that the situation is alarming. Howevere we cannot be complacent about it. We have to be wary about our financial policy. There are optimistic statements also in the budget presented by the Finance Minister. On page 40 of his speech, he has stated:

"Our assets will in due course yield sufficient returns, direct and indirect, which will give take-off to our economy.

> We have already seen the light of the future radiating in our Power Projects, Irrigation and other sectors of Agriculture. This light will brighten with the impetus given by new Industries which are now in stages of development crossing the effect of recession.''

Therefore, though the present position is not very happy, the future is very bright indeed. We shall examine to what extent the future is bright at this stage only. As regards our public debt position, I wish to say a few words. What are the likely returns from the assets that we have built and the amounts we have spent on building those assets? The Public Debt of the Mysore State is about Rs. 342.80 lakhs. Of course, something has got to be added to that figure becuse there are about Rs.26.64 lakhs outstanding balances on unfunded debt and on deposits. I think the Debt can be taken to be in the neighbourhood of Rs. 369 crores. As against this, the assets that are built are of the order of nearly Rs. 437 crorese The hon. Members will find on page 285 of this Budget Memorandum that this total debt of nearly Rs. 369 crores includes public debt borrowed in the open market, loans due to the Government of India and loans taken advan age of a result of Ways and Means Advances. This includes public debt of about 25 crores of rupees which wehave got from the ex-Mysore State. Then, add to this the share of Government of India loan transferred from the integrated areas 11. 79 crores —nearly 12 crores which came to New Mysore State from the integrated areas. Share of Public loans attributable to Bombay and Madras States is 581. 42 lakhs —*i.e.* nearly 6 crores rupees. Any way, the total comes to nearly 49 crores of rupees. If we make allowance for that, we will find the debt incurred on various accounts cost about 320 crores of rupees. The assets are valued to be Rs. 427 crores. I am not alarmed of this public debt figure, provided take fiull advantage and get sufficient returns from these built up assets. But, I am sorry to say that we are not realising the returns that we expected. Take for instance, our irrigation. As regards irrigation, I might bring to the notice of of the Government that in Annexture A attached to the speech of the Finance Minister, page 4, it will be found the net receipts from irrigation excluding interest on capital in 63-64 and it is surprising to see minus 36. 32—minus mind you! in 64-65 it is minus 23. 24; in 65-66 it is minus 48.17; in 66-67 it is minns 81. 36; in 67—68 it is minus 21.38. Now for the budget year they have taken a credit for 81. 06 lakhs. The net result will show a very large deficit. Therefore, we have invested crores and crores of rupees on irrigation projects and the amount that is recovered is not sufficient even to cover the maintainance charges. I do not understand why no attempt is made by Government to get sufficient return from such huge amounts invested in the irrigation projects. We may cite some examples. For instance, in the Maharastra State they charge Rs. 450 per acre for a sugar-cane crop. Here, according to the maximum that is fixed only last year, they charge

(SRI S. D. KOTHAVALE)

Rs. 60 per acre. What is that amount? Supposing a private effort is made by a person to sink a well and fix a pump set or lift water with animal power; it cannot be less than Rs. 1,000 per acre, but we are recovering only Rs. 60 here. It is a very sorry thing. At least if the interest charges are recovered and reasonable amount is levied, we should be able to get 15 to 20 crores of rupees from this source only, I do not understand why Government is hesitating to impose proper water rates. We may appeal to the irrigators who are taking advantage of this low rate to be generous. They should be generous and when they get advantage of the irrigation facilities provided to them, they should try to give sufficient return to Government so that the amount or return may be utilised for the other irrigation projects elsewhere. If we are prosperous, we should see others also prosper. That should be the attitude of every citizen in the State. Therefore, Government can recover sufficient return from the irrigation facilities given and if that is done, some of the difficulties that are experienced in a matter of our finances would actually disappear.

As regards industries, the Finance Minister has said that the investment is to the order of Rs. 22.78 crores. The dividend that we are getting is Rs. 17 lakhs 85,193. It may work out much below one per cent. But, the Finance Minister is thinking that the he is likely to make profit and hopes to get about 9 to 10 per cent on the investments made on industries. He has made certain suggestions in this connection. He is thinking of appointing an Industrial Commissioner and a Cost accounting expert. Undoubtedly cost accounting is very important and it would be possible to effect economy and realise profits by the processes of cost accounting. One of the difficulties experienced by the industries in Mysore State is, the absence of effecient managerial cadre. Managers are appointed by Government and they are transferred from one industry to another within a short time. By the time they get a grip over the particular industry, they are transferred and their experience is lost. I would suggest here that Government may develop a Managerial Cadre for these industries and get them trained here or elsewhere, if necessary, so that they may man the industries properly. Secondly, the powers to be given to these Managers should be adequate. These Managers who are placed in charge of the industries should have power to take decisions on the spot and should not depend for the day to day administration, upon advice from above. We may see how private industries prosper. They are the owners and proprietors and they take decisions on the spot looking into the market conditions; they make appointments; they give promotions to their servants and gives incentives for the deserving persons. Unless we bring into operation some of the methods of the private industries into the public industries, it would be very difficult to get profit that they get and which we are not getting now, from Government industries. In some of these industries, the machinery might be old. Unless they have uptodate

machinery, the cost of production are bound to increase and it would be difficult for the products of these industries to compete in the market. If some new machineries are secured, the conditions of industries might improve In certain industries they lack even the working capital, and therefore they are not able to purchase raw material necessary in competitive markets. They make some credit purchases here and there. That is one of the reasons why our industries are not giving the necessary return.

4-30 P. M.

Another reason probably is inefficiency of our labour. Here of course we have to admit one thing. The hon'ble Finance Minister said we have a cheap labour. But on close scrutiny, it would be found, it is not at all cheap. It is very costly. Take a German worker; he is five times better than his Indian counterpart. Therefore the work put in by a German labour and by our workers, the ratio is 1:5. Probably Hindustan Machine Tools is the one unit where it is reduced. In that way our labourers are very inefficient. May be we have to train them. We have to bear this fact in mind. I am bringing this to the notice of the Finance Minister so that if possible efficiency goes up and the cost of production is reduced. The success of an industry depends upon better agriculture. With better harvest the raw materials required for industries might be cheaper and we can take advantage of this situation to earn profit. Another important thing is, if the Government really finds that a particular unit is not working well and is sick and has become uneconomic, they should not hesitate to colse down such unit. Let them examine the position, consider every industrial unit on economic basis and if they come to the conclusion that an unit is uneconomic there should be no hesitation to close down such an unit. That will enable our industries to get better return. Another thing is we are suffering from want of research. We are trying to produce things according to old practice and we are not able to meet new demands. If we have research and try to find the requirements of the public and the demand of the consumers, it would be helpful.

[MR. CHAIRMAN (Dr. R. NAGAN GOWDA) in the Chair].

Some criticisms were made as to how we are after capitalists in Bombay, Calcutta and foreign countries. I do not share the sentiments expressed by the hon'ble members in this context. Unless our economic conditions improve, and unless we have a self-generating economy, there is no salvation. Let us be clear about it. There will not be any stability in the absence of economic improvement. We cannot raise the standard of living of our people without economic development and we cannot solve unemployment problem. For that purpose industrialisation is a must and that too it should be expeditious. Speedy industrialisation is a necessity. Industrialisation can be had in three ways. Admittedly we are an undeveloped country and therefore we have to

(SRI S. D. KOTHAVALE)

absolutely depend upon advanced countries for economic aid and know-how technological progress. Supposing we do not depend upon them, it might take 200 years for us to improve our economy in the modern sense. Some of the developing countries are inviting foreign entre-prenuers to start industries in their areas. Some of the African countries are doing it. We must have aid. We have started planning. India has become a model in planning. For our planning nearly 80 per cent of the resources we require come from within and 20 per cent come from outside either in the form of loan or in the form of grant and something of that type. We purchase machinery and we purchase capital goods and raw materials not available here. We import also technical know-how. There is nothing wrong in inviting capital if in our State we have not got enough of it. Capitalism may be bad, but capital is a necessity. In the present context there is nothing wrong in inviting persons to start industries. I do not think objection should be taken by the members opposite against the course followed by the Chief Minister and Finance Minister for the purpose of getting sufficient capital, technical know-how and participation and all that.

While inviting industrialists and starting these industries, we should be careful in seeing that unemployment of the people in this area is removed. There are many Government of India units located in our State and there is a complaint that the people residing in the Mysore State are not having sufficient opportunity of employment therein. An aluminium company is going to be started in Belgaum and there is a complaint that they are trying to recruit persons for running this factory from outside. That should not happen. Industrialisation is meant not only for the purpose of producing more goods but also for enabling people to improve their standard of life, and to provide employment opportunities to the people. If employment opprotunities are not available to the people in the area then I think there is no much meaning in having industries. The very purpose of dispersal of industries throughout the country in various States is to create employment potential for the people living in those States. All things being equal, preference in employment should be given to the persons in locality.

MR. CHAIRMAN.—The hon'ble Member's time is over.

SRI S. D. KOTHAVALE.—I wanted to say many other things but as my time is over, I shall reserve my remarks on other points for some other occasion. Before closing, I want to point out that some of the senior hon'ble Members opposite while speaking the other day used language and expressed ideas which really astounded me. One hon'ble Member said that he would advise the people not to pay taxes. Another hon'ble Member said that they would advise the people not to pay levy and went to the length of saying that he would call upon the students to overthrow the Government. Such remarks and observations strike at the very root of democracy organised society. The electorate is there and

every five years you have got election and if the Government is not exercising power in a proper manner, they can change the Government. I think one should not call upon the students to overthrow the Government. It is very improper to suggest that people should not pay taxes or levy.

As I said, I wanted to reply to many other points raised by them but for want of time I do not do it. I would like to tell them that such sentiments should not be expressed here and we should advise people to be constitutional and obey the laws passed by this august House. Thank you, Sir.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇರತಕ್ಕಂಥ 1968-69ನೇ ಸಾಲಿನ ಈ ಆಯವ್ಯಯ ಪಟ್ಟಿಯ ಬಗ್ಗೆ ಮಾನ್ಯ ಸದಸ್ಯರುಗಳು ಸಭೆಯಲ್ಲಿ ಆಗಲೇ ಬಹಳ ಜನ ಪ್ರಸ್ತಾಪಮಾಡಿದ್ದಾರೆ. ಕೆಲವರು ಅರ್ಥಮಂತ್ರಿಗಳನ್ನು ಅಭಿನಂದಿಸಿದ್ದಾರೆ, ನನಗಾದರೂ ಅಭಿನಂದನೆ ಮಾಡಬೇಕು ಅನ್ನುವುದಕ್ಕೆ ಇದರಲ್ಲಿ ಅಂಥದ್ದೇನೂ ಕಂಡು ಬರುವುದಿಲ್ಲ. ಸ್ವಾಮಿ, ಈಗತಾನೆ ಮಾನ್ಯ ಕೊಠಾವಳೆಯವರು ಮಾತನಾಡತಕ್ಕ ಕಾಲದಲ್ಲಿ ಅಂಕಿ ಅಂಶಗಳಬಗ್ಗೆ ಕೆಲವು ಸಂಶಯವನ್ನು ವ್ಯಕ್ತಪಡಿಸಿದ್ದನ್ನು ಕುರಿತು ಅವರು ಸ್ವಲ್ಪ ಅಸಮಾಧಾನವನ್ನು ವ್ಯಕ್ತಪಡಿಸಿದರು. ನಾನು ಮಾನ್ಯ ಅರ್ಥಸಚಿವರನ್ನು ಕೆಲವು ವಿಚಾರಗಳನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ ಅವರು ತಮ್ಮ ಉತ್ತರದಲ್ಲಿ ಈ ಕೆಲವು ವಿಷಯಗಳಿಗೆ ಸಮಜಾಯಿಷಿ ಕೊಡಬೇಕು. ನಮ್ಮ built up assets 1968ನೇ ಸಾಲಿಗೆ ಮಾಡಿದಂತಹ ಬಜೆಟ್ ಭಾಷಣದಲ್ಲಿ ತಾವು ಕೊಟ್ಟಿರುವ ಅಂಕಿಅಂಶದ ಪ್ರಕಾರ 427 ಕೋಟಿ ರೂಪಾಯಿ ಎಂದು ತಿಳಿಸಿದ್ದೀರಿ. ಎಷ್ಟು ಮಟ್ಟಿಗೆ ತಮ್ಮ ಈ ಅಂಕಿಅಂಶಗಳು ಸತ್ಯಕ್ಕೆ ಒಳಪಟ್ಟಿವೆ ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ತಾವು 'Brief Review of Myore Economy, 1967' ಅದರಲ್ಲಿ ತಮ್ಮ ಬಿಲ್ಟ್ ಅಪ್ ಅಸೆಟ್ಸ್ ಏನೆಂಬುದನ್ನು ತಿಳಿಸಿದ್ದೀರಿ.

> "The capital assets of the State are estimated to have increased from Rs. 195.91 crores at the end of 1958-59 to Rs.384.83 crores at the end of 1967-68."

Further it is stated :

> "It is well covered by assets in various forms and the book value of this representing irrigation projects and power projects Buildings, Communications Industries, etc., stand at Rs. 471.95 crores at the end of the current year."

ಇವತ್ತು ಹೇಳಿರುವ ಈ 427 ಕೋಟಿ ರೂಪಾಯಿ ಈ ತಮ್ಮ ಫಿಗರ್ ಒಂದಕ್ಕೊಂದಕ್ಕೆ ರಿಕನ್ಸೈಲ್ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು ಮತ್ತು ಯೋಜನೆ ಮಂತ್ರಿಗಳು).—ಅದು ಹೋದ ವರ್ಷ ಹೇಳಿದ್ದು. ಈ ಅಸೆಟ್ಸ್ ಯಾವಾಗಲೂ ಕರೆಕ್ಟ್ ಆಗಿ ಮಾರ್ಕೆಟ್‌ವ್ಯಾಲ್ಯೂ ಮಾಡುವುದಕ್ಕಾಗುವುದಿಲ್ಲ. ಅಕೌಂಟೆಂಟ್ ಜನರಲ್‌ರವರು ಏನು ಸರ್ಟಿಫೈ ಮಾಡಿದ್ದಾರೆ ಅದರ ಬೇಸಿಸ್ ಮೇಲೆ ನಾವು ಕೊಟ್ಟಿರುವುದು. ಈಗ ಅಸೆಸ್ ಮಾಡಬೇಕಾದರೆ ಒಂದು ಇರಿಗೇಷನ್ ಪ್ರಾಜೆಕ್ಟ್ ಇದೆ 10 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಎಂದು ಇಟ್ಟುಕೊಳ್ಳೋಣ ಅದರ ಮೇಲೆ ಡಿಪ್ರಿಸಿಯೇಷನ್ ಪಡೆಯಬೇಕೇ ಅಥವಾ ಅಪ್ರಿಸಿಯೇಷನ್ ಪಡೆಯಬೇಕೆ ಎಂದು ಹೇಳುವುದೇ ಒಂದು ವಾಗ್ವಾದ ಆಗಬಹುದು. ಆ ಪ್ರಾಜೆಕ್ಟಿನ ಕೆಳಗೆ ಒಂದು ಒಂದೂವರೆ ಲಕ್ಷ ಎಕರೆ ನೀರಾವರಿಯಾಗುತ್ತದೆ. ಅದ್ದರಿಂದ ಆ ಪ್ರಾಜೆಕ್ಟಿನ ಕಿಮ್ಮತ್ತು ಹೆಚ್ಚಾಗಬೇಕು. ಈಗ ಶರಾವತಿಯಲ್ಲಿ 100 ಕೋಟಿ ರೂಪಾಯಿ ಖರ್ಚು ಮಾಡಿದ್ದರೆ 200 ಕೋಟಿ ರೂಪಾಯಿಗೆ ಖರೀದಿ ಮಾಡಲಿಕ್ಕೆ ಬರುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಅರ್ಥಿಕ ಸಚಿವರು ಕೊಟ್ಟಂಥ ವಿವರಣೆ ಬಗ್ಗೆ ನನ್ನ ವಿರೋಧವಾದರೂ ಇಷ್ಟೆ, 100 ಕೋಟಿ ರೂಪಾಯಿ ಖರ್ಚು ಮಾಡಿದರೆ ಪ್ರಾಜೆಕ್ಟ್‌ನ ಕಿಮ್ಮತ್ತು ಹೆಚ್ಚಾಗುತ್ತದೆಯೇ ಹೊರತು ಕಮ್ಮಿಯಾಗುವುದಿಲ್ಲ ಎಂದು ಹೇಳಿದರು. ಅಕೌಂಟೆಂಟ್ ಜನರಲ್‌ರವರು ಕೊಡತಕ್ಕ ಅಂಕಿಅಂಶದ ಮೇಲೆ ಹೇಳುವುದಾದರೆ 1967-68ರಲ್ಲಿ 427 ಕೋಟಿ ರೂಪಾಯಿ ಅಂತ ಹೇಳಿದ್ದೀರಿ. ಇನ್ನೊಂದು ಅಂಕಿಯನ್ನು ಕೊಡತಕ್ಕ ಕಾಲದಲ್ಲಿ 384.83 ಕೋಟಿ ಅಂತ ಹೇಳುತ್ತೀರಿ. ಇದು ಆಧಾರ ರಹಿತವಾದದ್ದು, ಸತ್ಯಕ್ಕೆ ದೂರವಾದದ್ದು. ಈ ಒಂದು ವಿಷಯದಲ್ಲಿ ಮಾನ್ಯ ಅರ್ಥಿಕಸಚಿವರು ಕೊಟ್ಟಂಥ ವಿವರಣೆ ಅಥವಾ ಅಂಕಿಅಂಶ ಏನಿದೆ ಅದು ಬಹಳ ಅಸಮರ್ಪಕವಾದದ್ದು ಎಂದು ಹೇಳಲಿಚ್ಛಿಸುತ್ತೇನೆ. ಸ್ವಾಮಿ, ನಮ್ಮ ದೇಶದ ಅರ್ಥಿಕ ಬೆಳವಣಿಗೆಗೆ ಆಡಳಿತ ಸೂತ್ರವನ್ನು ಹಿಡಿದಿರತಕ್ಕ ಮಂತ್ರಿಗಳು, ರಾಜಕಾರಣಿಗಳು ಮತ್ತು ಅಧಿಕಾರಿಗಳು ಎಷ್ಟು ಮಟ್ಟಿಗೆ ತಮ್ಮ ಒಂದು ಕಾಂಟ್ರಿಬ್ಯೂಷನ್‌ನ್ನು ಮಾಡಿದ್ದಾರೆ ಎಂಬುದರ ಬಗ್ಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ರಷ್ಯಾದೇಶದ ಪ್ರಧಾನಿ ಕೊಸಿಗಿನ್‌ರವರು ಈ ದೇಶಕ್ಕೆ ಭೇಟಿ ಕೊಟ್ಟ ಕಾಲದಲ್ಲಿ ಈ ದೇಶದ ಬೆಳವಣಿಗೆಯ ಬಗ್ಗೆ ಅವರು ಏನು ಒಂದು ಇಂಪ್ರೆಷನ್ ಇಟ್ಟುಕೊಂಡು ಹೋದರು ಎಂಬ ಬಗ್ಗೆ ನಿನ್ನೆದಿವಸ ಇಂಡಿಯನ್ ಎಕ್ಸ್‌ಪ್ರೆಸ್‌ನ ಎಡಿಟೋರಿಯಲ್ ಕಲಂನಲ್ಲಿ ಬರೆದಿರುವ ಒಂದು ವಾಕ್ಯವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಅದೇನೆಂದರೆ:

> "From the ministerial leaders to the civil servants, everybody is so preoccupied with playing politics that the economy has become a secondary concern.
>
> One of the most signeficant conclusions arrived at by our recent Soviet guests is that everyone in India from the highest level to the lowest is nelgectful of what is happening to the country's economy."

ಸ್ವಾಮಿ, ಇಂಥಾ ಒಂದು ಸನ್ನಿವೇಶದಲ್ಲಿ ಈ ಸಭೆ ಇಷ್ಟು ದೊಡ್ಡ ಮೊತ್ತವೊಂದನ್ನು ಮಂಜೂರು ಮಾಡಿ ನಾವು ಇವರ ಕೈಗೆ......

Mr. CHAIRMAN.—Who gave that impression ?

Sri H. D. DEVE GOWDA.—That is the impression given by Mr. Kosigin, Prime Minister of U.S.S.R., after he returned from India. ಈ ಹಣವನ್ನು ಕೊಟ್ಟರೆ ಇದಕ್ಕೆ ರಕ್ಷಣೆ ಇದೆಯೇ ಎಂಬ ಸಂಶಯ ನನಗೆ ಉಂಟಾಗಿದೆ. ಇಲ್ಲಿ ಆಡಳಿತ ಮಾಡತಕ್ಕವರು ಪಬ್ಲಿಕ್ ಟ್ರಸ್ಟಿಗಳಿದ್ದಹಾಗೆ ದೇಶದ ಕೆಲಸ ಕಾರ್ಯಗಳನ್ನು ನಡೆಸಬೇಕಾಗಿದೆ. ಆದರೆ ಹಾಗೆ ಇವರು ನಡೆಸತಕ್ಕ ಕೆಲಸಗಳ ಬಗ್ಗೆ ಒಂದು ನೀತಿ ನೇಮ ಏನಾದರೂ ಇರಬೇಡವೇ ? ಬಡ ಬೋರೇಗೌಡನ ಹಣವನ್ನು ಖರ್ಚು ಮಾಡತಕ್ಕ ವಿಷಯದಲ್ಲಿ ಇವರಿಗೆ ಸರಿಯಾದ ಪ್ರಜ್ಞೆ ಇರಬೇಡವೆ ? ನನಗೆ ಇಲ್ಲಿ ಈಗ ಈ ಬಡ್ಜೆಟ್ಟಿನ ಮೇಲೆ ಮಾತನಾಡಲು ಕೊಟ್ಟಿರತಕ್ಕ ಕಾಲಾವಕಾಶ ಕೇವಲ 15 ನಿಮಿಷಗಳು ಮಾತ್ರ ಅಷ್ಟರಲ್ಲಿ ಇಲ್ಲಿ ಬರತಕ್ಕ ಎಲ್ಲ ವಿಚಾರಗಳನ್ನೂ ವ್ಯವಸ್ಥಿತವಾಗಿ ವಿವರವಾಗಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ವಿಷಯಗಳ ಪರಿಶೀಲನೆಗೆ ಈ ಕಾಲಾವಕಾಶ ಏನೇನೂ ಸಾಲದು. ಈ ಹಿಂದೆ ಇದೇ ಅಸೆಂಬ್ಲಿಯ ಸಭೆಯಲ್ಲಿ ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ಸ್ ಕಮಿಟಿಗಳ ವರದಿಯನ್ನು ಚರ್ಚೆ ಮಾಡುವುದಕ್ಕೆ ಅವಕಾಶವಿತ್ತು. ಈಗ ಅದನ್ನು ತಪ್ಪಿಸಿದ್ದಾರೆ. ನಾವು ಈ ಸಭೆಯಲ್ಲಿ ಭಾಷಣ ಮಾಡತಕ್ಕ ಕಾಲದಲ್ಲಿ ಆ ವರದಿಗಳಲ್ಲಿರತಕ್ಕ ವಿಚಾರಗಳನ್ನು ನಮೂದಿಸಿ ವಿಷಯಗಳನ್ನು ಪ್ರಸ್ತಾಪಮಾಡಬಹುದು ಎಂದು ಹೇಳಿದ್ದಾರೆ. ಇದೇ ಸಭೆಯಲ್ಲಿ ಈ ಹಿಂದೆ ಮಾತನಾಡಿದ ಶ್ರೀಮಾನ್ ಸಿದ್ದವೀರಪ್ಪನವರು ತಮ್ಮ ಭಾಷಣದಲ್ಲಿ ನಮ್ಮ ಇಂದಿನ ಆಡಳಿತದ ವೆಚ್ಚಕ್ಕಾಗಿ ನಮ್ಮ ರಾಜ್ಯದ ಉತ್ಪತ್ತಿಯಲ್ಲಿ ಶೇಕಡ 30ರಷ್ಟು ಖರ್ಚಾಗುತ್ತಿದೆಯೆಂದೂ, ಇನ್ನು ನಮ್ಮ ಸಾಲಸೋಲಗಳ ಬಗ್ಗೆ ತೆರತಕ್ಕ ಬಡ್ಡಿಗಾಗಿ ಶೇಕಡ 16ರಷ್ಟು ಹೋಗುತ್ತದೆ. ಇನ್ನು ಉಳಿಯತಕ್ಕ ಶೇಕಡ 54ರಲ್ಲಿ ಎಷ್ಟರ ಮಟ್ಟಿಗೆ ಈ ದೇಶದ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ತಿಳಿಸಿದರು. ಈ ದಿವಸ ಸರ್ಕಾರದವರು ಕೊಟ್ಟಿರತಕ್ಕ ಅಂಕಿಅಂಶಗಳ ಆಧಾರವನ್ನೇ ತೆಗೆದುಕೊಂಡರೂ ಆಡಳಿತ ವೆಚ್ಚಕ್ಕಾಗಿ ಎಷ್ಟು ಅಪಾರವಾದ ಹಣ ಖರ್ಚಾಗುತ್ತಿದೆ ? ನಾವು ಇಷ್ಟು ಅಪಾರವಾಗಿ ಹಣವನ್ನು ಖರ್ಚುಮಾಡಿದಾಗ್ಯೂ ಅದರಿಂದ ದೇಶಕ್ಕೇನಾದರೂ ಪ್ರಯೋಜನ ಇದೆಯೋ ಎಂದರೆ, ಏನೇನೂ ಇಲ್ಲ ಎಂದು ಹೇಳಬಹುದು. ಅದಕ್ಕೆ ನಾನಾ ಕಾರಣಗಳಿವೆ. ದೇಶದಲ್ಲಿ ಈ ದಿವಸ ಎಲ್ಲಿ ನೋಡಿದರೂ ಲಂಚದ ತಕ್ಕಯ, ಸ್ವಜನ ಪಕ್ಷಪಾತ ಹಾಗೂ ಅದಕ್ಷತೆ

ತಾಂಡವವಾಡುತ್ತಿದೆ. ಇಂಥ ಒಂದು ಸನ್ನಿವೇಶದಲ್ಲಿ ದೇಶದ ಪ್ರಜೆಗೆ ಈ ದಿವಸ ಏನೇನೂ ಅನುಕೂಲವಾಗುತ್ತಿಲ್ಲ ಎಂಬುದನ್ನು ನಾವೂ ನೀವೂ ಎಲ್ಲರೂ ಒಪ್ಪಿಕೊಳ್ಳಲೇಬೇಕು. ಈ ವಿಚಾರ ದಲ್ಲಿ ನೆನ್ನೆಯ ದಿವಸ ಆಡಳಿತಪಕ್ಷಕ್ಕೆ ಸೇರಿರತಕ್ಕ ಶ್ರೀ ಮಂಜೇಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ದಿವಸ ನಾವು ಆಡಳಿತ ಪಕ್ಷಕ್ಕೆ ಸೇರಿದ ಸದಸ್ಯರಾಗಿದ್ದೇವೆಂಬ ಕಾರಣದಿಂದ ಯಾರೂ ಜೋಹುಕುಂ ನೀತಿಯನ್ನು ಅನುಸರಿಸಿ ಮಾತನಾಡತಕ್ಕ ಕಾಲ ಹೋಯಿತು. ಈ ದಿವಸ ರೈತನು ಒಂದು ತಾಲ್ಲೂಕ್ ಕಛೇರಿಗೇ ಹೋಗಲಿ ಅಥವಾ ಎನ್.ಇ.ಎಸ್. ಆಫೀಸಿಗೇ ಹೋಗಲಿ ಲಂಚವಿಲ್ಲದೆ ಯಾವ ಕೆಲಸಗಳೂ ಆಗುತ್ತಿಲ್ಲ. ಸಾಲದ್ದಕ್ಕೆ ಅದಕ್ಷತೆ ಮತ್ತು ಸ್ವಜನಪಕ್ಷಪಾತ ಇವು ಬೇರೆ ತಾಂಡವ ವಾಡುತ್ತಿವೆ. ಇದನ್ನೆಲ್ಲಾ ತಡೆಗಟ್ಟುತ್ತೇವೆಂದು ನಮ್ಮ ಸರ್ಕಾರ ಈ ದಿವಸ ವಿಜಿಲೆನ್ಸ್ ಕಮಿಷರ್ನಗೆ ವರ್ಷ ಒಂದಕ್ಕೆ 10 ಲಕ್ಷರೂಪಾಯಿಗಳನ್ನು ಖರ್ಚುಮಾಡುತ್ತಿದೆ. 1967-68ನೆಯ ಸಾಲಿಗೆ 10 ಲಕ್ಷ ರೂಪಾಯಿಗಳನ್ನು ಈ ವಿಜಿಲೆನ್ಸ್ ಕಮಿಷನ್ನಿಗೆ ತೆಗೆದಿಟ್ಟಿದೆ. ಅಷ್ಟು ಅಪಾರ ಹಣವನ್ನು ಖರ್ಚು ಮಾಡತಕ್ಕ ಆ ಕಮಿಷನ್ ಒಂದು ವರ್ಷದಲ್ಲಿ ಎಷ್ಟು ಕೆಲಸಮಾಡಿದೆ ಅಂದರೆ, ಅವರು 986 ಅರ್ಜಿ ಗಳನ್ನು ಇನ್‌ವೆಸ್ಟಿಗೇಷನ್ ಬ್ಯೂರೋಗೆ ಕಳುಹಿಸಿದ್ದಾರಂತೆ. ಇಂಥ ನೂರಾರು ವಿಜಿಲೆನ್ಸ್ ಕಮಿಷನ್ ಗಳನ್ನು ನೇಮಕ ಮಾಡಿದರೂ ನಮ್ಮ ರಾಜ್ಯದಲ್ಲಿ ಈ ಅನ್ಯಾಯಗಳನ್ನು ತಡೆಗಟ್ಟಲು ಸಾಧ್ಯವಿಲ್ಲ. ಅದಕ್ಕೆ ಕಾರಣವಾದರೂ ಇಷ್ಟೆ—ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲಾ—ಎಂಬ ಗಾದೆಯಂತೆ ಈ ಲಂಚ ಮತ್ತು ಸ್ವಜನಪಕ್ಷಪಾತಗಳು ರಾಜ್ಯಮಟ್ಟದಲ್ಲೇ ತಾಂಡವವಾಡುತ್ತಿರುವಾಗ ಎಷ್ಟೇ ವಿಜಿಲೆನ್ಸ್ ಕಮಿಷನ್‌ಗಳನ್ನು ಮಾಡಿದರೂ ಪ್ರಯೋಜನವಾಗುವುದಿಲ್ಲ ಎಂದು ನಾನು ಬಹಳ ಕಳಕಳಿ ಯಿಂದ ಹೇಳುತ್ತಿದ್ದೇನೆ. ಆದ್ದರಿಂದಲೇ ಈಗ ಕಾಲ ಸನ್ನಿಹಿತವಾಗುತ್ತಿದೆ—ಜನರು ಕಛೇರಿಗಳಿಗೆ ನುಗ್ಗಿ ನೌಕರರನ್ನು ಹಿಡಿದು ಹೊರಗೆಳೆದು ಹಾಕತಕ್ಕ ಕಾಲ ಬೇಗ ಸನ್ನಿಹಿತವಾಗುತ್ತಿದೆ. ನಾವು ಈ ನೌಕರರಿಗೆ ಎಲ್ಲ ಸೌಲತ್ತುಗಳನ್ನೂ ಕೊಡಬೇಕು. ಆದರೆ ಅವರು ಮಾಡತಕ್ಕದ್ದು ಈ ಅನ್ಯಾ ಯದ ಕೃತ್ಯಗಳು. ಈ ವಿಚಾರವನ್ನು ಮಾನ್ಯ ರೆವಿನ್ಯೂ ಸಚಿವರು ಸ್ವಲ್ಪಮಟ್ಟಿಗೆ ಮನಗಂಡಿದ್ದಾ ರೆಂದು ನಾನು ನಂಬಿದ್ದೇನೆ. ಸದ್ಯದಲ್ಲೇ ಜನರು ಕಛೇರಿಗಳಿಗೆ ನುಗ್ಗಿ ನೌಕರರನ್ನು ಹಿಡಿದು ಹೊಡೆದು ಹೊರಗೆ ಹಾಕತಕ್ಕ ಪರಿಸ್ಥಿತಿ ಬಹು ಬೇಗ ಬರುತ್ತಿದೆ. ಈ ವಿಜಿಲೆನ್ಸ್ ಕಮಿಷನ್ ಗಳಿಂದೇನೂ ಪ್ರಯೋಜನವಾಗುವುದಿಲ್ಲ. ಈ ದಿವಸ ಪ್ರತಿಯೊಂದು ತಾಲ್ಲೂಕ್ ಕಛೇರಿಯಲ್ಲೂ ರೈತನು 100—200 ರೂಪಾಯಿಗಳ ಸಾಲ ಪಡೆಯಬೇಕಾದರೆ ಅರ್ಧ ಹಣವನ್ನು ಅವನು ಲಂಚಕ್ಕೆ ತೆರಬೇಕಾಗಿದೆ. ಇಂಥ ಆಡಳಿತವಿರುವಾಗ ಯಾವ ಸರ್ಕಾರಕ್ಕೂ ಮರ್ಯಾದೆ ಬರುವು ದಿಲ್ಲ......

ಶ್ರೀ ಬಿ. ರಾಚಯ್ಯ.—ಯಾರೋ ಸುಮ್ಮನೆ ಲಂಚ ತೆಗೆದುಕೊಳ್ಳುತ್ತಾರೆ, ಅವರು ಲಂಚ ತೆಗೆದುಕೊಳ್ಳುತ್ತಾರೆ, ಇವರು ತೆಗೆದುಕೊಳ್ಳುತ್ತಾರೆ ಎಂದರೇನು ಪ್ರಯೋಜನ? ಹಾಗೆ ಹೇಳಿದ ಮಾತ್ರಕ್ಕೆ ಯಾರನ್ನೂ ಶಿಕ್ಷಿಸುವುದಕ್ಕಾಗುವುದಿಲ್ಲ. ಅವರ ತಪ್ಪು ಸಾಬೀತಾಗಬೇಕು, ಅವರಿಗೆ ಶಿಕ್ಷೆ ವಿಧಿಸಬೇಕು. ಆದರೆ ಇಲ್ಲಿ ಆಡಳಿತ ನಡೆಸತಕ್ಕವರೆಲ್ಲ ಹೀಗೆ ಲಂಚದ ಅಪಾದನೆಗೆ ಒಳಗಾಗಿರುವಾಗ ಇನ್ನು ಕೆಳ ದರ್ಜೆಯವರು ಅದಕ್ಕೆ ಕೈಚಾಚಿದರೇನು ತಪ್ಪು ಎನ್ನುವ ಅರ್ಥದಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಹಾಗೆ ಮಾನ್ಯ ಸದಸ್ಯರು ಸುಮ್ಮನೆ sweeping remarks ಮಾಡಿದರೆ ಪ್ರಯೋಜನವಿಲ್ಲ. ಅವರು ಇಂಥವರು ಎಂದು ಹೆಸರನ್ನು ಹೇಳಿದರೆ ನಾನು ಅದಕ್ಕೆ ಉತ್ತರ ಹೇಳಬಹುದು......

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ನಾವು ಬರವಣಿಗೆಯಲ್ಲೇ ಎಲ್ಲವನ್ನೂ ಬರೆದು ರಾಷ್ಟ್ರಪತಿಗಳಿಗೆ ಕಳುಹಿಸಿದ್ದೇವೆ. ಅದು ಸಾಲದೆ?

Mr. CHAIRMAN.—The Hon'ble Revenue Minister wants specific instances, if any, to enable him to take necessary action.

Sri B. RACHAIAH.—I want to know specific instances, wherein a particular officer has taken bribe and whether somebody has made some complaint against that man.

ಶ್ರೀ ಎಸ್. ಶಿವಪ್ಪ.—ನಿಮ್ಮ ಸರ್ಕಾರದಲ್ಲಿ ಯಾವ ಆಫೀಸಿನಲ್ಲಿ ಲಂಚ ತೆಗೆದುಕೊಳ್ಳದೆ ಕೆಲಸ ಮಾಡುತ್ತಿದ್ದಾರೆಂಬುದನ್ನು ತಾವು ಹೇಳಿ. ಎಲ್ಲರೂ ಲಂಚಕೋರರೇ. ನೀವು ಹೀಗೆ ಇಲ್ಲಿ ಇಂಥ ಹೇಳಿಕೆಗಳನ್ನು ಹೇಳುತ್ತಿರುವುದರಿಂದಲೇ ದೇಶಾದ್ಯಂತವೂ ಲಂಚ ತಾಂಡವವಾಡುವುದಕ್ಕೆ ಅವಕಾಶ ವಾಯಿತು. ಅಷ್ಟೇ ಅಲ್ಲ, ಅದು ದಿನೇ ದಿನೇ ಹೆಚ್ಚಾಗುತ್ತಿದೆ.

ಶ್ರೀ ಅಜೀಜ್‌ಸೇಠ್.—ಬೇರೆ ಸರ್ಕಾರ ಬರಲಿ ಅದನ್ನು ವಿಚಾರಣೆಗೆ ಇಡಲಾಗುತ್ತದೆ. ಯಾರು ಲಂಚ ಕೊಟ್ಟರು, ಯಾರು ಲಂಚ ತೆಗೆದುಕೊಂಡರು ಎಂಬುದೆಲ್ಲಾ ತನಗೆ ತಾನೇ ಪತ್ತೆಯಾಗುತ್ತದೆ. 1947ರಲ್ಲಿ ಯಾವ ಯಾವ ರಾಜಕೀಯ ವ್ಯಕ್ತಿಯ ಆಸ್ತಿಪಾಸ್ತಿಗಳೇನಿತ್ತು, ಈ ದಿವಸ ಅವರಿಗೆ ಎಷ್ಟು ಆಸ್ತಿಪಾಸ್ತಿಗಳಿವೆ ಎನ್ನುವುದನ್ನು ಎನ್‌ಕ್ವಯರಿ ಮಾಡಿಸಿದರೆ ಎಲ್ಲರೂ ಸಿಕ್ಕಿಬೀಳುತ್ತಾರೆ.

Mr. CHAIRMAN.—We are members of this Assembly and we have got to follow certain rules as laid down in the Rules of Procedure. Whoever it is, let us follow the rules. We should set an example to the rest of the country. Now, the member is speaking without other member yielding. I don't think the hon'ble member is in order to get up and speek. My request is, let us set an example to the rest of the country in following the rules.

Sri AZEEZ SAIT.—I completely endorse your views. It was warranted when the Hon'ble Revenue Minister got up to speak. ಆ ವಿಜಿಲೆನ್ಸ್ ಕಮಿಷನ್ ಸರ್ಕಾರದವರ ಕೈಲಿದೆ. ಆ ಆಂಟಿಕರಪ್ಷನ್ ಇವರ ಕೈಲಿದೆ. ಆಸ್ತಿಯೂ ಅವರ ಕೈಲೇ ಇದೆ. ಅದನ್ನು ರುಜುವಾತು ಮಾಡುವುದಕ್ಕೂ ಸದ್ಯಕ್ಕೆ ಸಾಧ್ಯವಿಲ್ಲ. ಬೇರೆ ಸರ್ಕಾರ ಬಂದರೆ ಮಾಡಬಹುದು......

Mr. CHAIRMAN.—The hon'ble member is violating the rule every time. Let him not do that, because the rest of the country is watching us. The Opposition has got a very important role to play in the United Kingdom, where the Opposition Leader is paid a salary just as the Leader of the House. Whenever there are any mistakes on the part of the Government, it is up to the Opposition Members to specifically indicate and then correct the Government. These 2 wings of ......

Sri S. SIVAPPA.—Please don't compare this to England.

Mr. CHAIRMAN.—These two wings of the Government should carry on the Government. That is very important. The whole country is watching us.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ರೆವಿನ್ಯೂ ಸಚಿವರು ಈ ವಿಚಾರವನ್ನು ಬಹಳ ಉತ್ಸುಕತೆಯಿಂದ ಹೇಳಿದರು.

ಶ್ರೀ ಬಿ. ರಾಚಯ್ಯ.— ಮಾನ್ಯ ಸದಸ್ಯರು ಏನು ವಿಷಯಗಳನ್ನು ಇಲ್ಲಿ ಹೇಳುತ್ತಾ ಇದ್ದರೋ ಅದು ಸರ್ವಸಾಮಾನ್ಯವಾದ ಟೀಕೆಯಾಗಿರುತ್ತದೆ. ಯಾವುದಾದರೂ ವಿಷಯದಲ್ಲಿ ಒಬ್ಬ ಅಧಿಕಾರಿ ತಪ್ಪುಮಾಡಿದ್ದಾರೆಂದು ಹೇಳಬೇಕಾದರೆ, ಆತನಿಗೆ ಒಂದು ಕ್ರಮಬದ್ಧವಾಗಿ ನೋಟೀಸ್ ಕೊಟ್ಟು ಇಂಥ ತಪ್ಪು ಮಾಡಿದ್ದಾನೆಂಬುದನ್ನು ತಿಳಿಯುವುದಕ್ಕೆ ಅವಕಾಶಕೊಟ್ಟು ಅದರ ಪ್ರಕಾರ ಅದೇನಾದರೂ ರುಜುವಾತಾದರೆ ಆಗ ಶಿಕ್ಷೆ ಕೊಡಲಾಗುತ್ತದೆ. ಅಂತಹ ಶಿಕ್ಷೆ ಕೊಡಬೇಕಾದರೆ ಸರ್ಕಾರದಲ್ಲಿ ಒಂದು ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಯಾವುದಾದರೂ ಇದ್ದರೆ ಮಾನ್ಯ ಸದಸ್ಯರು ಹೇಳಲಿ. ಆಗ ಅವರು ಹೇಳಿದ ರೀತಿಯಲ್ಲಿ ನಾವೂ ಸಹ ಅಡ್ಮಿನಿಸ್ಟ್ರೇಷನ್ನನ್ನು ಇನ್ನೂ ಟೋನಪ್ ಮಾಡೋಣ. ಲಂಚದ ಹಾವಳಿಯನ್ನೂ ಕೂಡ ಕಡಮೆಮಾಡಲು ಪ್ರಯತ್ನಮಾಡುತ್ತೇನೆ.

5-00 P.M.

ಶ್ರೀ ಎಚ್. ಡಿ. ದೇವೇಗೌಡ.—ಈಗತಾನೇ ಶ್ರೀ ನಾಡಕರ್ಣಿಯವರು ಯಾರೋ ಒಬ್ಬ ಗುಮಾಸ್ತರು ದುಡ್ಡು ತೆಗೆದುಕೊಂಡಿದ್ದಾರೆಂದು ಹೇಳಿದರು. ಅದನ್ನೇನಾದರೂ ತನಿಖೆಮಾಡಿದ್ದೀರಾ ? ಅದನ್ನು ತನಿಖೆಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದರೆ ಹೇಗೆ ? ಶಿಕ್ಷೆಮಾಡುವುದಿಲ್ಲವೆಂದು ಹೇಳಿದರೆ ಹೇಗೆ ? ಮಾನ್ಯ ರೆವಿನ್ಯೂ ಸಚಿವರು ಬಹಳ ಉತ್ಸುಕತೆಯಿಂದ ಅಡ್ಮಿನಿಸ್ಟ್ರೇಷನ್ನನ್ನು ಇನ್ನೂ ಚೆನ್ನಾಗಿ ಟೋನ್‌ಅಪ್ ಮಾಡಬೇಕೆಂದು ಇರುವುದರಿಂದ ಅವರ ಇಲಾಖೆಯಲ್ಲಿ ತಾವೇ

ಖುದ್ದಾಗಿ ಹೋಗಿ ನೋಡಿ ಪರಿಶೀಲನೆ ಮಾಡಲಿ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೊಟ್ಟಂಥ ವರದಿಯ ಬಗ್ಗೆ ಅಕೌಂಟೆಂಟ್ ಜನರಲ್ ಅವರು ಪಾಯಿಂಟ್ ಔಟ್ ಮಾಡಿ ಎಗ್ಝಾಮಿನ್ ಮಾಡಿದಂಥ ಶಿಫಾರಸುಗಳನ್ನು ಎಷ್ಟು ಜಾರಿಗೆ ತಂದಿದ್ದೀರಿ ಹೇಳಿ. ಯಾವ ಅಧಿಕಾರಿ ನಿಮಗೆ ಬೇಡವೋ ಅವರು ಮಾನ್ಯ ಶ್ರೀ ಜತ್ತಿಯವರ ಇಲಾಖೆಯೊಳಗೆ ಇರಬಹುದು. ಯಾವ ಅಧಿಕಾರಿ ತಮ್ಮ ಜಾತಿಗೆ ಸೇರಿಲ್ಲವೋ ಅಂತಹವರನ್ನು ಬಲಿ ಹಾಕುತ್ತೀರಿ. ಆದರೆ ತಮ್ಮ ಗುಂಪಿಗೆ ಸೇರಿದರೆ ಅಂಥವರಿಗೆ ತಪ್ಪು ಮಾಡಿದರೂ ಲೈಟ್ ವಾರ್ನಿಂಗ್ ಕೊಡುವುದು, ಕೇವಲ ಒಂದು ಇನ್‌ಕ್ರಿಮೆಂಟ್ ನಿಲ್ಲಿಸುವುದು, ಇದನ್ನು ಮಾಡುತ್ತೀರಿ. ಇಂತಹ ಎಷ್ಟೋ ನಿದರ್ಶನಗಳನ್ನು ನಾನು ಕೊಡುವುದಕ್ಕೆ ತಯಾರಾಗಿದ್ದೇನೆ. ಇದು ಎಂತಹ ಅಡ್ಮಿನಿಸ್ಟ್ರೇಷನ್ ? ಇಂತಹ ಅಡ್ಮಿನಿಸ್ಟ್ರೇಷನ್‌ನಲ್ಲಿ ಜನರಿಗೆ ನೆಮ್ಮದಿ ಉಂಟೇ ? ನಿಮ್ಮ ಈಗಿನ ರೂಲ್ಸಿನಿಂದ ಇಂಥವುಗಳನ್ನು ಸರಿಪಡಿಸುವುದಕ್ಕೆ ನೀವು ನಿಜವಾಗಿ ಶಕ್ತರಾಗಿದ್ದೀರಾ ಎಂಬುದಾಗಿ ನಾನು ಕೇಳುತ್ತೇನೆ. ನಾನು ಮೊದಲೇ ಹೇಳಿದೆ. ಕಾಲ ಸನ್ನಿಹಿತವಾಗಿದೆ. ನಿಮ್ಮ ಲಾ ಆ್ಯಂಡ್ ಆರ್ಡರನ್ನು ಜನರೇ ತೆಗೆದುಕೊಳ್ಳುತ್ತಾರೆ. ಕಾನೂನುಗಳ ಚೌಕಟ್ಟಿನಲ್ಲಿ ಇಂತಹವುಗಳನ್ನು ಸರಿಪಡಿಸಿಕೊಳ್ಳುವುದಕ್ಕಾಗಿ ಜನಗಳೇ ಒಂದು ವಿಜಿಲೆನ್ಸ್ ಕಮಿಷನ್‌ನನ್ನು ರಚಿಸುತ್ತಾರೆ. ಆಗ ನೀವೆಲ್ಲರೂ ಜೈಲಿಗೆ ಹೋಗಲು ಸಿದ್ಧರಾಗಬೇಕು. ಏಕೆಂದರೆ ಈಗ ದೇಶದಲ್ಲಿ ಎಲ್ಲಿ ನೋಡಿದರೂ ದರೋಡೆ, ಲೂಟಿಗಳು ಹೆಚ್ಚಾಗಿ ದುಸ್ಥಿತಿ ಬಂದಿದೆ. ಆದ್ದರಿಂದ ಈಗಲೇ ಸರ್ಕಾರ ಈ ವಿಚಾರವನ್ನು ಬಹಳ ಎಚ್ಚರಿಕೆಯಿಂದ ನೋಡಬೇಕು. ಈ ವಿಚಾರವನ್ನು ಈ ಸಭೆಯಲ್ಲಿ ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ರೂರಲ್ ಇನ್‌ಕಂ ಬಹಳ ಜಾಸ್ತಿಯಾಗಿದೆ, ಒಬ್ಬ ಜಾಯಿಂಟ್ ಡೈರೆಕ್ಟರ್‌ಗೆ ನೇಮಕ ಮಾಡಿದ ನಂತರ ಅಲ್ಲಿ ಇನ್‌ಫ್ಲೇಶನ್ ಟೆಂಡನ್ಸಿ ಬರುತ್ತಾ ಇದೆ, ಅದನ್ನು ತಡೆ ಮಾಡುತ್ತೇವೆಂದು ಅರ್ಥ ಸಚಿವರು ಒಂದು ಸಾರಿ ಇಲ್ಲಿ ಹೇಳಿದ್ದಾರೆ. ಅವರಿಗೆ ವಿವೇಕವಿದ್ದರೆ ಅಂತಹ ಒಂದು ಮಾತನ್ನು ಅವರ ಭಾಷಣದಲ್ಲಿ ಸೇರಿಸುತ್ತಿರಲಿಲ್ಲ. ಇವತ್ತು ತಿನ್ನುವುದಕ್ಕೆ, ಕೂಳಿಗೆ ಗತಿ ಇಲ್ಲ. ಮಾನ್ಯ ಶ್ರೀ ನಂಜೇಗೌಡರು ಹೇಳಿದಹಾಗೆ ಕೇವಲ ಸೇಕಡ 10ರಷ್ಟು ಬಿಟ್ಟರೆ ಇನ್ನುಳಿದ ಸೇಕಡ 90ರಷ್ಟು ಇರತಕ್ಕ ಖುಷ್ಕಿ ಜಮೀನಿನಲ್ಲಿ ಸಾಕಷ್ಟು ಮಳೆ ಬೆಳೆ ಬೆಳೆಯಾಗದೆ ತಮ್ಮ ಭವಿಷ್ಯವನ್ನೇ ಕಾದು ನೋಡುತ್ತಾ ಇರತಕ್ಕ ಜನತೆಯ ಸಂಕಟದ ಅರಿವು ಅವರಿಗೆ ಇದ್ದಿದ್ದರೆ, ಆ ಮಾತನ್ನು ಇಲ್ಲಿ ಹೇಳುತ್ತಾ ಇದ್ದರೇ ಎಂದು ನಾನು ಹೇಳುತ್ತೇನೆ:

ಚೇರ್‌ಮನ್ ಅವರು.—ಸದಸ್ಯರಾಗಿದ್ದು ಆ ರೀತಿ ಮಾತನಾಡುವುದು ಸರಿಯಲ್ಲ. ಬೇಕಾದರೆ ಅವರು ಹೇಳಿದ್ದು ಸರಿಯಾಗಿಲ್ಲವೆಂದು ನೀವು ಕೇಳಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಅವರು ಕೊಟ್ಟಿರುವ ಅಂಕಿ ಅಂಶಗಳ ಮೇಲೆ ಆ ರೀತಿಯಾಗಿ ನಾನು ಹೇಳಬೇಕಾಗಿದೆ. ವ್ಯವಸಾಯದ ಅನುಭವವಿರುವವರು, ಆಡಳಿತ ಪಕ್ಷದಲ್ಲಿ ಅಷ್ಟು ವಿವೇಕದಿಂದ ಕುಳಿತಿರತಕ್ಕವರು ಆ ಮಾತನ್ನು ಹೇಳಬಾರದಾಗಿತ್ತು. ಇವತ್ತು ಭೂ ಸುಧಾರಣೆಯನ್ನು ಜಾರಿಗೆ ತಂದಿದ್ದೀರಾ ? ರೈತ ಇಟ್ಟಿರತಕ್ಕ ಆಸ್ತಿಯ ಮೇಲೆ ಸೀಲಿಂಗ್ ತರುತ್ತಾ ಇದ್ದೀರಿ. ಆದರೆ ಪಟ್ಟಣದಲ್ಲಿರತಕ್ಕವರಿಗೆ ಅಂತಹ ಸೀಲಿಂಗನ್ನು ತರುತ್ತಾ ಇಲ್ಲ. ಅವರಿಗೆ ಶಕ್ತಿ ಇಲ್ಲ. ಬಡಜನರು ಬಡವರಾಗಿದ್ದಾರೆಂದು ಹೇಳುತ್ತೀರಿ. ಹಳ್ಳಿಯವರಲ್ಲಿ ಬಹಳ ದುಡ್ಡು ಇದೆಯೆಂದು ತಮ್ಮ ಭಾವನೆಯೋ ಏನೋ ನನಗೆ ಗೊತ್ತಾಗಲಿಲ್ಲ. ಆದರೂ ಪಟ್ಟಣದಲ್ಲಿ ವಿಶೇಷವಾಗಿ ಇನ್‌ಫ್ಲೇಷನರಿ ಟೆಂಡೆನ್ಸಿ ಬೆಳೆಯುತ್ತಾ ಇದೆ, ಅದನ್ನು ಕೂಡಲೇ ಕಂಟ್ರೋಲ್ ಮಾಡಬೇಕು.

ಇನ್ನು ಅರ್ಬನ್ ಪಾಪ್ಯುಲೇಷನ್ನಿನ ಪರ್ಸಂಟೇಜ್ ಆಫ್ ಟ್ಯಾಕ್ಸ್ ಮತ್ತು ರೂರಲ್ ಪಾಪ್ಯುಲೇಷನ್ನಿನ ಪರ್ಸೆಂಟೇಜ್ ಆಫ್ ಟಾಕ್ಸ್ ಇವುಗಳಲ್ಲಿ ಎಷ್ಟು ವ್ಯತ್ಯಾಸವಿದೆಯೆಂಬುದನ್ನು ಹೇಳುತ್ತೇನೆ. ಅದನ್ನು ಚೆನ್ನಾಗಿ ವಿವರಣೆ ಮಾಡುವುದಕ್ಕೆ ಹೆಚ್ಚಿಗೆ ಕಾಲಾವಕಾಶಕೊಟ್ಟರೆ ಚೆನ್ನಾಗಿರುತ್ತದೆ. ನಿನ್ನೇ ಮಾನ್ಯ ಶ್ರೀ ಮಂಚೇಗೌಡರು ಸರ್ಕಾರಕ್ಕೆ ಬರತಕ್ಕ ತೆರಿಗೆ ಸೇಕಡ 70-80 ರಷ್ಟು ಸೆಲ್ ಟ್ಯಾಕ್ಸ್ ಮತ್ತು ಇನ್‌ಕಂಟಾಕ್ಸಿನಿಂದಲೇ ಹೊರತು ಅದನ್ನು ಬಿಟ್ಟರೆ ಇನ್ನುಳಿದುದು ತೆರಿಗೆ ಕೊಡುವವರು ರೈತರು ಎಂಬುದಾಗಿ ಕೆಲವು ಅಂಕಿ ಅಂಶಗಳನ್ನು ಕೊಟ್ಟರು.

Sri S. D. KOTHAVALE.—The tax from rural areas is very small. Even sales-tax is not from the poor poeple. Most of the taxes are from the urban areas.

ಶ್ರೀ ಎಸ್. ಶಿವಪ್ಪ.—ಅರ್ಬನ್ ಏರಿಯಾದಲ್ಲಿ ಜವಳಿ ವ್ಯಾಪಾರಮಾಡುವವರು ಯಾರು ?

Sri S. D. KOTHAVALE.—The articles used by the poor people are not taxed.

ಶ್ರೀ ಎಸ್. ಸಿವಪ್ಪ.—ಮಾನ್ಯ ಸದಸ್ಯರು ಹೇಳುವುದು ಆಶ್ಚರ್ಯವಾಗಿದೆ. Every article used by anybody is taxed.

ಶ್ರೀ ಎಂ. ನಾಗಪ್ಪ.—ಮಾರಾಟ ತೆರಿಗೆ ಏನಿದೆಯೋ ಅದರ ಬಗ್ಗೆ ನಾನು ವಾಸ್ತವಿಕಾಂಶಗಳನ್ನು ಹೇಳುತ್ತೇನೆ. ಇವತ್ತು ಸರ್ಕಾರಕ್ಕೆ ಏನು ವರಮಾನ ತೆರಿಗೆ ಬರುತ್ತಿದೆಯೋ ಅದು ಅರ್ಬನ್ ಏರಿಯಾದಿಂದಲೇ ಬರುತ್ತಾ ಇದೆ. ಆದರೆ ಮಾರಾಟ ತೆರಿಗೆಯನ್ನು ಕೊಡತಕ್ಕವರು ಸೇಕಡ 80ರಷ್ಟು ಹಳ್ಳಿಗಾಡಿನವರೇ ಹೊರತು ಪಟ್ಟಣವಾಸಿಗಳಲ್ಲ.

Sri M. RAMAPPA (Hosadurga).—If you invoke the theory of taxation, what Mr. Kothavale is saying is not correct.

ಶ್ರೀ ಎಚ್. ಡಿ. ದೇವೇಗೌಡ.—ಅವರಿಬ್ಬರೂ ಅದನ್ನು ತೀರ್ಮಾನಮಾಡಲಿ. ನನ್ನ ಕಾಲಾವಕಾಶವನ್ನು ಅವರು ಉಪಯೋಗಿಸಿಕೊಂಡಿದ್ದಾರೆ. ನನಗೆ ಕೊಟ್ಟಿರತಕ್ಕ ಕಾಲ ಕೇವಲ 5 ನಿಮಿಷಗಳು ಮಾತ್ರ ಇವೆ. ಇವತ್ತು ಇನ್ನಾದರೂ ಸ್ವಲ್ಪ ಜ್ಞಾನದೃಷ್ಟಿಯಿಂದ ಹಳ್ಳಿಗಳ ಒಂದು ನೈಜ ಚಿತ್ರವನ್ನು ಯೋಚನೆಮಾಡಿ ನೋಡುವುದಾದರೆ ಮತ್ತು ಇವತ್ತು ಸಿಟಿಗಳಲ್ಲಿರತಕ್ಕ ಸನ್ನಿವೇಷವೆಲ್ತ್ ಎಷ್ಟು ಹೆಚ್ಚಿದೆಯೆಂದು ಹೋಲಿಸಿ ನೋಡುವುದಾದರೆ ಬಹಳ ಡಿಸ್‌ಪ್ಯಾರಿಟಿ ಇದೆಯೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಇವತ್ತು ಆಡಳಿತ ನಡೆಸತಕ್ಕ ಜನ ಇದರಮೇಲೆ ಒಂದು ಸೀಲಿಂಗ್ ಲಿಮಿಟ್ಟನ್ನು ತರದೇ ಹೋದರೆ ಬಡವರಿಗೂ ಮತ್ತು ಶ್ರೀಮಂತರಿಗೂ ಒಂದು ದೊಡ್ಡ ಡಿಸ್ಪಾರಿಟಿ ಬಂದು ಬಹಳ ಅನಾಹುತಗಳಾಗುತ್ತವೆ. ಇದನ್ನು ತಾವು ಖಂಡಿತವಾಗಿ ಯೋಚನೆ ಮಾಡಬೇಕೆಂದು ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಶ್ರೀ ಕೊಠಾವಳಿಯವರು ಮಾತನಾಡುತ್ತಾ ಇರ್ರಿಗೇಷನ್ ಬಗ್ಗೆ ಹೆಚ್ಚಿನ ಹಣ ಬರುತ್ತದೆ. ಸುಮಾರು ಸೇಕಡ 81ರಷ್ಟು ಉತ್ಪತ್ತಿಯಾಗುತ್ತದೆಂದು ಹೇಳಿದರು.

ಇವೊತ್ತು ಅದರಲ್ಲಿ 81 ಪರ್ಸೆಂಟ್ ರಿಟರ್ನ್ಸ್ ಬರುವುದಿಲ್ಲ ಎಂದು ಹೇಳುತ್ತೀರಿ ಮತ್ತು ಈಗ ಕೆಲವು ತೆರಿಗೆಗಳನ್ನು ಜಾಸ್ತಿ ಮಾಡತಕ್ಕ ಸಂದರ್ಭ ಇದೆ ಎಂದು ಹೇಳುತ್ತೀರಿ ಅದನ್ನು ಒಪ್ಪುವುದಾದರೆ ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಅರ್ಥ ಸಚಿವರು ಅದಕ್ಕೆ ಸಮಂಜಸವಾದ ಉತ್ತರವನ್ನು ಕೊಡಬೇಕು. ಈಗ ನೀವು ಎಷ್ಟು ಮೇಜರ್ ಇರಿಗೇಷನ್ ಪ್ರಾಜೆಕ್ಟುಗಳನ್ನು ಕಟ್ಟಿದ್ದೀರಿ, ಎಷ್ಟು ಮೀಡಿಯಂ ಇರಿಗೇಷನ್ ಪ್ರಾಜೆಕ್ಟುಗಳನ್ನು ಕಟ್ಟಿದ್ದೀರಿ, ಎಷ್ಟು ಮೈನರ್ ಇರಿಗೇಷನ್ ಪಾಜೆಕ್ಟುಗಳನ್ನು ಕಟ್ಟಿದ್ದೀರಿ ಅವುಗಳಿಗೆ ಇನ್‌ಫ್ರಕ್ಚುಯಸ್ ಖರ್ಚು ಏನು ಮಾಡಿದ್ದೀರಿ ಎಂಬುದನ್ನು ನೋಡಬೇಕು. ಯಾವುದೇ ಒಂದು ಭಯವಿಲ್ಲದೇ ನಿರ್ದಾಕ್ಷಿಣ್ಯವಾಗಿ ಕ್ರಮತೆಗೆದುಕೊಳ್ಳಬೇಕು. ರೆವಿನ್ಯೂ ಇಲಾಖೆಯವರು ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ಇದನ್ನು ನೋಡಿದರೆ ಎಷ್ಟು ಹಣ ನಿಜವಾಗಿ ಖರ್ಚಾಗಿದೆ. ಎಷ್ಟು ಬೆನಿಫಿಟ್ ಆಗಿದೆ ಎಂಬುದು ನಮಗೆ ಗೊತ್ತಾಗುತ್ತದೆ. ಮೊದಲು ಅಧಿಕಾರಿಗಳು ಅಂದಾಜು ತಯಾರುಮಾಡಿ ಅದಕ್ಕೆ ಸರ್ಕಾರದ ಮಂಜೂರಾತಿ ಪಡೆಯುವಾಗ ಅದರಿಂದ ಎಷ್ಟು ಎಕರೆ ಬೆನಿಫಿಟ್ ಆಗುತ್ತದೆ ಎಂದು ಕೊಟ್ಟಿರುತ್ತಾರೆಯೋ ಅದನ್ನು ಆ ಕೆಲಸ ಅಥವಾ ಯೋಜನೆ ಮುಗಿದ ಮೇಲೆ ಅದರಿಂದ ಎಷ್ಟು ಎಕರೆ ಜಮೀನು ನೀರಾವರಿಗೋಸ್ಕರ ಬೆನಿಫಿಟ್ ಆಗಿದೆ ಎಂಬುದನ್ನು ವೆರಿಫೈಮಾಡಿ ನೋಡಿದರೆ ಅವರು ಕೊಟ್ಟಿರತಕ್ಕ ಅಂಕಿಅಂಶಗಳು ಎಂದು ನಮಗೆ ಗೊತ್ತಾಗುತ್ತದೆ. ಯಾವ ಒಂದು ನೀರಾವರಿ ಯೋಜನೆಯನ್ನೇ ತೆಗೆದುಕೊಂಡರೂ ಕೂಡ ಅವರ ನಿರ್ಮಾಣಕ್ಕಾಗಿ ಎಷ್ಟು ಹಣ ಖರ್ಚಾಗಿದೆ, ಅದರಿಂದ ಎಷ್ಟು ಬೆನಿಫಿಟ್ ಆಗಿದೆ ಎಂಬುದನ್ನು ನೋಡುವುದಾದರೆ, ಅದರಲ್ಲಿ ಎಷ್ಟು ವೇಸ್ಟೇಜ್ ಇದೆ ಎಂಬುದು ಅರ್ಥವಾಗುತ್ತದೆ. ಇವೊತ್ತು ಸರ್ಕಾರದವರು ಕೊಟ್ಟಿರತಕ್ಕ ಅಂಕಿಅಂಶಗಳಲ್ಲಿ ಬೋಗಸ್ ಅಂಕಿಅಂಶಗಳಿವೆ. ನಾನು ತಮಗೆ ಉದಾಹರಣೆಗೆ ಹೇಳುವುದಾದರೆ, ಆಡಳಿತದ ಜವಾಬ್ದಾರಿಯನ್ನು ಹೊತ್ತಿರತಕ್ಕವರು ಜನತೆಯನ್ನು ಮೋಸಗೊಳಿಸತಕ್ಕ ಮನಸ್ಸಿಗೆ ಬಂದಂಥ ಮತ್ತು ವಂಚನೆ ಮಾಡತಕ್ಕ ಅಂಕಿಅಂಶಗಳನ್ನು ಬೆಳೆಸಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ ಅದೇನೆಂದರೆ, ಶ್ರೀಮಾನ್ ಚನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ ಅವರು ಮಾಡಿದ ಹಾರಂಗಿ ಯೋಜನೆ ಏಷ್ಯಾ ಖಂಡದಲ್ಲೇ ವಿಶಿಷ್ಟವಾದುದು ಎಂದರು. ಅವರು ಹೋಗಿ ಬೇರೆ ಮಂತ್ರಿಗಳು ಬಂದಾಗ ಅಧಿಕಾರಿಗಳು ಅದೇ ಯೋಜನೆಯ ಬಗ್ಗೆ ಬೇರೆ ವಿವರಗಳನ್ನು ಕೊಟ್ಟಿದ್ದಾರೆ. ಆಡಳಿತಗಾರರು ಅಂಕಿಅಂಶಗಳನ್ನು ಬದಲಾಯಿಸಕ್ಕದ್ದು ಏನಿದೆ ಅದು ಸರಿಯಲ್ಲ. ಟೆಕ್ನಿಕಲ್ ಆಫೀಸರುಗಳು ಇಂಡಿಪೆಂಡೆಂಟ್ ಡಿಸಿಷನ್ ತೆಗೆದುಕೊಳ್ಳುವುದಕ್ಕೆ ಅವಕಾಶ ವಿರಬೇಕು. ಅವರ ಮೇಲೆ ಯಾವುದೇರೀತಿಯ ಪ್ರಭಾವವನ್ನು ಬೀರಬಾರದು. ಪಬ್ಲಿಕ್ ವರ್ಕ್ಸ್ ಇಲಾಖೆಯ ಅಡ್ಮಿನಿಸ್ಟ್ರೇಷನ್ನಿನಲ್ಲಿರತಕ್ಕ ಲಂಚಕೋರತನ, ಅದಕ್ಷತೆ, ಜಾತೀಯತೆ ಇವುಗಳನ್ನು ತೊಡೆದು ಹಾಕದೇ

ಹೋದರೆ ಈ ರಾಜ್ಯದ ಏಳಿಗೆ ಆಗುವುದಿಲ್ಲ. ಈ ದೇಶದ ಅಭ್ಯುದಯವಾಗುವುದಿಲ್ಲ. ಅದು ಆಗದೇ ಹೋದರೆ ಜನತೆ ಕ್ರಾಂತಿ ಏಳುತ್ತಾರೆ ಎಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಸಿಂಗಾರಿಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣ ಕಾಸಿನ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಆಯವ್ಯಯ ಅಂದಾಜನ್ನು ಸ್ವಾಗತಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಅಧ್ಯಕ್ಷರು ಅವಕಾಶವನ್ನು ಕೊಟ್ಟದಕ್ಕಾಗಿ ನಾನು ಅವರಿಗೆ ಕೃತಜ್ಞ ನಾಗಿದ್ದೇನೆ. ಈ ಸಾರಿ ಮಂಡಿಸಿರತಕ್ಕ ಆಯವ್ಯಯದಲ್ಲಿ ಸರ್ಕಾರದ ಹೊಸ ಯೋಜನೆಗಳು ಜನತೆಯ ಮುಂದೆ ಇಲ್ಲ. ಹೊಸ ಕರಗಳನ್ನೂ ಇಟ್ಟಿಲ್ಲ. ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ದೇಶದಲ್ಲಿರತಕ್ಕ ಕಚ್ಚಾ ಮಾಲುಗಳ ಹೆಚ್ಚು ಹೆಚ್ಚು ಉಪಯೋಗ ಪಡೆದು ಕೊಂಡು ನಮ್ಮ ದೇಶದಲ್ಲಿ ಹೆಚ್ಚಿಗೆ ಉದ್ಯಮವನ್ನು ಸ್ಥಾಪನೆ ಮಾಡತಕ್ಕ ಹವ್ಯಾಸದಲ್ಲಿ ಸರ್ಕಾರ ದವರು ತೊಡಗಿದ್ದಾರೆ. ಇದು ಸ್ವಾಗತಾರ್ಹವಾದ ಸಂಗತಿ. 7-8 ವರ್ಷಗಳಿಂದೀಚೆಗೆ ನಮ್ಮ ದೇಶದಲ್ಲಿ ಉದ್ಯಮಗಳ ಸ್ಥಾಪನೆಯನ್ನು ಹೆಚ್ಚಿನ ಪ್ರಮಾಣದಲ್ಲಿ ನಿರೀಕ್ಷಣೆ ಮಾಡುತ್ತಾ ಇಲ್ಲ. ಅದಕ್ಕೆ ಕಾರಣವನ್ನೂ ಕೂಡ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ನಿರೀಕ್ಷಿಸಿದ ಮಟ್ಟದಲ್ಲಿ ಉದ್ಯಮದಿಂದ ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತಾ ಇಲ್ಲ ಎನ್ನುವ ವಾದವನ್ನು ಸರ್ಕಾರದವರು ಒಪ್ಪಿಕೊಂಡಿ ದ್ದಾರೆ. ಆದರೆ ಏತಕ್ಕೋಸ್ಕರ ಕೈಗಾರಿಕೆ ಈ ರೀತಿ ಆಯಿತು ಎನ್ನುವುದನ್ನು ಕಂಡು ಹಿಡಿಯುವ ಹವ್ಯಾಸಕ್ಕೆ ಸರ್ಕಾರದವರು ಹೋಗಿಲ್ಲ ಎಂದು ನನಗೆ ಅನಿಸುತ್ತದೆ. ತರಪೇತಿಯಿಲ್ಲದೆ ಕೈಗಾರಿಕೆ ಗಳನ್ನು ನಿರ್ವಹಿಸುವಂತಹ ಪದ್ಧತಿಯನ್ನು ಇವರು ಅನುಸರಿಸಿಕೊಂಡು ಬಂದಿದ್ದಾರೆ. ಈ ಒಂದು ಪದ್ಧತಿ ತಪ್ಪಬೇಕು. ಉದ್ಯಮಗಳಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ಉದ್ಯಮ ಹಿಮ್ಮೆಟ್ಟುತ್ತಿದೆ. ಇಂಥಾ ಅಧಿಕಾರಿಗಳನ್ನು ಅಲ್ಲಿಯೇ ತಡೆ ಹಿಡಿಯುವ ಪದ್ಧತಿಯನ್ನು ಸರ್ಕಾರದವರು ಅನುಸರಿಸಿಕೊಂಡು ಬರುತ್ತಿದ್ದಾರೆ. ಈ ಎರಡು ಕಾರಣಗಳಿಂದ ಇವೊತ್ತು ಉದ್ಯಮ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಅಭಿವೃದ್ಧಿ ಹೊಂದುತ್ತಿಲ್ಲ. ಆದ್ದರಿಂದ ಇದನ್ನು ಸರಿಪಡಿ ಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎನಿಸುತ್ತದೆ.

ಮೂರನೆಯದಾಗಿ ನಮ್ಮ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕ ಕೆಲಸಗಾರರು ಯಾರು ಇದ್ದಾರೆ ಅವರಿಗೆ ಸಾಕಷ್ಟು ತೃಪ್ತಿ ಇಲ್ಲದೆ ಇರುವುದು. ನಮ್ಮ ಸಂಸ್ಥಾನದಲ್ಲಿ ಉದ್ಯಮಗಳಲ್ಲಿ ಕೆಲಸ ಮಾಡತಕ್ಕ ಕೆಲಸಗಾರರಿಗೆ ತರಪೇತಿಯನ್ನು ಕೊಟ್ಟು ಸಾಕಷ್ಟು ತೃಪ್ತಿಯುಂಟಾಗುವ ರೀತಿಯಲ್ಲಿ ಅವರಿಗೆ ಸಂಬಳ ಸಾರಿಗೆಗಳನ್ನು ಕೊಟ್ಟಿದ್ದರೆ ಬಹುಶಃ ಉದ್ಯಮಗಳಲ್ಲಿ ಉತ್ಪತ್ತಿ ದ್ವಿಗುಣವಾಗುತ್ತಿತ್ತು ಎನಿಸುತ್ತದೆ.

ನಾಲ್ಕನೆಯದಾಗಿ ವಾಸ್ತವವಾದ ಸ್ಥಿತಿಗತಿಗಳನ್ನು ಪರಿಗಣನೆಗೆ ತೆಗೆದುಕೊಂಡು ಲೇಬರ್ ಲೆಜಿಸ್ಲೇಷನ್ ಮಾಡಿ ಕಾರ್ಮಿಕರಿಗೆ ಅನುಕೂಲಗಳನ್ನು ಕಲ್ಪಿಸಿ ಕೊಡತಕ್ಕದ್ದು ಬಹಳ ಮುಖ್ಯ ವಾದದ್ದು. ನಮ್ಮ ಸರ್ಕಾರದವರು ಲೇಬರ್ ಲೆಜಿಸ್ಲೇಷನ್ ಮಾಡಿ ಕಾರ್ಮಿಕರಿಗೆ ಅನುಕೂಲ ಗಳನ್ನು ಕಲ್ಪಿಸಿಕೊಡಬೇಕೆಂಬ ಸದುದ್ದೇಶದಿಂದ ಕೂಡಿದ್ದರೂ ಸಹ ಅದನ್ನು ನಿರೀಕ್ಷಿಸಿದ ಮಟ್ಟದಲ್ಲಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅವರಲ್ಲಿ ಸರ್ಕಾರದವರು ಹೆಚ್ಚು ಆಸಕ್ತಿಯನ್ನು ವಹಿಸು ವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಸರ್ಕಾರದವರು ಅದನ್ನು ಪರಿಶೀಲಿಸಬೇಕು.

ಇನ್ನೊಂದು ಕಾರಣ ಏನೆಂದರೆ, ಕೆಲವು ಕಾರ್ಖಾನೆಗಳನ್ನು ಬಹಳಹಿಂದೆ ಸ್ಥಾಪನೆಮಾಡಿದ್ದಾರೆ. ಕಾರ್ಖಾನೆಗಳಲ್ಲಿ ಪೈಪೋಟಿ ಹೆಚ್ಚಾಗಿ ಕಾಸ್ಟ್ ಆಫ್ ಪ್ರೊಡಕ್ಷನ್ ಕಡಿಮೆ ಆಗಬೇಕು. ಹೊಸ ಉಪಕರಣಗಳನ್ನು ಉಪಯೋಗಿಸುವ ಹವ್ಯಾಸವನ್ನು ಬೆಳೆಸದೇ ಹೋದರೆ ಕಾರ್ಖಾನೆಗಳಲ್ಲಿ ಉತ್ಪತ್ತಿ ಹಿಮ್ಮೆಟ್ಟುತ್ತದೆ ಅದನ್ನು ಮುಂದೆ ತರುವುದಕ್ಕೆ ಸಾಧ್ಯವಿಲ್ಲ ಅನಿಸುತ್ತದೆ. ಈ ಒಂದು ದೃಷ್ಟಿಯಿಂದ ಯಾವ ಯಾವ ಉದ್ಯಮದಲ್ಲಿ ಯಾರು ಯಾರು ಪರಿಣತರು, ತಜ್ಞರು ಇದ್ದಾರೆ ಅಂಥವ ರನ್ನು ಪ್ರತಿಯೊಂದು ಉದ್ಯಮಕ್ಕೂ ನೇಮಿಸಿ ಅವರಿಂದ ವರದಿಯನ್ನು ತರಿಸಿಕೊಂಡು ಆ ಉದ್ಯಮಗಳ ಬೆಳವಣಿಗೆಗೆ ಪ್ರೋತ್ಸಾಹವನ್ನು ಕೊಡತಕ್ಕಂಥ ಮನೋಭಾವನೆ ಉಂಟಾಗಬೇಕು ಎಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಈ ದಿವಸ ನಮ್ಮ ಮುಂದಿರತಕ್ಕ ಆಯವ್ಯಯ ಮುಂಗಡ ಪತ್ರವನ್ನು ನೋಡಿದರೆ ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ, ನಮ್ಮ ದೇಶದಲ್ಲಿ ಈ ವರ್ಷ ಮಳೆ ಬೆಳೆ ಆಗದೆ ಈಗ 3 ವರ್ಷಗಳಿಂದ ರೈತರು ಕ್ಷಾಮ ಡಾಮರಗಳಿಗೆ ತುತ್ತಾಗಿದ್ದಾರೆ. ಸ್ವಲ್ಪ ಮಟ್ಟಿನ ಪರಿಹಾರ ಕಾಮಗಾರಿಗಳನ್ನು ಕೈಗೊಂಡಿದ್ದೇವೆಂದು ಹೇಳಿದ್ದಾರೆ. ಮುಂದಿನ ವರ್ಷದ ಆಯವ್ಯಯ ಪಟ್ಟಿಯಲ್ಲಿ. ಈ ಬಾಬಿಗೆ ಹೆಚ್ಚು ಹಣವನ್ನು ಒದಗಿಸದೇ ಇರುವುದು ಸ್ವಲ್ಪ ಮಟ್ಟಿಗೆ ಶೋಚನೀಯ

(ಶ್ರೀ ಕೆ. ಸಿಂಗಾರಿಗೌಡ)

ವಾಗಿದೆ. ಈ ಬಾಬಿಗೆ ಹಿಂದೆ 65 ಲಕ್ಷ ರೂಪಾಯಿಗಳನ್ನು ಏನು ಕೊಟ್ಟಿದ್ದಾರೆ ಅದನ್ನು ಖರ್ಚು ಮಾಡಲಿಲ್ಲ, ಅದಕ್ಕೆ ಕಾರಣ ಮಳೆ ಇರಲಿಲ್ಲ. ಭೂಮಿ ಒಣಗಿ ಹೋಗಿತ್ತು. ಆದ್ದರಿಂದ ರೈತರು ಆ ಹಣವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಈ ದೃಷ್ಟಿಯಿಂದ ಈ ಹಣವನ್ನು ಆ ಕೆಲಸಕ್ಕಾಗಿ ಹಾಗೆಯೇ ಮುಂದುವರಿಸಬೇಕೆಂದು ನಾನು ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮತ್ತು ಪರಿಹಾರ ಕಾಮಗಾರಿ ಕೆಲಸವನ್ನು ಇನ್ನು 5-6 ತಿಂಗಳವರೆಗೆ ಮುಂದುವರಿಸಿ ಜನಗಳಿಗೆ ಕೂಲಿಸಿಕ್ಕುವಂತೆ ಮಾಡ ಬೇಕೆಂದು ನಾನು ಹೇಳುತ್ತೇನೆ.

ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಇದನ್ನು ಈ ನಮ್ಮ ಶಾಸನ ಸಭೆಯಲ್ಲಿ ಮಾನ್ಯ ಸದಸ್ಯರನೇಕರು ಆಗಾಗ ಹೇಳುತ್ತಿದ್ದಾರೆ ಅದು ಏನೆಂದರೆ, ನಮ್ಮ ದೇಶದಲ್ಲಿ ಅನೇಕ ಜಿಲ್ಲೆಗಳಲ್ಲಿ ಅನೇಕ ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರಿದಾಗ ಸರ್ಕಾರದವರು ಏನು ಮಾಡುತ್ತಾರೆ ಎಂಬುದನ್ನು ನಾನು ಕಣ್ಣಾರೆ ನೋಡುತ್ತಿದ್ದೇನೆ. ದೇಶದಲ್ಲಿ ಕ್ಷಾಮ ಪರಿಸ್ಥಿತಿ ಒದಗಿದಾಗ, ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಸರ್ಕಾರದವರು 10—20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಪರಿಹಾರ ಕಾಮಗಾರಿಗಳನ್ನು ಮಾಡಿ ಜನಗಳಿಗೆ ಹೊಟ್ಟೆಗೆ ಒಂದು ಅನುಕೂಲ ಮಾಡಿ ಕೊಟ್ಟರೆ ಸಾಕು ಎನ್ನುವ ಮನೋ ಭಾವನೆಯಿಂದ ನೋಡಿಕೊಂಡು ಹೋದರೆ ಪ್ರಯೋಜನವಿಲ್ಲ. ಅಲ್ಲಿ ವಾಸಮಾಡತಕ್ಕ ಜನಗಳಿಗೆ ಕೊನೆಗೆ ಜಿಗುಪ್ಸೆ ಉಂಟಾಗುವುದಕ್ಕೆ ಕಾರಣವಾಗುತ್ತದೆ. ಅದಕ್ಕೋಸ್ಕರವಾಗಿ ಆಗಿಂದಾಗ್ಗೆ ಕ್ಷಾಮಕ್ಕೆ ತುತ್ತಾಗತಕ್ಕ ಪ್ರದೇಶಗಳಲ್ಲಿ ಒಂದು ಶಾಶ್ವತವಾದ ಪರಿಹಾರ ಯೋಜನೆಯನ್ನು ನಿರೂಪಣೆ ಮಾಡದಿದ್ದರೆ ಆ ಪ್ರಾಂತದ ಜನಗಳಿಗೆ ಸರ್ಕಾರ ಏನೂ ಸೌಲಭ್ಯಗಳನ್ನು ಒದಗಿಸಿಕೊಟ್ಟ ಹಾಗೆ ಆಗುವುದಿಲ್ಲ.

ಈ ಒಂದು ಯೋಜನೆಯನ್ನು ಏಕಕಾಲದಲ್ಲಿ ಕೈಕೊಳ್ಳಬೇಕು. ಸಣ್ಣ ನೀರಾವರಿ ಯೋಜನೆ ಗಳನ್ನು ಕೈಕೊಳ್ಳುವುದು, ಬಾವಿಗಳನ್ನು ತೋಡಿಸಿಕೊಡುವುದು, ಕೊಳವೆ ಬಾವಿಗಳನ್ನು ಹಾಕಿಸಿ ಕೊಡುವುದು ಇವೆಲ್ಲವನ್ನೂ ಏಕಕಾಲದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಮಾಡಿಸಿಕೊಟ್ಟರೆ ರೈತರಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಈ ಅನುಕೂಲಗಳನ್ನು ನಮ್ಮ ಪ್ರಾಂತ್ಯದ ರೈತರಿಗೆ ಮಾಡಿಕೊಡದಿದ್ದರೆ ಬಹುಶಃ ಇನ್ನು ಯಾವ ಸೌಲಭ್ಯಗಳನ್ನೂ ಒದಗಿಸಿಕೊಡುವುದಕ್ಕಾಗುವುದಿಲ್ಲ. ಏನಾದರೂ ಅನುಕೂಲಗಳನ್ನು ಮಾಡಿಕೊಡಬೇಕೆಂದು ನಮ್ಮ ಸರ್ಕಾರದವರನ್ನು ನಾವು ಕೇಳಿದರೆ, ಸರ್ಕಾರದವರು ಹಣವಿಲ್ಲವೆಂದು ಹೇಳುತ್ತಾರೆ. ಮತ್ತು ಹಣಕ್ಕಾಗಿ ಕೇಂದ್ರಸರ್ಕಾರದ ಕಡೆಗೆ ನೋಡುವುದು ಹವ್ಯಾಸವಾಗಿದೆ. ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ, ಯಾವ ಯಾವ ಭಾಗಗಳಲ್ಲಿ ಆಗಾಗ್ಗೆ ಕ್ಷಾಮ ಬರುತ್ತದೋ ಅಂತಹ ಪ್ರದೇಶಗಳಲ್ಲಿ ನಾನು ಮೊದಲೇ ಹೇಳಿದಂಥ ಕೆಲವು ಯೋಜನೆಗಳನ್ನು ಕಲ್ಪಿಸಿಕೊಡದಿದ್ದರೆ ಮುಂದೆ ರೈತಾಪಿ ಜನರು ಸರ್ಕಾರದ ಬಗ್ಗೆ ಜಿಗುಪ್ಸೆ ಪಡುವ ಅವಕಾಶ ಬರಬಹುದು.

ಇನ್ನು ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ 100ಕ್ಕೆ 93 ಭಾಗದಲ್ಲಿ ಸಾಂದ್ರ ಬೇಸಾಯದ ಕಾರ್ಯಕ್ರಮ ನಡೆಯುತ್ತಿದೆಯೆಂದು ಹೇಳಿದ್ದಾರೆ. ನನ್ನ ಜಿಲ್ಲೆಯಲ್ಲೂ ಸಹ ಈ ಸಾಂದ್ರ ಬೇಸಾಯದ ಕಾರ್ಯಕ್ರಮದಬಗ್ಗೆ ರೈತರಿಗೆ ಮಾಹಿತಿ ಕೊಡುತ್ತಿದ್ದಾರೆ. ರೈತರಿಗೆ ಸರ್ಕಾರದವರು ಒದಗಿಸಿಕೊಡುತ್ತಿರುವ ಮಾಹಿತಿ ಸರಿಯಾಗಿಲ್ಲವೆಂದು ನನಗನ್ನಿಸುತ್ತದೆ. ಸಾಂದ್ರ ಬೇಸಾಯ ವೆಂದರೆ, ಆಧುನಿಕ ಉಪಕರಣಗಳನ್ನು ಉಪಯೋಗಿಸುವುದು, ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುವುದು ಒಳ್ಳೆಯ ಬೀಜಗಳನ್ನು ಬಿತ್ತಿ ಹೆಚ್ಚಿನ ಧಾನ್ಯ ಸಂಪತ್ತನ್ನು ಬೆಳೆಯುವುದು, ಬೆಳೆಗಳಿಗೆ ಹುಳಗಳು ಬೀಳದಂತೆ ಕ್ರಿಮಿನಾಶಕಗಳನ್ನು ಉಪಯೋಗಿಸಿ ಸಂರಕ್ಷಿಸಿಕೊಳ್ಳುವುದು. ಈ ವಿಧಾನಗಳನ್ನು ನಮ್ಮ ರೈತರು ಅನುಸರಿಸುವಂತೆ ಮಾಡಬೇಕಾದರೆ ಅವರ ಮನಸ್ಸನ್ನು ಈ ಕಡೆಗೆ ಪರಿವರ್ತನೆ ಮಾಡಬೇಕಾದರೆ, ಇನ್ನೂ ಕೆಲವು ವರ್ಷಗಳವರೆಗೆ ಸಾಕಷ್ಟು ತಿಳಿವಳಿಕೆ ಕೊಡುವುದು ಅಗತ್ಯವಾಗಿದೆ. ಈ ರೀತಿಯ ತಿಳಿವಳಿಕೆಯನ್ನು ಕೊಡುವ ಜವಾಬ್ದಾರಿ ಪಂಚಾಯಿತಿಗಳ ಮೇಲೆ ಮತ್ತು ಸಹಕಾರಸಂಘಗಳ ಮೇಲೆ ಬಿದ್ದಿದೆ. ಸರ್ಕಾರದವರು ಇದಕ್ಕಾಗಿ ನೇಮಿಸಿರುವ ಅಧಿಕಾರಿಗಳು ಸಹ ರೈತರಿಗೆ ಸಾಕಷ್ಟು ತಿಳಿವಳಿಕೆ ಕೊಡಬೇಕಾಗಿದೆ. 100ಕ್ಕೆ 100ರಷ್ಟು ರೈತರನ್ನು ಏಕಾಲದಲ್ಲಿ ಈ ಸಾಂದ್ರ ಬೇಸಾಯದಲ್ಲಿ ನಿರತರಾಗುವಂತೆ ಮಾಡುವುದು ಕಷ್ಟವಾಗಿದೆ. ಈ ಬಗ್ಗೆ ಸರ್ಕಾರದವರು 100ಕ್ಕೆ 93 ಭಾಗದಲ್ಲಿ ಸಾಂದ್ರ ಬೇಸಾಯ ಪದ್ಧತಿಯನ್ನು ಅನುಸರಿಸಲಾಗುತ್ತಿದೆಯೆಂದು ಹೇಳಿರುವುದರಲ್ಲಿ ಸತ್ಯವಿಲ್ಲವೆಂದು ನನಗನ್ನಿಸುತ್ತದೆ. ಎಲ್ಲಾ ರೈತರಲ್ಲೂ ಈ ಪದ್ಧತಿಯ ಬಗ್ಗೆ ಜಾಗೃತಿ ಉಂಟಾಗುವವರೆಗೂ ನಮ್ಮ ಜಿಲ್ಲೆಯಲ್ಲಿ ಇನ್ನೂ ಕೆಲವಾರು ವರ್ಷಗಳವರೆಗೆ ಸಾಂದ್ರಬೇಸಾಯ ಪದ್ಧತಿಯನ್ನು ಮುಂದುವರೆಸುವುದು ಒಳ್ಳೆಯದು.

ಬೇಸಾಯ ರಂಗದಲ್ಲಿ ಇವತ್ತಿನದಿವಸ 100ಕ್ಕೆ 70 ರಿಂದ 75ರವರೆಗೆ ಇದ್ದಾರೆ. ಆದ್ದರಿಂದ ಸರ್ಕಾರದವರು ಈ ರೈತಾಪಿ ಜನರಿಗೆ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಒದಗಿಸಿಕೊಡದಿದ್ದರೆ ಮುಂದೆ ಬೇಸಾಯದ ಉತ್ಪತ್ತಿಗೇ ಧಕ್ಕೆ ಬರಬಹುದು. ಮತ್ತು ಈಗ ಬೇಸಾಯದ ಕಸಬಿನಲ್ಲಿ ನಿರತರಾಗಿರುವವರು ಮುಂದೆ ಆ ಕಸಬನ್ನೇ ಬಿಟ್ಟುಬಿಡುವ ಪರಿಸ್ಥಿತಿ ಬರಬಹುದು. ಹೆಚ್ಚು ಹೆಚ್ಚು ಆಹಾರವನ್ನು ಬೆಳೆಯಬೇಕಾದರೆ ವ್ಯವಸಾಯ ರಂಗದಲ್ಲಿ ಬಹಳಮಟ್ಟಿಗೆ ಸಂಶೋಧನೆ ನಡೆಯಬೇಕಾಗಿದೆ. ಈ ವಿಚಾರದಲ್ಲಿ ಸುಮಾರು 3—4 ವರ್ಷಗಳ ಹಿಂದೆ ವ್ಯವಸಾಯ ಇಲಾಖೆಯವರು ನಿರತರಾಗಿದ್ದರು. 1961-62ರಲ್ಲಿ ನಮ್ಮ ಸರ್ಕಾರದವರು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಮನಸ್ಸು ಮಾಡಿದರು. ನಂತರ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆಯಾದ ಮೇಲೆ ಈ ಸಂಶೋಧನೆಯ ಕಾರ್ಯವನ್ನು ವ್ಯವಸಾಯ ಇಲಾಖೆಯವರು ವಿಶ್ವವಿದ್ಯಾನಿಲಯದವರಿಗೆ ವಹಿಸಿಕೊಟ್ಟರು. ಈ ಬಗ್ಗೆ ಒಂದು ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಿ ಸಂಶೋಧನೆಗಾಗಿ ವಿಶ್ವವಿದ್ಯಾನಿಲಯದವರಿಗೆ 11 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಪಾಸಾಯಿತು. ಈಗ 35 ಲಕ್ಷ ರೂಪಾಯಿಗಳನ್ನು ಸಂಶೋಧನೆ ನಡೆಸಲು ಸರ್ಕಾರದವರು ಕೊಡುತ್ತಿದ್ದಾರೆ. ಇದರ ಜೊತೆಗೆ ಕೇಂದ್ರ ಸರ್ಕಾರದ ಕೃಷಿ ಸಂಶೋಧನಾ ಇಲಾಖೆಯವರು ಕೂಡ ಅನೇಕ ರೀತಿಯಲ್ಲಿ ನಮ್ಮ ಕೃಷಿ ವಿಶ್ವವಿದ್ಯಾನಿಲಯದವರಿಗೆ ಸಹಕಾರ ಮತ್ತು ಸಹಾಯವನ್ನು ಮಾಡಿಕೊಂಡು ಬಂದಿದ್ದಾರೆ. ಮೈಸೂರು ರಾಜ್ಯದಲ್ಲಿ ಸಂಶೋಧನಾ ಕಾರ್ಯವನ್ನು ಕೃಷಿ ವಿಶ್ವವಿದ್ಯಾನಿಲಯದವರು ಜನಪ್ರಿಯವಾಗಿ ನಡೆಸಿಕೊಂಡು ಹೋಗುತ್ತಿದ್ದರು. ಆದರೆ ಇವತ್ತಿನದಿವಸ ಸರ್ಕಾರದವರು ಈ ಸಂಶೋಧನೆಗಾಗಿ 35 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಇದರಿಂದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಏನೊಂದು ಕೆಲಸಕಾರ್ಯಗಳು ನಡೆಯುತ್ತಿದ್ದವೋ ಏನೊಂದು ಸಂಶೋಧನೆ ಕಾರ್ಯಗಳು ನಡೆಯುತ್ತಿದ್ದವೋ ಅವೆಲ್ಲವನ್ನೂ ನಿಲ್ಲಿಸುವ ಪರಿಸ್ಥಿತಿಗೆ ಬಂದಿದ್ದಾರೆ. ಮೊದಲು ಕೊಡುತ್ತಿದ್ದ 11 ಲಕ್ಷ ರೂಪಾಯಿಗಳನ್ನು ಮಾತ್ರ ಈಗ ಕೊಡುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಮಾತ್ರ ಸರ್ಕಾರದವರು ಮಲತಾಯಿಧೋರಣೆ ತಳೆಯುವುದು ಸರಿಯಲ್ಲ. ಇವತ್ತಿನದಿವಸ ಕೃಷಿ ವಿಶ್ವವಿದ್ಯಾನಿಲಯದವರು ತಮ್ಮ ಸಂಶೋಧನೆಯನ್ನು ಮುಂದುವರಿಸಿಕೊಂಡು ಹೋಗುವ ಅಗತ್ಯತೆ ಇದೆ. ಇದಕ್ಕಾಗಿ ಸಿಬ್ಬಂದಿ ವರ್ಗವಿದೆ, ನುರಿತ ತಜ್ಞರು ಇದ್ದಾರೆ, ಆದ್ದರಿಂದ ಸರ್ಕಾರದವರು ಮೊದಲಿನಂತೆ ಈ ಸಂಶೋಧನೆಗಾಗಿ ಹಣವನ್ನು ಒದಗಿಸುವು ಸರಿಯೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸಕ್ಕಾಗಿ ರಾಜ್ಯದ ಒಟ್ಟು ಆದಾಯದಲ್ಲಿ 100ಕ್ಕೆ 20ಕ್ಕೆ ಮೀರಿ ಖರ್ಚು ಮಾಡುತ್ತಿದ್ದೇವೆ. ಜನರಲ್ಲಿ ಒಳ್ಳೆಯ ತಿಳಿವಳಿಕೆ ಮೂಡಬೇಕಾದರೆ ಸರ್ಕಾರದವರು ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚು ಮಾಡಲೇ ಬೇಕಾಗುತ್ತದೆ. ಇದು ಸರ್ಕಾರದ ಕರ್ತವ್ಯ. ಹೆಚ್ಚಿನ ಮಕ್ಕಳಿಗೆ ವಿದ್ಯಾಭ್ಯಾಸದ ಸೌಕರ್ಯವನ್ನು ಕಲ್ಪಿಸಿಕೊಡುವುದು ಪ್ರಜಾಪ್ರಭುತ್ವದಲ್ಲಿ ಒಂದು ಮುಖ್ಯವಾದ ಅಂಗವಾಗಿದೆ. ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಇಷ್ಟೊಂದು ಹಣವನ್ನು ಖರ್ಚು ಮಾಡುತ್ತಿದ್ದರೂ ಸಹ, ಪ್ರೌಢಶಾಲೆಗಳಿಂದ ಹೊರಬರತಕ್ಕಂಥ ವಿದ್ಯಾರ್ಥಿ ವೃಂದದಲ್ಲಿ ಏನೊಂದು ಬದಲಾವಣೆಗಳಾಗಬೇಕೋ, ಯಾವ ಒಂದು ಗುಣಗಳು ಮೂಡಿ ಬರಬೇಕೋ, ಯಾವ ಒಂದು ಸಂಸ್ಕಾರ ಬೆಳೆದು ಬರಬೇಕೋ, ಅವುಗಳು ಮೂಡಿ ಬರುತ್ತಿಲ್ಲ. ಈ ಗುಣಗಳು ಈ ವಿದ್ಯಾರ್ಥಿಗಳಲ್ಲಿ ಬಹಳ ಕೀಳು ಮಟ್ಟದಲ್ಲಿದೆಯೆಂದು ನನ್ನ ಅಭಿಪ್ರಾಯ. ಸೌಜನ್ಯತೆ, ವಿನಯ ಮತ್ತು ಗೌರವ ಮಾಯವಾಗುತ್ತಿವೆ. ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು 36 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದಾರೆ. ಇಷ್ಟೊಂದು ಹಣ ಖರ್ಚು ಮಾಡುವಾಗ, ಆ ಹಣಕ್ಕೆ ತಕ್ಕ ಪ್ರತಿಫಲ ಬರುವಂತೆ ವಿದ್ಯಾಭ್ಯಾಸದ ಈಗಿನ ಪದ್ಧತಿಯನ್ನು ಬದಲಾಯಿಸುವುದು ಸೂಕ್ತವಾಗಿದೆ. ವಿದ್ಯಾರ್ಥಿಗಳಲ್ಲಿ ಒಳ್ಳೆಯ ಸೌಜನ್ಯಶೀಲ ಗುಣಗಳು ವೃದ್ಧಿಯಾಗುವಂಥ ವಿದ್ಯಾಭ್ಯಾಸವನ್ನು ಕೊಡುವುದು ಒಳ್ಳೆಯದು. ಈಗಿನ ಪದ್ಧತಿಯನ್ನು ಮಾರ್ಪಾಡು ಮಾಡದಿದ್ದರೆ, ವಿದ್ಯಾಭ್ಯಾಸಕ್ಕೆ ಇಷ್ಟೊಂದು ಹಣವನ್ನು ಖರ್ಚುಮಾಡುವುದರಲ್ಲಿ ಯಾವ ಬೆಲೆಯೂ ಇಲ್ಲ. ಹಳ್ಳಿಗಳಲ್ಲಿರತಕ್ಕಂಥ ಅನೇಕ ಪ್ರಾಥಮಿಕ ಪಾಠಶಾಲೆಗಳಲ್ಲಿ 10—15ಕ್ಕಿಂತ ಹೆಚ್ಚು ಹುಡುಗರು ಇರುವುದಿಲ್ಲ. ನಮ್ಮ ರಾಜ್ಯಾಂಗದ ಪ್ರಕಾರ ಪ್ರತಿಯೊಬ್ಬ ಪ್ರಜೆಗೂ ವಿದ್ಯಾಭ್ಯಾಸ ಕೊಡಬೇಕಾಗಿದೆ. ಅಂದ ಮೇಲೆ ಪೋಷಕರುಗಳು ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗಳಿಗೆ ಕಳಿಸಬೇಕು. ಪ್ರಾಥಮಿಕ ಶಾಲೆಗಳಿಗಾಗಿ ಸರ್ಕಾರದವರು ಹೆಚ್ಚು ಹಣವನ್ನು ಖರ್ಚು ಮಾಡುತ್ತಿರುವುದರಿಂದ, ಪೋಷಕರು ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಕಳಿಸುವಂತೆ ತಕ್ಕ ಏರ್ಪಾಡುಗಳನ್ನು ಮಾಡಬೇಕು. ಈ ಬಗ್ಗೆ ಇನ್ನೊಂದು ಸಲಹೆಯೆಂದರೆ, ಹಳ್ಳಿಗಳಿಂದ ವಿದ್ಯಾರ್ಥಿಗಳು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡಲು ಪಟ್ಟಣಗಳಿಗೆ ಬರುತ್ತಾರೆ. ಅವರು ಪ್ರತಿದಿನ ಹಳ್ಳಿಗಳಿಂದ ಬಂದು ಹೋಗುವುದು ಬಹಳ ಕಷ್ಟವಿದೆ. ಹೋಗಿಬರುವುದರಲ್ಲಿಯೇ ಅವರು ಹೆಚ್ಚು ಸಮಯವನ್ನು ವ್ಯರ್ಥ ಮಾಡುವುದರಿಂದ, ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಆಸಕ್ತಿಯನ್ನು

(ಶ್ರೀ ಕೆ. ಸಿಂಗಾರಿಗೌಡ)

ವಹಿಸುವುದಕ್ಕಾಗುವುದಿಲ್ಲ. ಮತ್ತು ಇಂತಹ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಶಿಸ್ತು ಸಂಯಮ ಉಂಟಾಗುವುದಿಲ್ಲ. ಇಂತಹ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಶಿಸ್ತು ಸಂಯಮಗಳು ಬೆಳೆದು ಬರಬೇಕಾದರೆ ರೆಸಿಡೆನಿಯಲ್ ಸ್ಕೂಲ್‌ಗಳನ್ನು ಸ್ಥಾಪಿಸುವುದು ಒಳ್ಳೆಯದು. ಇಂತಹ ಸ್ಕೂಲುಗಳನ್ನು ಸಾರ್ವಜನಿಕರು ಕಟ್ಟಿಸಿಕೊಡಲು ಮುಂದೆ ಬಂದರೆ, ಅಂತಹವರಿಗೆ ಸರ್ಕಾರದವರು ಹೆಚ್ಚಿನ ಮಟ್ಟಿಗೆ ಸಹಾಯ ಮಾಡಬೇಕು. ಆ ಮೂಲಕ ಇಂತಹ ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಗತಿ ಸಾಧಿಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಶ್ರೀಮಾನ್ ದೇವೇಗೌಡರು ಮಾತನಾಡುವಾಗ, ಕಂದಾಯ ಹೆಚ್ಚಾಗಿ ಯಾವ ಕಡೆಯಿಂದ ಬರುತ್ತದೆಂಬ ಬಗ್ಗೆ ಸ್ವಲ್ಪ ಚಕಮಕಿ ನಡೆಯಿತು. ಹಳ್ಳಿಯವರಿಂದಲೇ ಹೆಚ್ಚು ಕಂದಾಯ ಬರಲಿ, ಅಥವಾ ಪಟ್ಟಣದವರಿಂದಲೇ ಹೆಚ್ಚು ಕಂದಾಯ ಬರಲಿ, ಅದು ಮುಖ್ಯ ಪ್ರಶ್ನೆಯಲ್ಲ, ಇವತ್ತಿನದಿವಸ ಯಾರು ಯಾವ ಕಸಬನ್ನು ಮಾಡುತ್ತಿರುತ್ತಾರೋ, ಅಂತಹವರಿಗೆಲ್ಲಾ ಸರ್ಕಾರದವರು ಸಹಾಯ ಮಾಡುವುದು, ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವುದು ಸರ್ಕಾರದ ಮುಖ್ಯ ಕರ್ತವ್ಯವಾಗಿದೆ. ವ್ಯಾಪಾರ ಮಾಡುವವರಿಗೆ, ಕಮ್ಮಾರ ವೃತ್ತಿ ಮಾಡುವವರಿಗೆ, ಚಾಪೆ ಮಾಡುವವರಿಗೆ, ಈ ರೀತಿ ಪ್ರತಿಯೊಂದು ವೃತ್ತಿಯವರಿಗೂ ಸೌಲಭ್ಯಗಳನ್ನು ಒದಗಿಸಿ ಕೊಡುವುದು ಸರ್ಕಾರದವರ ಕರ್ತವ್ಯವಾಗಿದೆ. ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಜನರು ಅನೇಕ ಆಶೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದರು. ಅದನ್ನು ನೆರವೇರಿಸಿಕೊಡುವುದು ಸರ್ಕಾರದವರ ಕರ್ತವ್ಯವಾಗಿದೆ. ಎಲ್ಲಾ ಕಸಬಿನವರಿಗೂ ಸೌಲಭ್ಯಗಳನ್ನು ಒದಗಿಸಿಕೊಡಬೇಕಾದರೆ ಸರ್ಕಾರದವರಿಗೆ ಹಣ ಬೇಕಾಗುತ್ತದೆ. ಈ ಹಣಕ್ಕಾಗಿ ಸರ್ಕಾರದವರು ಜನರ ಮೇಲೆ ತೆರಿಗೆಯನ್ನು ಹಾಕಿದರೂ ಕಷ್ಟವಾಗುತ್ತದೆ, ಸಾಲ ಮಾಡಿದರೂ ಸಹ ಕಷ್ಟವಾಗುತ್ತದೆ, ಅಲ್ಲದೆ ಕೆಲಸ ಕಾರ್ಯಗಳು ಕುಂಠಿತವಾಗುವುದಕ್ಕೆ ಅವಕಾಶ ಕೊಡದಂತೆ ನೋಡಿಕೊಳ್ಳಬೇಕಾಗಿದೆ. ಆದ್ದರಿಂದ ಸರ್ಕಾರಕ್ಕೆ ಯಾವ ರೀತಿಯಿಂದ ಹಣ ಬರಬೇಕೆಂಬುದನ್ನು ಪ್ರತಿಯೊಬ್ಬರೂ ಯೋಚನೆ ಮಾಡಬೇಕು. ನಾನಾ ರೀತಿಯ ತೆರಿಗೆಗಳು ಈಗ ಇರಬಹುದು. ಆದರೆ ಸರ್ಕಾರದವರು ಪ್ರತಿಯೊಬ್ಬರಿಗೂ ಸೌಕರ್ಯಗಳನ್ನು ಒದಗಿಸಿಕೊಡಬೇಕಾದರೆ ತೆರಿಗೆ ಹಾಕದೆ ವಿಧಿಯಿಲ್ಲ. ಈಗಿರತಕ್ಕಂಥ ಹಲವಾರು ಪಕ್ಷಗಳಲ್ಲಿ ಭೂಕಂದಾಯ ಇರಬೇಕೇ, ಬೇಡವೇ ಎನ್ನುವ ವಿಚಾರದಲ್ಲಿ ನಾನಾ ರೀತಿಯ ಅಭಿಪ್ರಾಯಗಳಿರಬಹುದು. ಈಗಿನ ಕಂದಾಯ ಪದ್ಧತಿಯನ್ನು ಬದಲಾಯಿಸಿದರೆ ಕೆಲವೊಂದು ವರ್ಗಗಳಲ್ಲಿ ಕಹಿ ವಾತಾವರಣ ಬರಬಹುದು. ನನಗಾದರೂ ಅನ್ನಿಸುತ್ತದೆ, ಹೆಚ್ಚಿನ ವರಮಾನವಿರುವವರಿಂದ ಹೆಚ್ಚು ಹೆಚ್ಚು ತೆರಿಗೆಯನ್ನು ವಸೂಲು ಮಾಡಬಹುದೆಂದು.

5-30 P.M.

ಇನ್ನು ಭೂಕಂದಾಯದ ವಿಷಯದಲ್ಲಿ ಕಳೆದ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಬಹುಶಃ ಸ್ವಲ್ಪ ಮಾರ್ಪಾಟು ಮಾಡಬೇಕಾಗುತ್ತದೆ. ಈಗಿರತಕ್ಕಂತಹ ಪರಿಸ್ಥಿತಿಯಲ್ಲಿ ಭೂಕಂದಾಯವನ್ನು ಬಿಟ್ಟು ಬೇರೆ ರೀತಿಯಲ್ಲಿ ವರಮಾನ ತೆಗೆದುಕೊಳ್ಳಬೇಕೆಂದು ಹಣಕಾಸಿನ ಸಚಿವರು ಅಪ್ಪಣೆ ಕೊಡಿಸಿದರು. ಈ ಸಾರಿ ಭೂಕಂದಾಯವನ್ನು ಉಳಿಸಿಕೊಂಡು ಹೋಗತಕ್ಕಂತಹ ವಾದವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ವಿರೋಧ ಪಕ್ಷದ ಸದಸ್ಯರು ಇದರ ಮೇಲೆ ಸ್ವಲ್ಪ ಕಟುವಾಗಿ ಟೀಕಿಸಿದರು. ನನಗಾಗಾದರೂ ಅನಿಸುತ್ತದೆ ಇದು ಸರಿ ಎಂದು. ಇನ್ನು ಸರ್ಕಾರದವರು ನೌಕರರಿಗೆ ಡಿ. ಎ. ಯನ್ನು ಕೊಟ್ಟಿದ್ದಾರೆ. ಸರ್ಕಾರಿ ನೌಕರರು ನೂರಕ್ಕೆ ಒಬ್ಬರು ಇದ್ದಾರೆ. ಅದೇ ರೀತಿಯಲ್ಲಿ ಹಳ್ಳಿಗಾಡಿನ ಜನರ ಜೀವನ ಮಟ್ಟದ ರೀತಿಯನ್ನು ನಾವು ನೋಡಬೇಕಾಗಿದೆ. ಇವತ್ತು ನೂರಕ್ಕೆ 75 ಜನರು ಹಳ್ಳಿಗಳಲ್ಲಿ ಬಡವರಿದ್ದಾರೆ. ಇವತ್ತು ಅವರ ಸ್ಥಿತಿಗತಿ ಏನಿದೆ, ಎಂಬುದನ್ನು ಪರಿಶೀಲನೆ ಮಾಡಬೇಕು. ಇವತ್ತು ಒಟ್ಟು ಕಂದಾಯದ ಆದಾಯದಲ್ಲಿ ನೂರಕ್ಕೆ 30 ಭಾಗ ಅಭಿವೃದ್ಧಿ ಕಾರ್ಯಗಳಿಗೆ ಹೋಗುತ್ತದೆ, 30 ಭಾಗ ಪಂಚಾಯಿತಿಗಳಿಗೆ ಹೋಗುತ್ತದೆ ಇನ್ನು 10 ಭಾಗ ಹಿಂದುಳಿದಂತಹ ತಾಲ್ಲೂಕು ಅಭಿವೃದ್ಧಿಯ ಕೆಲಸಕಾರ್ಯಗಳಿಗೆ ಹೋಗುತ್ತದೆ. ಗ್ರಾಮೀಣ ಅಭಿವೃದ್ಧಿಗಳಿಗೆ 9 ಭಾಗದ ರೂಪಾಯಿ ಮತ್ತು ಇತರ ಕೆಲಸಗಳಿಗೆಂದು ಹೋಗುತ್ತದೆ. ಹೀಗೆ ನೂರಕ್ಕೆ 90 ಭಾಗ ವಿಲೇವಾರಿಯಾಗುತ್ತಿದೆ. ಈ ರೀತಿ ಎಲ್ಲಾ ದೃಷ್ಟಿಯಿಂದ ನಾವು ಹೆಚ್ಚಿಗೆ ಮಾಡತಕ್ಕದ್ದು ಅನಾವಶ್ಯಕವಾದರೂ, ಕೂಡ ಹಿಂದೆ ಇರತಕ್ಕಂತಹ ಕಂದಾಯ ಇರಲಿ ಎಂದು ನನ್ನ ಅಭಿಪ್ರಾಯ. ಇಷ್ಟು ಸಲಹೆಗಳನ್ನು ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಪರಮೇಶ್ವರಪ್ಪ. (ಹೊಳಲ್ಕೆರೆ).—ಮಾನ್ಯ ಅಧ್ಯಕ್ಷರೇ, 1968-69ನೇ ಸಾಲಿನ ಮುಂಗಡಪತ್ರವನ್ನು ಮಾನ್ಯ ಅರ್ಥಸಚಿವರು ಮಂಡಿಸಿದ್ದಾರೆ. ಅನೇಕ ಎದುರು ಪಕ್ಷದ ಮಾನ್ಯ ಸದಸ್ಯರುಗಳು ಬಹಳ ರೀತಿಯಿಂದ ಇದನ್ನು ಅನುಮೋದನೆ ಮಾಡಿದ್ದಾರೆ. ಅದರೆ, ನಾವಾದರೂ ಕೂಡ ಈ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು ಹೆಣ್ಣಿನ ಕಡೆಗೆ, ಗಂಡಿನ ಕಡೆಯವರು ಗಂಡಿನ ಕಡೆಗೆ ಎಂಬಂತೆ, ವಿರೋಧ ಪಕ್ಷದವರು ವಿರೋಧಿಸಲೇ ಬೇಕಾಗಿದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ ರೂರಲ್).—ನಿಮ್ಮ ಹೆಣ್ಣನ್ನು ನಮಗೆ ಕೊಟ್ಟು ಬಿಡಿ.

ಶ್ರೀ ಬಿ. ಪರಮೇಶ್ವರಪ್ಪ.—ನಾವು ಹೆಣ್ಣಿನ ಕಡೆಯವರೆಂದೇ ಇಟ್ಟುಕೊಳ್ಳಿ. ಆದರೆ ಇಂದು ಯಾವ ಒಂದು ಸದುದ್ದೇಶದಿಂದ ಈ ಹಳ್ಳಿಗಾಡಿನ ಅಭಿವೃದ್ಧಿಗಳನ್ನು ನಾವು ಮಾಡಬೇಕು, ಮತ್ತು ಮಾಡುತ್ತಿದ್ದೇವೆ ಎಂಬುದನ್ನು ನೋಡಬೇಕಾಗಿದೆ. ಸ್ವಾತಂತ್ರ್ಯದ ಮುನ್ನ ದೇಶದ ಆಡಳಿತ ವಹಿಸಿಕೊಳ್ಳುವ ಮುನ್ನ, ಹಳ್ಳಿಗಾಡಿಗೆ, ಪ್ರತಿಯೊಂದು ಹಳ್ಳಿಗೂ ಕೂಡ ವಿದ್ಯಾಭ್ಯಾಸ, ಹಳ್ಳಿಗಾಡಿನ ರಸ್ತೆ, ಕುಡಿಯುವ ನೀರಿನ ಬಾವಿ ಇವುಗಳನ್ನೆಲ್ಲಾ ಮಾಡುತ್ತೇವೆಂದು ವಚನ ಕೊಟ್ಟಂತಹ ಜನ ಇವತ್ತಿನ ವರೆಗೂ ಅದನ್ನು ಪೂರೈಸುವುದಕ್ಕೆ ಶಕ್ತಿ ಇಲ್ಲ, ಸಾಧ್ಯವಾಗಲಿಲ್ಲವೆಂದರೆ, ಎಷ್ಟು ಮಟ್ಟಿಗೆ ಇವರು ಕೊಟ್ಟ ವಚನವನ್ನು ಪಾಲಿಸಿ ಕೊಂಡು ಬರುತ್ತಾರೆಂಬುದು, ಇವರು ಹೇಳಿರತಕ್ಕ ಮುಂಗಡಪತ್ರದಲ್ಲಿ ನೋಡಿದರೆ ಗೊತ್ತಾಗುತ್ತದೆ. ಇದರಲ್ಲಿ ಇವರು ತಮ್ಮ ಮನಸ್ಸಿಗೆ ಎಷ್ಟು ಮಟ್ಟಿನ ನ್ಯಾಯ ರೀತಿಯಲ್ಲಿ ನಡೆದಿದ್ದಾರೆ ಎಂದು ತೋರಿಸುತ್ತದೆ. ಊರಿನಲ್ಲೆಲ್ಲಾ ಕುಡಿಯುವ ನೀರಿನ ಬಾವಿ ಮಾಡುತ್ತೇವೆಂದು ಹೇಳಿ ಇನ್ನೂ 2,700 ಹಳ್ಳಿಗಳಿಗೆ ಬಾವಿಗಳಾಗ ಬೇಕೆಂದು ಈಗ ಹೇಳುತ್ತಿದ್ದಾರೆ. ಇವತ್ತು ಸ್ವಾತಂತ್ರ್ಯ ಬಂದು 20 ವರ್ಷವಾಗಿರುವಾಗ, ಜನಸಂಖ್ಯೆ 40 ಕೋಟಿಗೆ ಏರಿರುವಾಗ ಹೆಚ್ಚಿನ ಬಾವಿಗಳನ್ನು ತೆಗೆಸಬೇಕು. ಇವರು ಬೇರೆ ಇನ್ನು ಯಾವುದು ಹೆಚ್ಚಿಗೆ ಕೊಡುವುದಕ್ಕೆ ಸಾಧ್ಯವಿದೆ? ಎರಡೂವರೆ ಸಾವಿರ ಹಳ್ಳಿಗಳಿಗೆ ಅವರಿಗೆ ಬೇಕಾದ ನೀರಿನ ಸೌಕರ್ಯವನ್ನು ಒದಗಿಸಲಾರದೆ ಇರುವಾಗ ಇವರು ಮುಂದೆ 50 ವರ್ಷವಾದರೂ ಯಾವುದನ್ನೂ ಕೊಡುವುದಕ್ಕಾಗುವುದಿಲ್ಲ. ಇವರು ಯಾವುದೇ ಬಹು ಮುಖ್ಯವಾಗಿರುವುದಕ್ಕೆ ಗಮನ ಹರಿಸಲಿಲ್ಲ, ಯಾವುದೇ ಹಳ್ಳಿಗಾಡಿನ ಜನರಿಗೆ ಇನ್ನೂ ಏನೂ ಅನುಕೂಲಗಳನ್ನು ಮಾಡಿಲ್ಲ ವೆಂದು ಹೇಳಬೇಕಾಗಿದೆ. ಅಲ್ಲಿ ಜನರಿಗೆ ಉಡಲು ಬಟ್ಟೆ ಇಲ್ಲ, ಇರಲು ಮನೆಯಿಲ್ಲ, ತಿನ್ನಲು ಆಹಾರವಿಲ್ಲ. ಇದನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಹೇಳಬಯಸು ತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ನೂರಕ್ಕೆ 20 ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಪ್ರೈಮರಿ ವಿದ್ಯಾಭ್ಯಾಸಕ್ಕೆ ಶಾಲೆಗಳನ್ನು ನಡೆಸಲು ದುಡ್ಡು ಇಲ್ಲವೆಂದು ಹೇಳುತ್ತಿದ್ದಾರೆ. ಅಂಥ ಹಳ್ಳಿಯ ಜನ ಶಾಲೆಗಳನ್ನು ಕೇಳಿದರೆ, ನೀವು ಜನರ ಕಂಟ್ರಿಬ್ಯೂಶನ್ ಕೇಳುತ್ತಿದ್ದೀರಿ. ಪಟ್ಟದಲ್ಲಿ ಏಕೆ ಆ ರೀತಿ ಕೇಳುವುದಿಲ್ಲ? ಪಟ್ಟಣಕ್ಕೂ ಹಳ್ಳಿಗೂ ಅಷ್ಟು ವ್ಯತ್ಯಾಸವೇನು? ಇದನ್ನು ಸರ್ಕಾರ ದವರು ಏಕೆ ವಿಮರ್ಶೆ ಮಾಡಿಲ್ಲ? ಪಟ್ಟಣದಲ್ಲಿರುವ ಜನರು ಎಲ್ಲಾ ಕಡು ಬಡವರೇನು? ಹಳ್ಳಿಗಾಡಿನ ಜನರ ಪರಿಸ್ಥಿತಿಯನ್ನು ವಿಚಾರಮಾಡಿದರೆ, ಅಲ್ಲಿ ಒಂದು ಪ್ರೈಮರಿ ಸ್ಕೂಲು ಕೂಡ ಕೊಟ್ಟಿಲ್ಲ, ಇದರಿಂದ ನಿಮಗೆ ಹಳ್ಳಿಗಾಡಿನ ಜನರಮೇಲೆ ಎಷ್ಟು ವಿಶ್ವಾಸ ಪ್ರೀತಿ ಇದೆ ಎಂದು ಕೇಳುತ್ತೇನೆ. ಇದಲ್ಲದೆ ಇವತ್ತು ಹಳ್ಳಿಗಾಡಿನ ರೂರಲ್ ಕಮ್ಯುನಿಕೇಶನ್ ರಸ್ತೆ, ಇವುಗಳನ್ನು ತೆಗೆದುಕೊಂಡರೂ ಅದರಲ್ಲೂ ಪಕ್ಷಪಾತವನ್ನು ತೋರಿಸುತ್ತಿದ್ದಾರೆ. ಇವತ್ತು ಕಾಂಗ್ರೆಸ್ಸಿನವರು ಇರತಕ್ಕ ಕ್ಷೇತ್ರದಲ್ಲಿ ರಸ್ತೆಗಳನ್ನು 100 ಮೈಲಿ ಮಾಡಿದ್ದೀರಿ. ಅದೇ ಸಂದರ್ಭದಲ್ಲಿ, ಬೇರೆ ಕೆಲವು ಕ್ಷೇತ್ರದಲ್ಲಿ 15-20 ಮೈಲಿ ಮಾತ್ರ ಮಾಡಲಾಗಿದೆ. ಇಂಥ ತಾರತಮ್ಯದಿಂದ ಆಡಳಿತ ನಡೆಸುವುದಾದರೆ, ಎಷ್ಟು ದಿವಸ ನಡೆದೀತು? ನಾನು ಏನೂ ಸುಳ್ಳು ಹೇಳುತ್ತಿಲ್ಲ. ಇದನ್ನು ಯಾರಾದರೂ, ಚ್ಯಾಲೆಂಜ್ ಮಾಡುವುದಾದರೆ ಮಾಡಬಹುದು. ನಾನು ಚಿತ್ರದುರ್ಗದಿಂದ ಬಂದವನು. ಅಲ್ಲಿ ಚಿತ್ರದುರ್ಗದಲ್ಲಿ 80-90 ಮೈಲು ರಸ್ತೆಗಳು ಇದ್ದು, ಕೆಲವು ಕಡೆ ಕೇವಲ 25-30 ಮೈಲಿ ಇರತಕ್ಕದ್ದನ್ನು ಚ್ಯಾಲೆಂಜ್ ಮಾಡಿ ತೋರಿಸಿ ಕೊಡುತ್ತೇನೆ. ಈ ರೀತಿಯಲ್ಲಿ ಒಂದು ಪಕ್ಷ ಮನೋಭಾವದಿಂದ ಆಡಳಿತ ಕೈಗೆ ಸಿಕ್ಕಿದೆ ಎಂದು ದುರ್ವ್ಯವಹಾರ ನಡೆಸಿದರೆ, ಇದನ್ನು ಜನರು ಸಹ ಕಣ್ಣು ಬಿಟ್ಟು ನೋಡುತ್ತಿದ್ದಾರೆ. ಇವರಿಗೆ ಕಾಲಸನ್ನಿಹಿತವಾಗಿದೆ.

ಇದಲ್ಲದೆ ಇವತ್ತು ಲೆವಿ ಪದ್ಧತಿ ಜಾರಿಗೆ ತಂದಿದ್ದಾರೆ. ಇವತ್ತು 25 ಪರಸೆಂಟ್ ಲೆವಿ ಕೊಟ್ಟು ಉಳಿದಿರತಕ್ಕದ್ದನ್ನು ಮಾರ್ಕೆಟ್ಟಿಗೆ ಕೊಡಬಹುದೆಂಬ ಪದ್ಧತಿ ಇದ್ದರೂ ಅಧಿಕಾರಿಗಳ ಕಿರುಕುಳ ಹೇಳತೀರದು. ಮಾರ್ಕೆಟ್ಟಿಗೆ ಮಾರಾಟಮಾಡಬೇಕೆಂದು ಹೋದಾಗ ಅದಕ್ಕೆ ಅನೇಕ ಅಧಿಕಾರಿಗಳು

(ಶ್ರೀ ಬಿ. ಪರಮೇಶ್ವರಪ್ಪ)

ಕಿರುಕುಳ ಕೊಡುತ್ತಿದ್ದಾರೆ. ಇದನ್ನೆಲ್ಲಾ ಒಂದು ವಿಮರ್ಶಾತ್ಮಕ ದೃಷ್ಟಿಯಿಂದ, ಎಲ್ಲರಿಗೂ ತೊಂದರೆಯಾಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು. ಆದರೆ ಇವತ್ತು ಅವರು ಜನರಿಗೆ ಕಿರುಕುಳವನ್ನು ಕೊಡುತ್ತಿದ್ದಾರೆ. ಅದೇ ರೀತಿ ಇವತ್ತು ಕ್ಷಾಮ ಪರಿಹಾರ ಕಾಮಗಾರಿಗಳನ್ನು ಶುರು ಮಾಡಿದರು, ಮತ್ತು ಅದಕ್ಕೆ ಲಕ್ಷಾಂತರ ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಇವರು ಬಾಯಿಂದ, ಕೆಲಸ ಮಾಡಿಬಿಡಿ ಎಂದು ಹೇಳುತ್ತಾರೆ. ಆದರೆ ಹಣ ಬರುವಾಗ ನಾವು ಯಾವುದು ಮಾಡಿದ್ದೇವೆ, ಅದನ್ನು ಮಾಡಬಾರದು, ಗೌರ್ನಮೆಂಟ್ ಆರ್ಡರ್ ಬಂದಿದೆ ಎಂದು ಹೇಳುತ್ತಾರೆ. ಕ್ಷಾಮ ಬಂದು ಮೂರು ತಿಂಗಳಾದರೂ, ಇನ್‌ಕ್ವಾಯರಿ ಮಾಡುವುದಕ್ಕೆ ಮೂರು ತಿಂಗಳು, ಮತ್ತು ಅಧಿಕಾರಿಗಳ ರಿಪೋರ್ಟು ಬಂದ ಮೇಲೆ ಮೂರು ತಿಂಗಳು. ಅಂತೂ ಇವರ ಹಣ ಮಂಜೂರು ಆಗಿ ಬರುವಾಗ ಅಲ್ಲಿ ಮಳೆ ಪ್ರಾರಂಭವಾಗುತ್ತದೆ. ಇದರಿಂದ ಇವರು ಎಷ್ಟು ಮಟ್ಟಿಗೆ ಜನರಿಗೆ ಅನುಕೂಲ ಮಾಡುತ್ತಾರೆ, ಇದನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಯಾವ ರೀತಿಯಲ್ಲಿ ಮಾಡಿದ್ದಾರೆಂದು ಬೇಕಾದರೆ ಚ್ಯಾಲೆಂಜ್ ಕೊಡುತ್ತೇನೆ. ಇದಲ್ಲದೆ ಇರಿಗೇಶನ್ ವಿಚಾರ. ಅನೇಕ ಬಾವಿಗಳನ್ನು ತೋಡಿಸಿದ್ದೇವೆ, ಬೇಕಾದಷ್ಟು ಕರೆಂಟ್ ಇದೆ. ಪರರಾಜ್ಯಗಳಿಗೂ ಕೊಡವುವಷ್ಟು ಕರೆಂಟ್ ಇದೆ ಎಂದು ಹೇಳುತ್ತಿದ್ದಾರೆ. ಇವತ್ತು ಎಷ್ಟು ಜನ ಪಂಪ್ ಸೆಟ್ಟುಗಳನ್ನು ತಂದು ಮನೆಯಲ್ಲಿ ಇಟ್ಟುಕೊಂಡು ಕರೆಂಟ್‌ಗಾಗಿ ಕಾಯುತ್ತಿದ್ದಾರೆ. ಇವತ್ತು ಏನು ಕೇಳಿದರೂ, ಕಂಬಗಳಿಲ್ಲ, ಟ್ರಾನ್ಸ್‌ಫಾರ್ಮರ್ಸ್ ಇಲ್ಲ ಎಂದು ಹೇಳುತ್ತಿದ್ದಾರೆ. ಹೀಗಿರುವಾಗ ಗೋವ, ಮದ್ರಾಸ್ ರಾಜ್ಯಗಳಿಗೆ ಕೊಡತಕ್ಕ ಸನ್ನಿವೇಶ ಏನಿತ್ತು? ನಮ್ಮ ಉಪಯೋಗಕ್ಕೆ ಇಲ್ಲದಿದ್ದದ್ದು ಬೇರೆಯವರಿಗೆ ಎಷ್ಟು ಕೊಟ್ಟರೆ ಏನು ? ಅದರಿಂದ ನಮಗೇನು ಬಂತು ಭಾಗ್ಯ? ಇದೆಲ್ಲಾ ಪಟ್ಟಣದ ಜನರಿಗೆ ಸೌಲತ್ತು ಆಗಿ ಮಾಡುವ ರೀತಿಯಲ್ಲಿ ಮಾಡುತ್ತಿದ್ದಾರೆ. ಇದರಿಂದ ನಿಜವಾಗಿಯೂ ರೈತನ, ಹಳ್ಳಿಗಾಡಿನ ಜನರ ಅಭಿವೃದ್ಧಿ, ನಮ್ಮ ಆಹಾರದ ಸಮಸ್ಯೆ ಯಾವುದೂ ಪರಿಹಾರವಾಗಲಾರದು.

ಇನ್ನು ಕೈಗಾರಿಕೆಯ ಇಲಾಖೆಯಲ್ಲಿ ಇಂಡಸ್ಟ್ರಿಯಲ್ ಸುಪರ್‌ವೈಸರ್ ಎಂದು ಇದ್ದಾರೆ ಇವರಿಗೆ ಬರೀ ಸುಮ್ಮನೆ ಸಂಬಳ. ಏನೂ ಕೆಲಸವಿಲ್ಲ. ಸರ್. ವಿಶ್ವೇಶ್ವರಯ್ಯನವರ ಪೂಜೆ ಮಾಡುತ್ತಾರೆ ಹೊರತು, ಅವರ ತತ್ವ ಏನಿದೆ, ಅವರ ನೀತಿ ಏನಿದೆ, ಮತ್ತು ಉದ್ದೇಶ ಏನಿದೆ ಅದನ್ನು ಸಾಧನೆ ಮಾಡುತ್ತಿಲ್ಲ. ಹಳ್ಳಿಗಾಡಿನಲ್ಲಿ ಕೈಗಾರಿಕೆಗಳ ಹೆಸರೇ ಇಲ್ಲ. ಅಲ್ಲಿ ಏನಾದರೂ ಮಾಡಬೇಕೆಂಬ ಮನೋಭಾವ ಯಾರಿಗೂ ಇಲ್ಲ. ಇಂಥ ಪರಿಸ್ಥಿತಿ ಇರುವಾಗ ಹಳ್ಳಿಗಾಡಿನ ಅಭಿವೃದ್ಧಿಯನ್ನಾದರೂ ಸಾಧಿಸುವುದು ಹೇಗೆ ? ಇವತ್ತು ಅನೇಕ ಜನರು ಪಟ್ಟಣದಲ್ಲಿ ಪಡೆಯುತ್ತಿರುವ ಸೌಕರ್ಯ ಹಳ್ಳಿಗಾಡಿನಲ್ಲಿ ಇಲ್ಲ. ಇವತ್ತು ಹಳ್ಳಿಯಲ್ಲಿ ಬೆಳೆ ಬೆಳೆದರೆ ತಾನೆ ಪಟ್ಟಣದವರು ತಿನ್ನುವುದು, ಹಳ್ಳಿಗಾಡಿನ ಜನರು ಇಲ್ಲದಿದ್ದರೆ ಪಟ್ಟಣದ ಜನ ಏನು ಮಣ್ಣು ತಿನ್ನುತ್ತಾರೆಯೇ ? ಅವನು ದುಡಿಯಬೇಕು, ಕಷ್ಟ ಪಡಬೇಕು, ಆಗ ಮಾತ್ರ ಪಟ್ಟಣದಲ್ಲಿರುವವರಿಗೆ ರವಾನೆ ಮಾಡಬಹುದು. ಇದೂ ಅಲ್ಲದೆ ಸೇಲ್ಸ್ ಟ್ಯಾಕ್ಸ್ ಹಾಗೂ ಇನ್ನಿತರ ಟ್ಯಾಕ್ಸುಗಳನ್ನು ಪಟ್ಟಣಗಳವರ ಮೇಲೆ ಹಾಗೂ ಹಳ್ಳಿಗಾಡಿನ ಜನರ ಮೇಲೆ ಹೊರಿಸುತ್ತಿರುವುದರಿಂದ ಎಲ್ಲರಿಗೂ ಸರಕಾರ ಸವಲತ್ತುಗಳನ್ನು ಒದಗಿಸಿಕೊಡಬೇಕು. ಈಗ ನೋಡಿದರೆ ಬರೀ ಪಟ್ಟಣದಲ್ಲಿರುವವರಿಗೇ ಹೆಚ್ಚು ಸೌಲಭ್ಯಗಳನ್ನು ಕೊಡುತ್ತಿರುವುದು ಕಾಣಬರುತ್ತಿದೆ. ಹಳ್ಳಿಗಾಡಿನ ಜನರ ಬಗ್ಗೆ ಯಾವ ಸವಲತ್ತುಗಳನ್ನೂ ಕೊಡುತ್ತಿಲ್ಲ. ಹಳ್ಳಿಗಾಡಿನಲ್ಲಿರುವ ಪಂಚಾಯಿತಿಗಳಿಗೆ ಹೆಚ್ಚಿನ ಸವಲತ್ತುಗಳನ್ನೂ ಒದಗಿಸಿ ಕೊಟ್ಟರೆ ಅವರಾದರೂ ಸ್ವಲ್ಪ ಹಳ್ಳಿಗಾಡಿನ ಜನಕ್ಕೆ ಅನುಕೂಲಮಾಡಬಹುದು. ಹಳ್ಳಿಗಾಡಿನ ಜನರೂ ಕೂಡ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಭಾಗಕ್ಕೆ ನೀರಾವರಿ ಸೌಕರ್ಯ ಸಿಕ್ಕಿ ಹಳ್ಳಿಗಾಡಿನ ಜನತೆಗೆ ಅನುಕೂಲವಾಗುತ್ತದೆ ಎಂದು ಭಾವಿಸಿದ್ದರು. ಆದರೆ ಇಂದು ಎಲ್ಲಿ ನೋಡಿದರೂ ಕೂಡ ಯಾವ ಹಳ್ಳಿಯವರಿಗಾಗಲೀ ಸರಕಾರದಿಂದ ನಿರೀಕ್ಷಿಸಿದಷ್ಟು ಅನುಕೂಲಗಳು ಸಿಗುತ್ತಿಲ್ಲ. ಹೀಗೆ ಮಾಡಬಾರದು. ಹಳ್ಳಿಗಾಡಿನ ಜನಕ್ಕೆ ಎಲ್ಲಿ ವಿದ್ಯುಚ್ಛಕ್ತಿ ಕೇಳುತ್ತಾರೋ ಅಲ್ಲಿಗೆ ಕೊಡುವುದು ಮತ್ತು ನೀರಿನ ಸೌಕರ್ಯ ಒದಗಿಸಿಕೊಡುವುದು ಇತ್ಯಾದಿ ಕೆಲಸಗಳನ್ನು ಬೇಗನೆ ಮಾಡಿಕೊಡಬೇಕು. ಏನೋ ವಿರೋಧಪಕ್ಷದವರು ಇಲ್ಲಿ ಬಂದು ಸುಮ್ಮನೆ ಹೇಳುತ್ತಾರೆ ಎಂದು ತಿಳಿಯಬಾರದು. ಇಂದು ಹಳ್ಳಿಗಾಡಿನಲ್ಲಿರುವ ಜನ ಈಗ ಇರುವ ಕಾಂಗ್ರೆಸ್ ರಾಜ್ಯದ ಆಡಳಿತದಲ್ಲಿ ಬೇಸತ್ತು ಇವರಿಂದ ಸರಿಯಾದ ಕೆಲಸವಾಗುವುದಿಲ್ಲವೆಂದು ತಿಳಿದು ಇಂತಹವರಿಗೆ ಚುನಾವಣೆಯಲ್ಲಿ ನಾವು ಏಕೆ ಆರಿಸಬೇಕು ಇದಕ್ಕೆ ಬದಲಾಗಿ ಸರಿಯಾಗಿ ಕೆಲಸಮಾಡುವಂತಹ ಜನರನ್ನು ಚುನಾಯಿಸಿ ಕಳುಹಿಸಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಹಳ್ಳಿಗಾಡಿನ ಜನ ಉಳಿಯಬೇಕು ಎನ್ನುವ ಆಸೆ ತಮಗೆ ಇದ್ದರೆ ಹಳ್ಳಿಗಾಡಿನ ಪರಿಸ್ಥಿತಿ ಅರಿತು ಅಲ್ಲಿರುವ ಲೋಪದೋಷಗಳನ್ನು ಅರಿತುಕೊಂಡು ಕೆಲಸ ಮಾಡ

ಬೇಕು. ಆದರೆ ಇಂದು ಇಟ್ಟಿರುವ ಈ ಬಜೆಟ್ಟಿನಲ್ಲಿ ಈ ಹಳ್ಳಿಗಾಡಿನ ಜನತೆಗೆ ಅನುಕೂಲವಾಗುವಂತೆ ಹಣಕಾಸುಗಳನ್ನು ಒದಗಿಸಿಲ್ಲ ಎಂದು ವಿಷಾದದಿಂದ ಇಲ್ಲಿ ಹೇಳಿ ವಿರೋಧಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಅರ್ಥ ಮಂತ್ರಿಗಳು ಮಂಡಿಸಿರುವ ಆಯುವ್ಯಯದ ಅಂದಾಜು ಪತ್ರಗಳ ಮೇಲೆ ಕೆಲವು ಅಂಶಗಳ ಮೇಲೆ ಮಾತನಾಡುತ್ತಾ ಸರಕಾರದವರು ಏನು ಒಂದು ತಾರತಮ್ಯ ಮಾಡಿದ್ದಾರೆ ಎನ್ನುವುದನ್ನು ಇಲ್ಲಿ ಹೇಳಿ ಪುಷ್ಟೀಕರಿಸಿ ಹೇಳಬೇಕೆಂಬುದು ನನ್ನ ಅಭಿಪ್ರಾಯ.

ಸ್ವಾಮಿ, ಈ ದೇಶದ ಆಯುವ್ಯಯದ ಅಂದಾಜಿನ ಮೇಲೆ ಭಾಷಣವನ್ನು ಮಾಡುವಾಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು 11.98 ಕೋಟಿ ರೂಪಾಯಿಗಳ ಉಳಿತಾಯವಾದ ಒಂದು ಬಜೆಟ್ಟನ್ನು ಇಲ್ಲಿ ಇಟ್ಟಿದ್ದಾರೆ. ಮತ್ತು ಒಂದು ವಿಷಯವನ್ನು ಇಲ್ಲಿ ಸ್ವಾಗತ ಮಾಡಬೇಕಾಗಿದೆ. ಅದು ಎನ್. ಜಿ. ಒ. ಗಳಿಗೆ ಹೆಚ್ಚುವರಿ ಡಿ. ಎ. ಕೊಟ್ಟಿರುವುದು ನಿಜಕ್ಕೂ ಬಹಳ ಸಂತೋಷದ ಸಂಗತಿ. ಇದರ ಬಗ್ಗೆ ಅವರೂ ಕೂಡ ಕನಿಕರವನ್ನು ತೋರಿಸಿರುವುದಕ್ಕಾಗಿ ನಾನು ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಕೆಲವೊಂದು ಅಂಶಗಳನ್ನು ಇದರಲ್ಲಿ ನೋಡುವಾಗ ನಮಗೆ ಒಂದು ತರಹದ ದುಃಖವಾಗುತ್ತದೆ. ಮತ್ತು ಸಮಗ್ರವಾದ ವ್ಯವಸಾಯ ಅಭಿವೃದ್ಧಿಗಾಗಿ ಇನ್ನೂ ಹೆಚ್ಚು ಹಣವನ್ನು ಒದಗಿಸಿದ್ದ ಪಕ್ಷದಲ್ಲಿ ನಾನು ಬಹಳ ಸಂತೋಷ ಪಡುತ್ತಿದ್ದೆ. ಇವುಗಳಲ್ಲಿ ಒಂದೊಂದನ್ನೂ ನಾವು ವಿಮರ್ಶೆಮಾಡಿ ಇಲ್ಲಿ ನೋಡೋಣ. ಈ ದೇಶದಲ್ಲಿ ಲ್ಯಾಂಡ ರೆವೆನ್ಯೂ ತೆಗೆದುಹಾಕುತ್ತೇವೆ ಎನ್ನತಕ್ಕ ಒಂದು ಘೋಷಣೆಯನ್ನು ಮೊದಲು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದರು. ಆದರೆ ಇಂದು ಅವರೇ ಕಂದಾಯವನ್ನು ಒಂದಕ್ಕೆ ಎರಡರಷ್ಟು ಎರಡು ಇದ್ದುದನ್ನು ಮೂರರಷ್ಟು ಹೀಗೆ ಹಾಕಿ ಸಾಗುವಳಿ ಮಾಡುತ್ತಿರುವವರಿಗೆ ಅನಾನುಕೂಲವಾಗುವ ಹಾಗೆ ಕಂದಾಯವನ್ನು ಹಾಕುತ್ತಿದ್ದಾರೆ ಮತ್ತು ಕಂದಾಯದ ಹೊಂದಾಣಿಕೆಯನ್ನು ತೋರಿಸಿ ಇಂದು ಸರಕಾರದವರು 904.22 ಲಕ್ಷ ರೂಪಾಯಿಗಳ ರೆವೆನ್ಯೂ ತೋರಿಸಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ, ಬಡ ಜನಾಂಗಕ್ಕೆ ಸೇರಿದ ಈ ರೈತನ ಮೇಲೆ ಹೆಚ್ಚು ಹೊರೆ ಹೇರುತ್ತಿರುವುದೇ ಆಗಿದೆ ಅಲ್ಲದೆ ಇಂದು ರೈತ ಕಂದಾಯ ಕೊಡುವುದಕ್ಕೆ ಸಿದ್ಧನಿದ್ದಾನೆ ಎಂದು ಹೇಳುವುದು ಸರಿಯಲ್ಲ. ರೈತರು ಕಂದಾಯ ತೆಗೆದು ಹಾಕುವುದು ಬೇಡ ಎಂದು ಸರಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ ಮತ್ತು ಯಾರೂ ಕಂದಾಯವನ್ನು ಕೊಡುವುದಿಲ್ಲ ಎಂದು ಹೇಳುತ್ತಿಲ್ಲ ಎಂದು ಮಂತ್ರಿಗಳು ಸಮರ್ಥಿಸುತ್ತಾರೆ. ಇದರಲ್ಲೇ ಒಂದು ಕಡೆ ಹೀಗೆ ಹೇಳುತ್ತಾರೆ. ಪುಟ 23: ನಮ್ಮ ವ್ಯಾವಸಾಯಿಕ ಅರ್ಥ ವ್ಯವಸ್ಥೆ, ಅನುವಾಗುವವರೆಗೆ ಭೂ ಕಂದಾಯವನ್ನು ತೆಗೆದು ಹಾಕಕೂಡದೆಂದೂ ಸರಕಾರದವರು ತೀರ್ಮಾನಿಸಿದ್ದಾರೆ. ಹೆಚ್ಚಿನ ಹೊಣೆಗಳ ನಿರ್ವಹಣೆಗಾಗಿಯೇ ನಮ್ಮ ಸಂಪತ್ತಿ ಮೂಲಗಳೆಲ್ಲವೂ ವಿನಿಯೋಗವಾಗಿರುವುದರಿಂದ ಮುಂದಿನ ಅಭಿವೃದ್ಧಿ ಯೋಜನೆಗಳಿಗೆ ನಮ್ಮಲ್ಲಿ ಹಣವಿಲ್ಲವಾಗಿದೆ. ಆದುದರಿಂದ ಜನರಿಗೆ ಹೆಚ್ಚಿನ ತೊಂದರೆಯುಂಟಾಗದಂತೆ ಬೇರೆ ಮೂಲಗಳಿಂದ ಹಣವೊದಗಿಸಿಕೊಳ್ಳಲು ಸಾಧ್ಯವಾಗುವವರೆಗೆ ಈಗಿನ ಆದಾಯ ಮೂಲವನ್ನು ಕೈಬಿಡುವುದು ಸುಲಭವಲ್ಲ. ಎಂದು ಈ ರೀತಿಯಾಗಿ ಮಾನ್ಯ ಹಣಕಾಸಿನ ಮಂತ್ರಿಗಳು ಅವರ ಭಾಷಣದಲ್ಲಿ ಹೇಳುವುದು ಸರಿಯೇ ಎಂದು ನಾನು ಕೇಳುತ್ತೇನೆ. ಫ್ಯಾಮಿನ್ ಎನ್ನತಕ್ಕದ್ದು ಎಲ್ಲ ಕಡೆಯಲ್ಲಿಯೂ ಇದೆ ಎಂದು ಮಂತ್ರಿಗಳೇ ಹೇಳಿದ್ದಾರೆ. ಎಲ್ಲೆಲ್ಲಿ ತಾವು ಪರಿಹಾರದ ಕೆಲಸಗಳನ್ನು ಮಾಡಬೇಕೆಂದು ಇರುತ್ತೀರೋ ಅದರಂತೆ ಅವನ್ನು ಕೂಡಲೇ ಜಾರಿಗೆ ಬರುವಂತೆ ಮಾಡಬೇಕು ಮತ್ತು ಹಳ್ಳಿಗಾಡಿನ ಜನರ ಕಡೆಗೆ ಸ್ವಲ್ಪ ಹೆಚ್ಚಿನ ಆಸಕ್ತಿ ವಹಿಸಬೇಕು. ಹಳ್ಳಿಗಾಡಿನ ಜನರ ಕಷ್ಟ ನಷ್ಟಗಳೇನು ಎಂದು ನಾವು ಇಲ್ಲಿಗೆ ಬಂದು ಸರ್ಕಾರದ ಮುಂದೆ ಹೇಳಿದರೂ ಕೂಡ ಅಂತಹ ಸ್ಥಳಗಳಲ್ಲಿ ಅಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಿ ಕೊಡುತ್ತಿಲ್ಲ. ಮಳೆಗಾಲದಲ್ಲಿ ಕೆಲವು ಕಡೆಗಳಲ್ಲಿ ಮಳೆಯೇ ಬಾರದೇ ಹೋದುದರಿಂದ ಕೆಲವು ಕ್ಷೇತ್ರಗಳಲ್ಲಿ ಹಾಗೂ ಕೆಲವು ತಾಲ್ಲೂಕುಗಳಲ್ಲಿ ಕ್ಷಾಮ ಪರಿಹಾರದ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದರೂ ಕೂಡ, ಅಲ್ಲಿ ಯಾವ ಕೆಲಸಗಳನ್ನೂ ತೆಗೆದುಕೊಂಡಿಲ್ಲ. ಉದಾಹರಣೆಯಾಗಿ ಹೇಳಬೇಕಾದರೆ, ನಮ್ಮ ತಾಲ್ಲೂಕಿನಲ್ಲೇ ಮಳೆ ಬಾರದೆ ಇಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಲ್ಲಿ ಒತ್ತಾಯ ಮಾಡಿದರೂ ಕೂಡ ಸರ್ಕಾರದವರು ದುಡ್ಡು ಕೊಟ್ಟಿಲ್ಲ ಅದರಿಂದಾಗಿ ಇಲ್ಲಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಸರಕಾರದವರು ಕೂಡ ಇದರ ಕಡೆಗೆ ವಿಚಾರ ಮಾಡುತ್ತಿಲ್ಲ. ಹೀಗೆ ಎಷ್ಟೋ ಕಡೆಗಳಲ್ಲಿರುವ ಗ್ರಾಮಗಳಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡಿಲ್ಲ. ಉದಾಹರಣೆಯಾಗಿ ಟ್ಯಾಂಕ್ ಬೆಡ್‌ಗಳಲ್ಲಿ ಬಾವಿಗಳನ್ನು ತೆಗೆಯುವ ಇಂತಹ ಕಾಮಗಾರಿ ಕೆಲಸಗಳನ್ನು ಬೇಗನೇ ಮಾಡಬೇಕೆಂದು ತೆಗೆದುಕೊಳ್ಳುತ್ತಿದ್ದಾರೆ. ಏಕೆಂದರೆ ಂದ ಅವರಿಗೆ ಹೆಚ್ಚು ಆದಾಯ ಬರುತ್ತದೆ

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ಎಂದು ಇಂತಹ ಕೆಲಸಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಈಗಾಗಲೇ ಒಬ್ಬರು ಮಾನ್ಯ ಸದಸ್ಯರು ಇಲ್ಲಿ ಹೇಳಿದ ಹಾಗೆ ರೋಡ್ ಕಾಮಗಾರಿಗಳನ್ನು ಏಕೆ ತೆಗೆದುಕೊಳ್ಳುತ್ತಿಲ್ಲಾ ಎನ್ನುವುದು ನಮಗಲ್ಲದೆ ತಮಗೂ ಗೊತ್ತಾಗುತ್ತದೆ. ಇದನ್ನು ಯಾವ ರೀತಿ ಮಾಡುತ್ತಿದ್ದಾರೆ ಎಂದರೆ ಕೆಲವು ಕಡೆಗಳಲ್ಲಿ ರೋಡುಗಳ ಕೆಲಸ ನಡೆಯುತ್ತಿರುತ್ತದೆ. ಇನ್ನು ಕೆಲವು ಕಡೆ ಹಳ್ಳಿಗಳಿಗೆ ರಸ್ತೆಗಳನ್ನು ಮಾಡಬೇಕು ಎನ್ನುವ ಅವಶ್ಯಕತೆ ಇದ್ದರೂ ಅಂತಹ ರೋಡು ಕೆಲಸಗಳನ್ನು ಮಂಜೂರು ಮಾಡಕೂಡದು ಎಂದು ಸರಕಾರದ ಕಡೆಯಿಂದ ಸರ್ಕ್ಯುಲರುಗಳು ಬರುತ್ತಿವೆ. ಎಲ್ಲಿ ಟ್ಯಾಂಕುಗಳ ರಿಪೇರಿ ಕೆಲಸಗಳಾಗಬೇಕು ಅಲ್ಲಿ ಯಾವ ತಡೆಯೂ ಇಲ್ಲದೆ ಅವುಗಳನ್ನು ಮಾಡುತ್ತಿರಬೇಕು. ಏಕೆಂದರೆ ಇದರಿಂದ ಬಹಳ ಜನಗಳಿಗೆ ಹೆಚ್ಚು ರೀತಿಯ ಉಪಯೋಗವಲ್ಲದೆ ಆದಾಯವೂ ಬರುತ್ತದೆ. ಹಳ್ಳಿಗಾಡಿನಲ್ಲಿ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಲು ಸರಿಯಾದ ರಸ್ತೆಗಳೇ ಇಲ್ಲವೆ ಜನ ಕಷ್ಟಪಡುತ್ತಿದ್ದಾರೆ. ಉದಾಹರಣೆಯಾಗಿ ಹೇಳಬೇಕಾದರೆ, ನಮ್ಮ ತಾಲ್ಲೂಕಿನಲ್ಲೇ ಒಂದು ಹಳ್ಳಿಯಿಂದ ಟೌನಿಗೆ ಬರಬೇಕಾದರೆ ಸುಮಾರು ಒಂಬತ್ತು ಮೈಲಿಗಳಷ್ಟು ದೂರವಾಗುತ್ತದೆ. ಯಾವ ಕಡೆಯಿಂದ ಟೌನಿಗೆ ಬರಬೇಕಾದರೂ ಹಳ್ಳಿಯಿಂದ 9 ಮೈಲಿ ಬರಬೇಕಾಗುತ್ತದೆ. ಏಕೆಂದರೆ ಇಲ್ಲಿ ಸರಿಯಾದ ರಸ್ತೆ ಇಲ್ಲದುದೇ ಕಾರಣ. ಆದುದರಿಂದ ಕ್ಷಾಮ ಪರಿಹಾರದ ಕಾಮಗಾರಿಗಳನ್ನು ಮಾಡುವಾಗ ಇಂತಹ ರಸ್ತೆಗಳ ಕೆಲಸಕ್ಕೆ ಆದ್ಯತೆ ಕೊಟ್ಟು ಬೇಗನೆ ಈ ರಸ್ತೆಗಳ ಬೇಡಿಕೆಗಳನ್ನು ಪೂರೈಸಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಹಾಗೂ ಹಳ್ಳಿಯವರು ಅನೇಕ ಅರ್ಜಿಗಳನ್ನು ಕೊಟ್ಟಿದ್ದರೂ ಕೂಡ ಸರಕಾರ ಇದನ್ನು ಮಾಡಿಕೊಡುತ್ತಿಲ್ಲ. ಕಾರಣ ಗೊತ್ತಿಲ್ಲ. ಇದರಿಂದ ಸರಕಾರವನ್ನು ಕರ್ತವ್ಯದಲ್ಲಿ ಲೋಪಮಾಡಿದೆ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಸರಕಾರ ಎಲ್ಲವನ್ನೂ ಬರಿ ಬಾಯಿಮಾತಿನಲ್ಲಿ ಹೇಳುತ್ತಿದ್ದಾರೆಯೇ ವಿನಾ ಕಾರ್ಯತಃ ಏನನ್ನೂ ಮಾಡುತ್ತಿಲ್ಲ. ನೀರಾವರಿ ಕೆಲಸಗಳೇ ಆಗಲೀ ಬಾವಿಗಳೇ ಆಗಲೀ ಎಷ್ಟೋ ಹಳ್ಳಿಗಳಲ್ಲಿ ಮಾಡಿಲ್ಲ. ಸರಕಾರದಲ್ಲಿ ನಾನು ಸುಮಾರು ಮೂರು ವರ್ಷಗಳಿಂದಲೂ ನಮ್ಮ ತಾಲ್ಲೂಕಿನಲ್ಲಿ ಮಳೆ ಇಲ್ಲ ನಿಜವಾಗಿಯೂ ಜನಕ್ಕೆ ಬಹಳ ಕಷ್ಟವಾಗಿದೆ ಎಂದು ಹೇಳುತ್ತಲೇ ಬರುತ್ತಿದ್ದೇನೆ.

ಸ್ವಾಮಿ, ನಮ್ಮ ಕ್ಷೇತ್ರಕ್ಕೆ ಮಾನ್ಯ ವ್ಯವಸಾಯದ ಉಪಮಂತ್ರಿಗಳಾದ ಶ್ರೀಮಾನ್ ಪವಾರ್ ರವರು ಬಂದಿದ್ದಾಗ ನಮ್ಮ ಜನರ ಕಷ್ಟ ಪರಿಸ್ಥಿತಿಗಳನ್ನು ನೋಡಿ ತುಂಬಾ ಸಂಕಟಪಟ್ಟರು ಮತ್ತು ಈ ಭಾಗವನ್ನು ಸರಕಾರ ಇನ್ನೂ ಏಕೆ ಅಭಿವೃದ್ಧಿ ಮಾಡಿಲ್ಲ ಇದರ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ಕೊಡುತ್ತೇನೆ ಎಂದು ನೊಂದ ಮನಸ್ಸಿನಿಂದ ಹೇಳಿದರು. ಇನ್ನೂ ಏನೂ ಆಗಿಲ್ಲ. ಕಳೆದ ಜನವರಿ ತಿಂಗಳಲ್ಲಿ ಮಾನ್ಯ ರೆವೆನ್ಯೂ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದಿದ್ದರು. ಅವರೊಂದಿಗೂ ನಾವು ಅನೇಕ ವಿಷಯಗಳನ್ನು ಚರ್ಚೆ ಮಾಡಿದೆವು. ಆದರೂ ಕೂಡಾ ಇಲ್ಲಿ ರೈತಾಪಿ ಜನಕ್ಕೆ ಬಹಳ ತೊಂದರೆ ಇದೆ ಇದನ್ನು ಪರಿಶೀಲಿಸಬೇಕಾದುದು ಅಗತ್ಯ ಎಂದು ಹೇಳಿಬಂದರು. ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಕ್ಷಾಮ ಪರಿಹಾರದ ಕೆಲಸಗಳನ್ನು ಮಾಡುವುದಕ್ಕೆ ಒಂದು 50 ಸಾವಿರ ರೂಪಾಯಿಗಳಷ್ಟು ಹೆಚ್ಚು ಹಣಕೊಟ್ಟು ಕಾಮಗಾರಿಗಳನ್ನು ಮಾಡಿಸಿದರೆ ಇಲ್ಲಿನ ಕೂಲಿಕಾರರಿಗೆ ಕೆಲಸ ಸಿಗುತ್ತದೆ ಇದರಿಂದ ಸ್ವಲ್ಪವಾದರೂ ಬಡ ಜನಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದರೂ ಕೂಡ ಇದನ್ನು ಒಪ್ಪಿಕೊಂಡು ಇದುವರೆಗೂ ಅದರ ಮಾಸನೆಯೇ ಇಲ್ಲ. ಇನ್ನು ಯಾವ ಯಾವ ತರಹದ ಮಾತುಗಳಲ್ಲಿ ಸರಕಾರಕ್ಕೆ ಹೇಳಬೇಕೋ ನನಗಂತೂ ಹೇಳುವುದಕ್ಕೆ ಆಗುವುದಿಲ್ಲ. ಅಲ್ಲದೆ ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಎಲ್ಲೆಲ್ಲಿ ಯಾವ ರೀತಿಯಾಗಿ ಮಾತನಾಡಬೇಕು ಯಾವ ಮಾತುಗಳನ್ನು ಹೇಳಬೇಕು ಎನ್ನುವುದರ ಒಂದು ಟ್ಯಾಕ್‌ಟಿಕ್ಸ್ ಇವರಲ್ಲಿದೆ. ಅದರಂತೆ ಇವರು ಎಷ್ಟು ಮಟ್ಟಿಗೆ ಅಲ್ಲಿರುವ ಸದಸ್ಯರನ್ನು ಕನ್‌ವಿನ್ಸ್ ಮಾಡಬೇಕು ಆ ಟ್ಯಾಕ್‌ಟಿಕ್ಸ್ ಉಪಯೋಗಿಸಿ ಪ್ರತಿಯೊಂದು ಕಡೆಯಲ್ಲಿಯೂ ಒಂದೊಂದು ರೀತಿಯಾಗಿ ಹೇಳುತ್ತ ಬರುತ್ತಿದ್ದಾರೆ.

ಸ್ವಾಮಿ, 31-1-68 ರಲ್ಲಿ ರೆವೆನ್ಯೂ ಉಪಮಂತ್ರಿಗಳು ನಮ್ಮ ತಾಲ್ಲೂಕಿಗೆ ಭೇಟಿ ಕೊಟ್ಟಿದ್ದರು. ಆಗ ಇವರಲ್ಲ ನಾನು ಎಲ್ಲ ಹಳ್ಳಿ ಜನಗಳ ಕಷ್ಟಗಳನ್ನು ಅವರಿಗೆ ಸರಿಯಾಗಿ ಹೇಳಿ ಅವರಲ್ಲಿ ಮಾತನಾಡಬೇಕು ಎನ್ನುವ ಒಂದು ಉದ್ದೇಶ ಇಟ್ಟುಕೊಂಡು ಅವರನ್ನು ನೋಡಬೇಕೆಂದು ಟಿ. ಬಿ. ಬಳಿ ಕಾಯುತ್ತಿದ್ದೆ. ಅವರೇನೋ ಟಿ. ಬಿ. ಯೊಳಗೆ ಇದ್ದರು ಮತ್ತು ಕಾಂಗ್ರೆಸ್ಸು ಕಾರ್ಯಕರ್ತರೊಡನೆ ಎಲ್ಲರೂ ಸೇರಿಕೊಂಡು ಮಾತಾಡುತ್ತಲೇ ಇದ್ದರು. ನಾನು ಬಂದಿರುವುದು ಅವರಿಗೆ ಗೊತ್ತಾಗಿದ್ದರೂ ನನಗೆ ಮಾತಾಡಲು ಅವಕಾಶವೇ ಸಿಗಲಿಲ್ಲ. ನಾನೂ ಸುಮಾರು ಅರ್ಧಗಂಟೆ ಹೊರಗೆ ಕಾಯುತ್ತಲೇ ಇದ್ದೆ. ಆದರೆ ಅವರು ನೇರವಾಗಿ ಅರ್ಧಗಂಟೆಯಾದ ಮೇಲೆ ಅಲ್ಲಿರುವ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು ಬಂದರು, ಇದಾದ ಅರ್ಧ ಗಂಟೆಯ ನಂತರವೂ ನನ್ನನ್ನು

ನೋಡಿದರೂ ಒಂದು ಮಾತನ್ನೂ ಆಡಲಿಲ್ಲ. ಆ ಮೇಲೆ ನಾನೇ ಟಿ. ಬಿ. ಒಳಕ್ಕೆ ಹೋಗಿ ನೇರವಾಗಿ ಇವರಲ್ಲಿ ಮಾತನಾಡಬೇಕೆಂದು ಹೋದಾಗ ನನ್ನನ್ನು ಆಗ ನೋಡಿದಂತೆ ಮಾಡಿ, ಬನ್ನಿ ಕುಳಿತು ಕೊಳ್ಳಿ ಎಂದು ಹೇಳಿ ಒಂದು ಮಾತನ್ನೂ ಹೇಳಲಿಲ್ಲ. ಆದರೂ ನಾನು ಅವರಲ್ಲಿ ಸ್ವಾಮೀ, ನೀವು ನನ್ನನ್ನು ಮಾತಾಡಿಸಲೇ ಇಲ್ಲ You have completely neglected me ಎಂದು ಹೇಳಿದುದಕ್ಕೆ ಅವರು ಏನೂ ಹೇಳಲಿಲ್ಲ. ಹೀಗೇಕೆ ನನ್ನನ್ನು ಆ ತಾಲ್ಲೂಕಿನ ಪ್ರತಿನಿಧಿಯಾಗಿದ್ದರೂ ಕೂಡ ಏಕೆ ಸರಿಯಾಗಿ ಮಾತನಾಡಿಸಲಿಲ್ಲವೋ ನನಗೆ ಗೊತ್ತಾಗಲಿಲ್ಲ. ಬೆಳಿಗ್ಗೆ ಅವಕಾಶ ಸಿಗಲಿಲ್ಲ ಎಂದು ನಾನು ಮನೆಗೆ ಹೊರಟು ಹೋದೆ, ಮಧ್ಯಾಹ್ನವಾದರೂ ನೋಡೋಣ ಎಂದು. ಟಿ. ಬಿ. ಯಲ್ಲೇ ಅವರು ಸ್ವಲ್ಪ ಕಾಲ ಮಲಗಿದ್ದರು. ನಾನು ಮೂರು ಗಂಟೆಯ ವೇಳೆಯಲ್ಲಿ ಅವಕಾಶ ಸಿಗಬಹುದು, ಆಗ ನಮ್ಮ ಹಳ್ಳಿಗಾಡಿನ ಜನರ ಕಷ್ಟ ಸುಖಗಳನ್ನು ಇವರಿಗೆ ಹೇಳಬೇಕೆಂದು ಹೋಗಿದ್ದೆ. ನಾನು ಹೋಗಿದ್ದಾಗಲೇ ಅವರು 5 ನಿಮಿಷಗಳ ಕಾಲ ಅಲ್ಲಿರುವ ತಾಲ್ಲೂಕು ಆಫೀಸಿಗೆ ಹೋಗಿ ನೋಡಿ ಕೊಂಡು ವಾಪಸು ಬಂದರು. ಬರುವಾಗ ನಾನು ಬಾಗಿಲಲ್ಲಿ ಇದ್ದುದರಿಂದ ಅವರೂ ಡಿ. ಸಿ. ಜೊತೆಯಲ್ಲೇ ಅಲ್ಲಿಗೆ ಬಂದರು ಆಗ ನಾನು ಕಾಯುತ್ತಿದ್ದುದನ್ನು ನೋಡಿ ಒಳಕ್ಕೆ ಬನ್ನಿ ಎಂದು ನನ್ನನ್ನೂ ಕರೆದುಕೊಂಡು ಹೋದರು. ಆಗ ನಾನು ತಾಲ್ಲೂಕು ಆಫೀಸಿನಲ್ಲಿ ಏನೇನು ನಡೆಯುತ್ತಿದೆ ಅವನ್ನೆಲ್ಲಾ ಸರಿಯಾಗಿ ಪರಿಶೀಲನೆ ಮಾಡಿ ಬಂದಿರಾ ಎಂದು ಕೇಳಿದ್ದಕ್ಕೆ ಅವರು ಸಮಾಧಾನವಾಗಿ ಏನನ್ನೂ ಹೇಳಲಿಲ್ಲ. ಸ್ವಾಮಿ, ಲೆವಿಯಿಂದಾಗಿ ಬಹಳ ಜನ ಉಳುಮೆ ಮಾಡುವ ರೈತರಿಗೆ ತೊಂದರೆ ಯಾಗುತ್ತದೆ ಇದನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಹೇಳಿದುದಕ್ಕೆ ಇದರ ಬಗ್ಗೆ ಖಂಡಿತ ವಾಗಿಯೂ ಸರಕಾರ ವಿಚಾರ ಮಾಡುತ್ತಿದೆ ಎಂದು ಹೇಳಿ ಬಂದರು.

ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ತಾಲ್ಲೂಕು ಆಫೀಸಿನಲ್ಲಿ 1,200 ಮೇಲ್ಪಟ್ಟು ದರಖಾಸ್ತು ಅರ್ಜಿಗಳು ಇವೆ. ಇಷ್ಟು ಅರ್ಜಿಗಳು ಪೆಂಡಿಂಗ್ ಇದ್ದರೂ ಸಹ ಎಲ್ಲವನ್ನೂ ಸರಿಯಾಗಿ ಮಾಡುತ್ತೇವೆ ಎಂದು ಮಂತ್ರಿಗಳು ಹೇಳಿ ಬಂದರು. ಇಷ್ಟು ದಿವಸದಲ್ಲಿ ಮಾಡಿ ಮುಗಿಸು ವುದು ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತೇನೆ. ಟಿ.ಎ. ತೆಗೆದುಕೊಳ್ಳುವ ಉದ್ದೇಶ ಇಟ್ಟುಕೊಂಡು ಇವರು ಟೂರ್ ಪ್ರೋಗ್ರಾಮ್ ಹಾಕಿಕೊಂಡು ಕಾಂಗ್ರೆಸ್ ಕೆಲಸಕ್ಕಾಗಿ ಹೋಗುತ್ತಾರೆ ಎಂದು ಈ ಸಮಯದಲ್ಲಿ ಆಪಾದಿಸುತ್ತೇನೆ. ಮಂತ್ರಿಗಳು ಬರುತ್ತಾರೆ. ಸುಂದರ ವಾದ ಶಿಲಬಾಲಿಕೆಗಳನ್ನು ನೋಡುತ್ತಾರೆ. ಊಟ ಮಾಡಿಕೊಂಡು ಹೋಗುತ್ತಾರೆ. ಇಷ್ಟೇ ಇವರ ಕೆಲಸ. ಕೇವಲ ಕಾಂಗ್ರೆಸ್ ಪುಢಾರಿಗಳೊಡನೆ ಓಡಾಡುವುದು, ಜನರನ್ನು ಎತ್ತಿಕಟ್ಟುವುದು ಇವರ ಕೆಲಸವೇ ? ಸ್ವಾಮಿ, ಇವರು ಎಷ್ಟು ಹಳ್ಳಿಗಳಿಗೆ ಭೇಟಿ ಕೊಟ್ಟಿದ್ದಾರೆ, ಎಷ್ಟು ಕೇಸುಗಳನ್ನು ಪರಿ ಪೂರ್ಣ ಮಾಡಲು ತೀರ್ಮಾನ ಮಾಡಿದ್ದಾರೆ ಎಂದು ಕೇಳುತ್ತೇನೆ. ಈ ರೀತಿ ಕೆಲಸ ನಡೆದಿರುವುದ ರಿಂದ ಬಹಳ ಅನ್ಯಾಯವಾಗಿದೆ. ನಮ್ಮ ಕುಂದು ಕೊರತೆಗಳ ಬಗ್ಗೆ ಕಾಗದ ಬರೆದರೆ ಆಲ್‌ರೈಟ್ ಎಂದು ಹೇಳುತ್ತಾರೆ. ನಮ್ಮ ಕಾನ್‌ಸ್ಟಿಟ್ಯೂಯೆನ್ಸಿಗೆ ಬಂದರೆ ಅಲ್ಲಿಯ ಜನತೆಯ ಪ್ರತಿನಿಧಿಯಾದ ವಿಧಾನ ಸಭೆಯ ಸದಸ್ಯರಾದ ನಮ್ಮನ್ನು ಕರೆದುಕೊಂಡು ಹೋಗುವುದಿಲ್ಲ. ತಮ್ಮ ಪಕ್ಷದ ಬೇರೆ ಯವರನ್ನು ಕರೆದುಕೊಂಡು ಹೋಗುತ್ತಾರೆ, ಅಲ್ಲದೆ ನಮಗೆ ಅವಮಾನ ಮಾಡುತ್ತಾರೆ. ಈ ರೀತಿ ಆಚರಣೆ ಮಾಡತಕ್ಕಂಥಾದ್ದು ಮಂತ್ರಿಗಳೇ ಇರಲಿ ಮಹಾರಾಜರೇ ಇರಲಿ ಸರಿಯಲ್ಲ. ಈ ವಿಷಯ ವನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು.

ಸ್ವಾಮಿ, ಅಗ್ರಿಕಲ್ಚರ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಸರಕಾರದ ನೀತಿ..............

ಚೇರ್ಮನ್ ಅವರು.—ಆರ್ಡರ್, ಆರ್ಡರ್, ನಿಮಗೆ ಮಾತನಾಡಲು ಕೊಟ್ಟಿರುವ ಕಾಲ ಮುಗಿ ಯಿತು, ಭಾಷಣ ಮುಗಿಸಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಅವರು ತಮ್ಮ ಕ್ಷೇತ್ರದ ಪ್ರತಿನಿಧಿಯಾಗಿ ತಮ್ಮ ಕ್ಷೇತ್ರದಲ್ಲಿ ಏನೇನು ನಡೆಯುತ್ತಿದೆ ಅದನ್ನು ಹೇಳುತ್ತಿದ್ದಾರೆ. ಅವರಿಗೆ ಮಾತನಾಡಲು ಹೆಚ್ಚಿಗೆ ಕಾಲ ಕೊಡಿ. ಇದು ಒಂದು ದೊಡ್ಡ ರೋಗ, ಅರ್ಧ ಮಂತ್ರಿಗಳಿಗೂ ಅಂಟಿಕೊಂಡ ಹಾಗೆ ಕಾಣುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಅದು ಬಹಳ ಹಳೇ ರೋಗ. ಈ ರೋಗ ಇರುವುದು ದುರ್ದೈವ. ಇದು ಹಳೇ ರೋಗ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ವ್ಯವಸಾಯದ ಬಗ್ಗೆ ಹೇಳಬೇಕಾಗಿದೆ. ಸರಕಾರ ಏನು ಒಂದು ನೀತಿ ತಳೆದಿದ್ದಾರೋ ಅದಕ್ಕೆ ಅನುಗುಣವಾಗಿ ರೈತರಿಗೆ ಪಂಪಸೆಟ್ಸ್ ಒದಗಿಸಿ ದ್ದಾರೆಯೆ ? ಸಾಲ ಕೊಟ್ಟಿದ್ದಾರೆಯೇ ? ಆದರೆ ನನ್ನ ಕ್ಷೇತ್ರದಲ್ಲಿ...

ಚೇರ್ಮನ್ ಅವರು.—ಕಾಲ ಮುಗಿಯಿತು, ಭಾಷಣ ಮುಗಿಸಿ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಹಾಗಾದರೆ ಇಲ್ಲಿಗೇ ನನ್ನ ಭಾಷಣ ಮುಗಿಯಿತು.

ಶ್ರೀ ಯಂಕ ನಾಯಕ್ (ಹರಪನಹಳ್ಳಿ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಮಂತ್ರಿಗಳು ಮಂಡಿಸಿದ ಮುಂಗಡ ಪತ್ರಿಕೆಯನ್ನು ಸಮರ್ಥಿಸುತ್ತಾ ಕೆಲವು ಮಾತುಗಳನ್ನು ಹೇಳಲು ಬಯಸುತ್ತೇನೆ. ಈ ವರ್ಷದ ಉಳಿತಾಯದ ಬಜೆಟ್‌ನ್ನು ಅನುಮೋದಿಸಿ ನಮ್ಮ ಅರ್ಥಮಂತ್ರಿಗಳನ್ನು ಅಭಿನಂದಿಸುತ್ತ ನಾನು ಸ್ವಾಗತ ಮಾಡುತ್ತೇನೆ. ಈ ಸಮಯದಲ್ಲಿ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಆಗಬೇಕಾಗಿರುವ ಅಭಿವೃದ್ಧಿಕಾರ್ಯಗಳ ಬಗ್ಗೆ ಕೆಲವು ವಿಷಯ ಹೇಳಲು ಬಯಸುತ್ತೇನೆ. ಅನೇಕ ವರ್ಷಗಳಿಂದ ನಮ್ಮ ಹರಪನಹಳ್ಳಿ ಕೊಟ್ಟೂರ ಮಾರ್ಗ ರಚನೆ ನಡೆಯುತ್ತಿದೆ. ಈ ಕೆಲಸ ಪೂರ್ತಿ ಮಾಡುವುದಕ್ಕೆ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರ ತಕ್ಷಣ ಗಮನ ಕೊಟ್ಟು ಈ ಕೆಲಸ ಮಾಡಿದರೆ ಈ ತಾಲ್ಲೂಕಿನಲ್ಲಿ ಸಾವಿರಾರು ಜನರಿಗೆ ಲಕ್ಷಾಂತರ ವ್ಯಾಪಾರಸ್ಥರಿಗೆ ಬಹಳ ಅನುಕೂಲವಾಗುತ್ತದೆ. ಬಹಳ ದಿವಸದಿಂದ ಈ ಕೆಲಸ ನಡೆಯುತ್ತಿದೆ. ಇದರ ಬಗ್ಗೆ ನಮ್ಮ ಹಣ ಕಾಸಿನ ಮಂತ್ರಿಗಳು ಈ ಕೆಲಸವನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಲೇ ತೀರಬೇಕು ಎಂದು ಮುಖ್ಯ ಮಂತ್ರಿಗಳಿಗೂ ಸಹ ಮನವಿ ಮಾಡಿಕೊಳ್ಳುತ್ತೇನೆ.

ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆಯಲ್ಲಿ ಒಂದು ಕೈಗಾರಿಕೆ ಸ್ಥಾಪನೆ ಮಾಡಬೇಕು ಒಂದು ಉಕ್ಕಿನ ಕಾರ್ಖಾನೆ ಪ್ರಾರಂಭಿಸಬೇಕು ಎಂದು ಬಹಳ ದಿವಸದಿಂದ ಇರುವುದನ್ನು ತೀವ್ರ ಮಾಡಿಕೊಡಬೇಕು ಎಂದು ಕಳವಳಿಯಿಂದ ಕೇಳಿಕೊಳ್ಳುತ್ತೇನೆ. ಇದನ್ನು ಮಾಡಲೇಬೇಕು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ವಿಧಾನ ಪರಿಷತ್ತಿನ ಸದಸ್ಯರಾದ ಚನ್ನಬಸವಣ್ಣಗೌಡರು ಇದರ ಬಗ್ಗೆ ಬೇಕಾದಷ್ಟು ಹೇಳಿದ್ದಾರೆ ಮತ್ತು ವಿನಯ ಪೂರ್ವಕವಾಗಿ ಕೇಳಿಕೊಂಡಿದ್ದಾರೆ. ಮೊದಲನೆಯದಾಗಿ ಹೊಸಪೇಟೆಯಲ್ಲಿ ಒಂದು ಉಕ್ಕಿನ ಕಾರ್ಖಾನೆಯಾದರೆ ಅಲ್ಲಿ ಲಕ್ಷಾಂತರ ಜನರಿಗೆ ಕೆಲಸ ಸಿಕ್ಕುತ್ತದೆ ಮತ್ತು ಇದರಿಂದ ಜನರಿಗೆ ಅನುಕೂಲವಾಗುತ್ತದೆ. ಇದೊಂದು ಕಾರ್ಖಾನೆ ಹೊಸಪೇಟೆಯಲ್ಲಿ ಆದರೆ ಅದು ಒಳ್ಳೇ ಕೆಲಸವಾಗುತ್ತದೆ ಎಂದು ರಾಜ್ಯ ಸರಕಾರಕ್ಕೂ ಕೇಂದ್ರ ಸರಕಾರಕ್ಕೂ ಮನವಿ ಮಾಡಿಕೊಳ್ಳುತೇನೆ.

ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಹರಪನಹಳ್ಳಿ ತಾಲ್ಲೂಕು ಯಾವಾಗಲೂ ಬರಗಾಲ ಪ್ರದೇಶ. ಇಲ್ಲಿ ನೀರಾವರಿ ಇಲ್ಲದೆ ಅನನುಕೂಲವಾಗಿದೆ. ಕೆರೆಗಳು ಒಣಗಿ ನೀರು ಸಿಕ್ಕದಂತಾಗಿ ಬಹಳ ಅನನುಕೂಲವಾಗಿದೆ. ಹರಪನಹಳ್ಳಿ ತಾಲ್ಲೂಕಿಗೆ ಅರವತ್ತು ಸಾವಿರ ರೂಪಾಯಿ ನೀರಾವರಿಗಾಗಿ ಕೊಟ್ಟಿದ್ದಾರೆ. ಹಳ್ಳಿಕೇರಿ ವರೆಗೆ ಚಾನಲ್ ಹಾಕಿ ಕೆಲಸ ನಿಲ್ಲಿಸಿದ್ದಾರೆ. ಈ ಚಾನಲ್ ಕೆಲಸವನ್ನು ಮುಂದುವರಿಸಬೇಕು ಎಂದು ರಾಜ್ಯ ಸರಕಾರಕ್ಕೂ ಕೇಂದ್ರ ಸರಕಾರಕ್ಕೂ ಮನವಿ ಮಾಡಿಕೊಳ್ಳುತ್ತೇನೆ. ಇದನ್ನು ಎಡಹಳ್ಳಿ ಹರಪನಹಳ್ಳಿ ವರೆಗೆ ಮುಂದುವರಿಸಿದರೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವ ಇದೆ. ಇದನ್ನು ಕೂಡಲೇ ಪರಿಹಾರ ಮಾಡಬೇಕು. ಈ ಬಗ್ಗೆ ಹಿಂದೆ ಕೂಡ ಮಾನ್ಯ ಮುಖ್ಯ ಮಂತ್ರಿಗಳಿಗೆ ಮಾನ್ಯ ಹಣಕಾಸಿನ ಸಚಿವರಿಗೆ ಮನವಿ ಮಾಡಿಕೊಂಡಿದ್ದೇನೆ. ಇದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ ಮಾಡಿಸಿ ಕೊಡಬೇಕು. ಅರಸಿಕೆರೆ ಹುಚ್ಚಂಗಿದುರ್ಗ ಬಗ್ಗೆ ನಾನು ಹೇಳುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಇದನ್ನು ಮಾಡಿಸಿ ಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಹಳ್ಳಿಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಕೆಲಸವಾಗುವುದಿಲ್ಲ. ತಾವು ದೊಡ್ಡ ಮನಸ್ಸು ಮಾಡಿ ದೊಡ್ಡ ದೊಡ್ಡ ನಗರದಲ್ಲಿ ಈ ಕೆಲಸ ಮಾಡುತ್ತೀರಿ. ಆದರೆ ಹಳ್ಳಿಗಳ ಪರಿಸ್ಥಿತಿ ಏನಾಗಿದೆ, ಜನರ ಕಷ್ಟ ಏನು ಇದು ನಿಮಗೆ ಗೊತ್ತಾಗುವುದಿಲ್ಲ. ನಾವು ಹುಟ್ಟಿ ಬೆಳೆದದ್ದು ಹಳ್ಳಿಗಳಲ್ಲಿ. ಇವತ್ತಿಗೂ ಕೂಡ ನಾವು ರೈತರಾಗಿ ಕೆಲಸ ಮಾಡುತ್ತಿದ್ದೇವೆ. ಆದುದರಿಂದ ನಾವು ಹೇಳುವ ರೀತಿಯಲ್ಲಿ ಹಳ್ಳಿಗಳಲ್ಲಿ ತಾಲ್ಲೂಕ ಮಟ್ಟದಲ್ಲಿ ಯಾವ ಯಾವ ಕೆಲಸವಾಗಬೇಕೋ ಅವುಗಳನ್ನು ದಯಮಾಡಿ ಕೂಡಲೇ ಮಾಡಿಸಿ ಕೊಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಕುಡಿಯುವ ನೀರಿನ ಯೋಜನೆ ತಕ್ಷಣ ಮಾಡಿಕೊಡಬೇಕು ಎಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

6-00 P.M.

ಐದನೇಯದಾಗಿ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ರಸ್ತೆ ರಚನೆ ವಿಚಾರದಲ್ಲಿ ಬಹಳ ಅನ್ಯಾಯವಾಗುತ್ತಿದೆ. ಹಳ್ಳಿಗಳಲ್ಲಿ ಹೋಗಿ ಬರುವುದೇ ಸಾಧ್ಯವಿಲ್ಲ. ಯಾಕಂದರೆ, ರಸ್ತೆ ಇಲ್ಲ. ಕಳೆದ 15–20 ವರ್ಷಗಳಲ್ಲಿ ನಮ್ಮ ಹರಪನಹಳ್ಳಿ ತಾಲ್ಲೂಕಿನಲ್ಲಿ ಕೇವಲ ಒಂದು ನೂರು ಮೈಲು ಪಿ.ಡಬ್ಲ್ಯೂ.ಡಿ. ರಸ್ತೆಯಾಗಿದೆ. ಹಡಗಲಿಯಲ್ಲಿ 150 ಮೈಲಿ ಕೊಟ್ಟಿದ್ದೀರಿ. ಹರಪನಹಳ್ಳಿಗೆ ನೂರು ಮೈಲಿ ಅಷ್ಟೇ

ಕೊಟ್ಟದ್ದು ಬಹಳ ಅನ್ಯಾಯ. ಹರಿಹರ, ದಾವಣಗೆರೆ, ಜಗಳೂರು ಈ ಪ್ರದೇಶದಲ್ಲಿ ಹಳ್ಳಿಗಳಿಗೆ ಹೋಗಲು ರಸ್ತೆ ಮಾಡಿದ್ದೀರಿ. ಆದರೆ ಈ ವಿಚಾರದಲ್ಲಿ ಹರಪನಹಳ್ಳಿ ಬಹಳ ಕೆಳಮಟ್ಟದಲ್ಲಿವೆ. ಮುಖ್ಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ನಮ್ಮ ಊರಿಗೆ ಬಂದಾಗ್ಗೆ ದಯಮಾಡಿ ಇದಕ್ಕೆ ಗಮನ ಕೊಡಬೇಕು ಎಂದು ಕೇಳಿಕೊಂಡಿದ್ದೇವೆ. ಅದನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಆದುದರಿಂದ ಹರಪನ ಹಳ್ಳಿ ತಾಲ್ಲೂಕಿನಲ್ಲಿ ರಸ್ತೆ ಮಾಡಿಸುವ ಬಗ್ಗೆ ಸರಕಾರಕ್ಕೂ ಪಿ.ಡಬ್ಲ್ಯೂ.ಡಿ. ಮಂತ್ರಿಗಳಿಗೂ ಬಹಳ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಹೆಚ್ಚು ನಿಗಾ ವಹಿಸಿ ಹರಪನಹಳ್ಳಿ ತಾಲ್ಲೂಕಿನಲ್ಲಿ ರಸ್ತೆ ಕೆಲಸಗಳನ್ನು ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ಒಂದು ದಿವಸವೆಲ್ಲ ಬೇಕಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಎರಡು ರಸ್ತೆಗಳು ಮಾತ್ರ ಇವೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಯಾವ ರೀತಿ ರಸ್ತೆಗಳನ್ನು ಮಾಡಿದ್ದೀರೋ ಅದೇ ರೀತಿ ಹರಪನಹಳ್ಳಿ ತಾಲ್ಲೂಕಿನಲ್ಲಿಯೂ ವಿಶ್ವಾಸವಿಟ್ಟು ರಸ್ತೆ ಕೆಲಸಗಳನ್ನು ಮಾಡಿಸಬೇಕೆಂದು ಮನವಿ ಮಾಡಿ ತಮಗೆ ವಂದನೆಗಳನ್ನರ್ಪಿಸುತ್ತೇನೆ.

ಶಾಲಾ ಕಟ್ಟಡಗಳ ಬಗ್ಗೆ ನಮ್ಮ ಸ್ನೇಹಿತರು ಬಹಳ ಜನ ಹೇಳಿದ್ದಾರೆ. ಶಾಲಾ ಕಟ್ಟಡಗಳಿದ್ದರೆ ಉಪಾಧ್ಯಾಯರಿರುವುದಿಲ್ಲ, ಉಪಾಧ್ಯಾಯರಿದ್ದರೆ ಹುಡುಗರಿರುವುದಿಲ್ಲ. ಇಂಥ ಪರಿಸ್ಥಿತಿ ಇದೆ. ತಾಲ್ಲೂಕು ಬೋರ್ಡಿನವರು ಶಾಲಾ ಕಟ್ಟಡಗಳ ಬಗ್ಗೆಯಾಗಲೀ, ಉಪಾಧ್ಯಾಯರು ಇರುವುದಕ್ಕಾಗಲೀ ಕಟ್ಟಡಗಳನ್ನು ಕಟ್ಟಿಸುತ್ತಿಲ್ಲ. ಉಪಾಧ್ಯಾಯರುಗಳು ಇರುವುದಕ್ಕೆ ಸಹ ವಸತಿ ಸೌಕರ್ಯಗಳಿಲ್ಲ. ಇದರಿಂದ ಬಹಳ ಅನಾನುಕೂಲವಾಗಿದೆ. ವಿದ್ಯಾಭ್ಯಾಸ ಚೆನ್ನಾಗಿ ನಡೆಯಬೇಕಾದರೆ ಶಾಲಾ ಕಟ್ಟಗಳೂ ಮತ್ತು ಉಪಾಧ್ಯಾಯರೂ ವಾಸ ಮಾಡಲು ಕಟ್ಟಡಗಳೂ ಬೇಕಾಗಿರುವುದರಿಂದ ಇದರ ಕಡೆಗೆ ಗಮನ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿಯೂ ಮತ್ತು ಹಣಕಾಸಿನ ಮಂತ್ರಿಗಳಲ್ಲಿಯೂ ಮನವಿ ಮಾಡಿಕೊಂಡು ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

Mr. CHAIRMAN.—The House will now stand adjourned and meet tomorrow at one p.m.

The House adjourned at Five Minutes past Six of the Clock to meet again at One of the Clock on Friday, the 8th March 1968.